ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 22 ಭಾನುವಾರ 2022

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ
Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 36 | ಪುಟಗಳು: 10

ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

₹4

ದಕ್ಷ ಪಿಯು ಕಾಲೇಜು, ಮೈಸೂರು

CA 40, Near Belavadi Petrol Bunk, Hootagalli, Mysuru-570018
Phone: 0821-2404049/69, 8884492162/63
Email: info@dakshacollege.com www.dakshacollege.com

2022-23ರ ಪಿಯುಸಿ ಪ್ರವೇಶಾತಿ ಪ್ರಾರಂಭವಾಗಿದೆ

ಕಾಲೇಜ್ ಕೋಡ್: NN0280 (ಕರ್ನಾಟಕ ಸರ್ಕಾರದ ಮಾನ್ಯತೆ ಪಡೆದಿದೆ)



ಲಭ್ಯವಿರುವ ಕೋರ್ಸ್‌ಗಳು:

Science – PCMB and PCMCs
With integrated JEE|NEET|KCET

Commerce – EBACs and EBAS
With holistic development course

ಶ್ರೇಷ್ಠತೆಯ ಪ್ರತೀಕ ದಕ್ಷ ಕಾಲೇಜು...

ಮೈಸೂರು: ಮಕ್ಕಳ ಭವಿಷ್ಯದ ತಿರುವಿನ ಘಟ್ಟ ಎನ್ನಲಾದ ಪಿಯುಸಿ ಹಂತದ ಪರೀಕ್ಷೆಯಲ್ಲಿ ಸತತ 5 ವರ್ಷಗಳಿಂದ 100ಕ್ಕೆ 100 ಫಲಿತಾಂಶದ ಮೂಲಕ ಇಡೀ ರಾಜ್ಯದ ಮನೆಮಾತಾಗಿರುವ ಮೈಸೂರಿನ ಹೊಸ "ಲ್ಯಾಂಡ್ ಮಾರ್ಕ್" ದಕ್ಷ ಪಿಯು ಕಾಲೇಜು. ಈ ಹಿನ್ನೆಲೆಯಲ್ಲಿಯೇ ದಕ್ಷ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ಸಿಇಟಿ, ನೀಟ್‌ನಂತಹ ಕ್ರಾಶ್ ಕೋರ್ಸ್‌ಗಳು ನಡೆಯುತ್ತಿವೆ. ವಾಣಿಜ್ಯಶಾಸ್ತ್ರ ವಿಭಾಗದ ವಿದ್ಯಾರ್ಥಿಗಳಿಗಾಗಿ ಸಿಎ, ಸಿಎಸ್ ಫೌಂಡೇಶನ್ ಕೋರ್ಸ್‌ಗಳನ್ನು ಆರಂಭಿಸಿದೆ.

ಕಾಲೇಜಿನ ಮೊದಲ ವರ್ಷದಲ್ಲೇ 9ನೇ ರ್‍ಯಾಂಕ್ ಲಭಿಸಿದ್ದು, ಅದಾದ ಬಳಿಕ 10ರ ಒಳಗಿನ ಸ್ಥಾನದಲ್ಲಿ ತನ್ನ ಹೆಸರನ್ನು ದಕ್ಷ ಗುರುತಿಸಿಕೊಂಡಿದೆ.

ಕಾಲೇಜಿನ 'ದಕ್ಷ'ತೆಗಳಿವು...

ಹಾಸ್ಟೆಲ್ ವಿಶೇಷ: ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗಾಗಿ ಪ್ರತ್ಯೇಕ ಎರಡೆರಡು ಹಾಸ್ಟೆಲ್ ಗಳಿದ್ದು, ಪ್ರತಿವರ್ಷ ನೂರಾರು ಮಕ್ಕಳನ್ನು ಪೋಷಕರು ಹಾಸ್ಟೆಲ್‌ಗೆ ಸೇರಿಸುತ್ತಿರುವುದು ದಕ್ಷದ ವಿಶೇಷ.



ವಿದ್ಯಾರ್ಥಿಗಳಿಗೆ ತರಗತಿಗಳ ಸಮಯವೇ ಅಲ್ಲದೆ ಅದನ್ನು ಮೀರಿದ ಅಧ್ಯಯನ ಅವಧಿ ನಮ್ಮ ಕಾಲೇಜಿನ ಮತ್ತೊಂದು ವಿಶೇಷ. ಹಾಸ್ಟೆಲ್ ಮಕ್ಕಳು ಸಂಜೆ 6ರ ಬಳಿಕ ರಾತ್ರಿ 10:30ರವರೆಗೂ ಕಾಲೇಜಿನ ಬೇರೆ ಬೇರೆ ಕೊಠಡಿಗಳಲ್ಲಿ ಕುಳಿತು ಅಧ್ಯಯನದಲ್ಲಿ ತೊಡಗುತ್ತಾರೆ. ಆ ವೇಳೆಯಲ್ಲಿ ಪ್ರತಿದಿನ ಒಂದೊಂದು ವಿಷಯದ ಉಪನ್ಯಾಸಕರು ಮಕ್ಕಳ ಜೊತೆಯಲ್ಲಿದ್ದು, ಅವರ ಸಂದೇಹಗಳನ್ನು ಪರಿಹರಿಸಿ ಓದಿಗೆ ಸಹಕರಿಸುತ್ತಾರೆ. ಈ ಸೌಲಭ್ಯವನ್ನು (ರಾತ್ರಿ 8:30ರವರೆಗೆ) ನಿತ್ಯ ಮನೆಯಿಂದ ಬರುವ ಮಕ್ಕಳೂ ಪಡೆದುಕೊಳ್ಳಬಹುದು.

ವೃತ್ತಿಶಿಕ್ಷಣದ ಮೈಲಿಗಲ್ಲು

ನೀಟ್ ಪರೀಕ್ಷೆ:
10ಕ್ಕೂ ಹೆಚ್ಚು ಮಂದಿ ವೈದ್ಯಕೀಯ ಕಾಲೇಜಿಗೆ ಅರ್ಹತೆ
ಮನೀಶ್ ಕುಮಾರ್:
ನೀಟ್ ಆಲ್ ಇಂಡಿಯಾ ರ್‍ಯಾಂಕಿಂಗ್ 216
(ಮದ್ರಾಸ್ ಮೆಡಿಕಲ್ ಕಾಲೇಜು, ಚೆನ್ನೈ)
ಭಾವನಾ ಅಶೋಕ್ ಮುತ್ತಳ್ಳಿ:
ಜೆಇಇ ರ್‍ಯಾಂಕ್ 9172

ಸಾಧನೆಯ ಶಿಖರಗಾಮಿಗಳು:

100ಕ್ಕೆ 100 ಅಂಕ ಪಡೆದವರು: 133 ಮಂದಿ
ಅತ್ಯುನ್ನತ ಶ್ರೇಣಿ ಪಡೆದವರು: 253 ಮಂದಿ

ವಿಜ್ಞಾನ ವಿಭಾಗ:

- **ಜ್ಞಾನಶ್ರೀ ಎಂ.** 597/600 (ಶೇ.99.5 – ಪಿ,ಸಿ,ಎಂ,ಬಿ 100),
- **ಅಜಿತಾ ರಾಣಿ ಎಲ್.** 596/600 (ಶೇ.99.5 – ಪಿ 99, ಸಿ 98, ಎಂ, ಬಿ 100),
- **ಪ್ರಜ್ವಲ್ ಪಿ.** 596/600 (ಶೇ.99.5 – ಸಿ 98, ಪಿ,ಎಂ,ಬಿ 100),
- **ರಾಜಶೇಖರ್ ಎಂ.ಆರ್.** 596/600 (ಶೇ.99.5 – ಪಿ,ಬಿ 99, ಸಿ,ಎಂ 100),
- **ಬಿ.ಅಪೇಕ್ಷಾ** 595/600). (ಶೇ.99.5 – ಪಿ,ಸಿ,ಎಂ,ಬಿ 100)

ವಾಣಿಜ್ಯ ವಿಭಾಗ:

- **ಶಿವಸಾಯಿ ಟಿ.ಎಸ್.** 591/600 (ಶೇ.98.5)
- **ವಿಕಿತಾಶ್ರೀ ಜಿ.ಎಚ್.** 566/600 (ಶೇ.94.3)
- **ಲೋಹಿತ್ ಎಲ್.** 559/600. (ಶೇ.93.16)

ಕೆಫೆಟೇರಿಯ: ವಿದ್ಯಾರ್ಥಿಗಳು ಹಾಸ್ಟೆಲ್ ನಲ್ಲಿ ಉಳಿಯುತ್ತಾರಾದರೂ ಅವರಿಗೆ ಊಟ ತಿಂಡಿಯ ವ್ಯವಸ್ಥೆ ಇರುವುದು ಗಿಡ ಮರಗಳ ನಡುವಿನ ವಿಶಾಲವಾದ ಸ್ವಚ್ಛ ಆವರಣದಲ್ಲಿ; ಗುಣಮಟ್ಟ ಮತ್ತು ಆರೋಗ್ಯಯುತ ಆಹಾರ ಇಲ್ಲಿನ ವಿಶೇಷ.




ಆರೋಗ್ಯ ಕೇಂದ್ರ: ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಅವರ ಸರ್ವತೋಮುಖ ಬೆಳವಣಿಗೆ ನಮ್ಮ ಧ್ಯೇಯ. ಆ ನಿಟ್ಟಿನಲ್ಲಿ ಶೇ. 100ರಷ್ಟು ಭರವಸೆಯನ್ನು ಪೋಷಕರಿಗೆ ಆಡಳಿತ ಮಂಡಳಿ ನೀಡುತ್ತದೆ. ಕಾಲೇಜಿನ ಕ್ಯಾಂಪಸ್‌ನಲ್ಲಿ ಆರೋಗ್ಯ ಕೇಂದ್ರವನ್ನು ತೆರೆಯಲಾಗಿದ್ದು, ಅನುಭವಿ ಶುಶ್ರೂಷಕರು ವಿದ್ಯಾರ್ಥಿಗಳ ಆರೋಗ್ಯದ ಬಗ್ಗೆ ನಿಗಾವಹಿಸಲಿದ್ದಾರೆ.



ಮೊಬೈಲ್ ಫ್ರೀ ಝೋನ್: ಕಣ್ಮನಗಳನ್ನು ಸೂರೆಗೊಳ್ಳುವ ಹಚ್ಚಹಸುರಿನ ಕ್ಯಾಂಪಸ್ ಓದಿಗೆ ಒಳ್ಳೆಯ ವಾತಾವರಣ ನೀಡಲಿದ್ದಾರೆ, ಇಡೀ ಕ್ಯಾಂಪಸ್ "ಮೊಬೈಲ್ ಫ್ರೀ ಝೋನ್" ಆಗಿ ವಿದ್ಯಾರ್ಥಿಗಳ ಚಿತ್ತವನ್ನು ಪಾಠ ಪ್ರವಚನದತ್ತ ಕೇಂದ್ರೀಕರಿಸುತ್ತದೆ.

ದಕ್ಷ ಸಂಸ್ಕೃತಿ: ವಿದ್ಯಾರ್ಥಿಗಳ ಸುಪ್ತ ಪ್ರತಿಭೆಗೆ ಅವಕಾಶ ಕಲ್ಪಿಸುವ ದಕ್ಷ ಸಂಸ್ಕೃತಿ ಸಾಂಸ್ಕೃತಿಕ ಕಾರ್ಯಕ್ರಮ ದಕ್ಷ ಕಾಲೇಜಿನ ಹೆಮ್ಮೆಯ ಚಟುವಟಿಕೆಗಳಲ್ಲಿ ಒಂದೆನಿಸಿದೆ. ವಿದ್ಯಾರ್ಥಿಜೀವನದಲ್ಲಿನ ಎಲ್ಲಾ ತರದ ಆಟೋಟಗಳಲ್ಲಿ ಪಾಲ್ಗೊಳ್ಳಲು ಮುಕ್ತ ಅವಕಾಶ ಕಲ್ಪಿಸಲಾಗಿದೆ. ಐದಾರು ಎಕರೆ ಆಟದ ಮೈದಾನ ಇದಕ್ಕೆ ಪೂರಕ ಸಾಕ್ಷಿ.



ಬಸ್ ಸೌಲಭ್ಯ: ಮೈಸೂರು ನಗರ ಮತ್ತು ಸುತ್ತಮುತ್ತಲ ಊರುಗಳಿಂದ ನಿತ್ಯ ಮನೆಯಿಂದ ಬರುವ ಮಕ್ಕಳಿಗಾಗಿ ಸಾರಿಗೆ ಸೌಲಭ್ಯವನ್ನು ನೀಡಲಾಗುತ್ತದೆ.



ಪರ್ವ ನಾಟಕದ 35ನೇ ಪ್ರದರ್ಶನಕ್ಕೂ ಪ್ರೇಕ್ಷಕರ ಅಭೂತಪೂರ್ವ ಉತ್ಸಾಹ



ಮೈಸೂರು, ಮೇ 21– ಡಾ. ಎಸ್.ಎಲ್.ಭೈರಪ್ಪನವರ 'ಪರ್ವ' ಕಾದಂಬರಿಯಾಧಾರಿತ ಮೈಸೂರು ರಂಗಾಯಣದ ಮಹತ್ವಾಕಾಂಕ್ಷೆಯ ಮಹಾ ರಂಗಪ್ರಯೋಗ 'ಪರ್ವ' ನಾಟಕದ 35ನೇ ಪ್ರದರ್ಶನ ರಂಗಾಯಣದ ಭೂಮಿಗೀತ ರಂಗಮಂದಿರದಲ್ಲಿ ಪ್ರದರ್ಶನಗೊಂಡಿದೆ. ಮೈಸೂರಿನಲ್ಲಿ ಇದು 22ನೇ ಪ್ರದರ್ಶನ. ಈ 35ನೇ ಪ್ರದರ್ಶನಕ್ಕೂ ರಂಗಪ್ರೇಮಿಗಳು ಮುಗಿಬಿದ್ದಿದ್ದಾರೆ. ತುಂಬು ರಂಗಮಂದಿರದಲ್ಲಿ ದಿನವಿಡೀ ಈ ನಾಟಕವನ್ನು ನೋಡಿ ಆನಂದಿಸಿದ್ದಾರೆ. ನಾಳೆ ಮೈಸೂರಿನಲ್ಲಿ 'ಪರ್ವ' ನಾಟಕದ 36ನೇ ಪ್ರದರ್ಶನ ಹಾಗೂ ಇದು ಕೊನೆಯ ಪ್ರಯೋಗವಾಗಲಿದೆ. ಈ ರಂಗಪ್ರಯೋಗದ ನಂತರ ಜೂನ್ ತಿಂಗಳಿನಲ್ಲಿ ಹೊರರಾಜ್ಯಗಳಲ್ಲಿ ಪ್ರವಾಸ ಪ್ರದರ್ಶನಗಳು ಆರಂಭಗೊಳ್ಳಲಿವೆ.



ಮೈಸೂರು ಮೃಗಾಲಯಕ್ಕೆ ಭೇಟಿ ನೀಡಿದ ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರನ್ನು ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಆತ್ಮೀಯವಾಗಿ ಸ್ವಾಗತಿಸಿ, ನೆನಪಿನ ಕಾಣಿಕೆ ನೀಡಿ, ಅಭಿನಂದಿಸಿದರು. ಪ್ರಾಧಿಕಾರದ ಸದಸ್ಯರಾದ ಜ್ಯೋತಿ ರೇಚಣ್ಣ, ಗೋಕುಲ್ ಗೋವರ್ಧನ್, ಬಿಜೆಪಿ ಮಾಧ್ಯಮ ಸಹ ವಕ್ತಾರ ಕೇಬಲ್ ಮಹೇಶ್, ಪಾಲಿಕೆ ಸದಸ್ಯರಾದ ಜಗದೀಶ್, ಸತೀಶ್ ಇತರರಿದ್ದರು.

ಎಸ್‌ಟಿ ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ವಾಲ್ಮೀಕಿ ಪೀಠದ ಶ್ರೀಗಳ ಹೋರಾಟ

ಮೈಸೂರಲ್ಲಿ ನಾಯಕರ ಪಡೆಯಿಂದ ಪ್ರತಿಭಟನೆ

ಮೈಸೂರು, ಮೇ 21– ಪರಿಶಿಷ್ಟ ಪಂಗಡದ ಮೀಸಲಾತಿ ಹೆಚ್ಚಿಸುವಂತೆ ಹಾಗೂ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ವರದಿಯನ್ನು ಯಥಾವತ್ ಜಾರಿಗೊಳಿಸುವಂತೆ ಒತ್ತಾಯಿಸಿ ಶ್ರೀ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಸುತ್ತಿರುವ ಹೋರಾಟವನ್ನು ಬೆಂಬಲಿಸಿ ಸುಣ್ಣದಕೇರಿಯ ಮಹದೇಶ್ವರ ದೇವಸ್ಥಾನದ ಆವರಣದಲ್ಲಿರುವ ವಾಲ್ಮೀಕಿ ಪುತ್ಥಳಿ ಬಳಿ ಮೈಸೂರು ನಾಯಕರ ಪಡೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.



ನಾಯಕರ ಪಡೆ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ ಮಾತನಾಡಿ, ರಾಜ್ಯಸರ್ಕಾರ ಪ್ರಸ್ತುತ ಎಸ್‌ಟಿಗೆ ಶೇ 3ರಷ್ಟು ಮೀಸಲಾತಿ ನೀಡಿದ್ದು, ಅದನ್ನು ಶೇ.7.5ರಷ್ಟು ಹೆಚ್ಚಿಸುವಂತೆ ಆಗ್ರಹಿಸಿ ಶ್ರೀ ಪ್ರಸನ್ನನಂದಾ ಮಹಾಸ್ವಾಮಿಗಳು ನಡೆಸುತ್ತಿರುವ ಹೋರಾಟ ಇಂದಿಗೆ 100ನೇ ದಿನಕ್ಕೆ ಕಾಲಿಟ್ಟಿದ್ದರೂ ಮುಖ್ಯಮಂತ್ರಿಗಳು ಸೇರಿದಂತೆ ಇಡೀ ಸರ್ಕಾರ ನಿರ್ಲಕ್ಷ್ಯ ಹೊಂದಿದ್ದು, ಇದು ಖಂಡನೀಯ ಎಂದರು.

ನಾಯಕ ಸಮುದಾಯವು ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಕ್ಷೇತ್ರದಲ್ಲಿ ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಶ್ರೀ ಪ್ರಸನ್ನಾನಂದಾ ಮಹಾಸ್ವಾಮಿಗಳು ನಡೆಸುತ್ತಿರುವ ಹೋರಾಟಕ್ಕೆ ಸ್ಪಂದಿಸಿ ಸರ್ಕಾರ ಕೂಡಲೇ ಮೀಸಲಾತಿ ಹೆಚ್ಚಳ ತೀರ್ಮಾನ ಕೈಗೊಳ್ಳುವಂತೆ ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಪಾಲಿಕೆ ಸದಸ್ಯ ಲೋಕೇಶ್ ಪಿಯಾ, ಪಿ.ಸತೀಶ್, ಸಿದ್ದಪ್ಪ, ವಿನೋದ್, ಶೇಖರ್, ಕಿರಣ್, ಅರುಣ್, ರಮೇಶ್ ಇತರರಿದ್ದರು.

ಗ್ರಾಪಂ ಸಿಬ್ಬಂದಿ ಮೇಲೆ ರಸಾಯನಿಕ ಸಿಂಪಡಿಸಿ ಚಿನ್ನಾಭರಣ, ಮೊಬೈಲ್ ಕಳವು

ಕೌಲಂದೆ,ಮೇ 21–ಗ್ರಾಮ ಪಂಚಾಯಿತಿ ಮಹಿಳಾ ಕ್ಲರ್ಕ್‌ವೊಬ್ಬರ ಮೇಲೆ ರಸಾಯನಿಕ ಸಿಂಪಡಿಸಿ ಚಿನ್ನಾಭರಣ ಮತ್ತು ಮೊಬೈಲ್ ಕಳವು ಮಾಡಿರುವ ಬಗ್ಗೆ ವರದಿಯಾಗಿದೆ.

ನಂಜನಗೂಡು ತಾಲೂಕು ಹೆಮ್ಮರಗಾಲ ನಿವಾಸಿ ನೇರಳೆ ಗ್ರಾಮ ಪಂಚಾಯಿತಿ ಕ್ಲರ್ಕ್ ಎನ್. ಶಿಲ್ಪಾ(33) ಚಿನ್ನಾಭರಣ ಹಾಗೂ ಮೊಬೈಲ್ ಕಳೆದುಕೊಂಡವರಾಗಿದ್ದು, ಇವರು ಮೇ 18ರಂದು ಗ್ರಾಪಂ ಕಚೇರಿಗೆ ತೆರಳಿದ್ದು, ಅನಾರೋಗ್ಯ ಕಾರಣ ಕಾರ್ಯದರ್ಶಿಯಿಂದ ಅನುಮತಿ ಪಡೆದು ಸ್ವಗ್ರಾಮಕ್ಕೆ ತೆರಳಲು ಕಚೇರಿ ಮುಂಭಾಗ ಬಂದಾಗ ಕಾರಿನಲ್ಲಿ ಬಂದ ಅಪರಿಚಿತ ವ್ಯಕ್ತಿ ಹಾಗೂ ಮಹಿಳೆ ಇವರನ್ನು ಕಾರಿನಲ್ಲಿ ಕುಳ್ಳಿರಿಸಿಕೊಂಡು ಬದನವಾಳು ಬಸ್ ನಿಲ್ದಾಣದಲ್ಲಿ ಇಳಿಸಿದ್ದಾರೆ. ಅಲ್ಲಿದ್ದ ತಮ್ಮ ಪತಿಯ ಪುಸ್ತಕದ ಅಂಗಡಿಗೆ ಶಿಲ್ಪಾ ಅವರು ತೆರಳಿದಾಗ ಅವರ ಕತ್ತಿನಲ್ಲಿದ್ದ ಚಿನ್ನದ ಸರ ಇಲ್ಲದೇ ಇರುವ ಬಗ್ಗೆ ಪತಿ ಗಮನ ಸೆಳೆದಿದ್ದಾರೆ. ಪರಿಶೀಲನೆ ಮಾಡಿ ನೋಡಿದಾಗ ಚಿನ್ನದ ಸರ, ಕಿವಿಯಲ್ಲಿದ್ದ ಓಲೆ ಕಾಣಿಸಲಿಲ್ಲ. ವ್ಯಾನಿಟಿ ಬ್ಯಾಗ್ ಪರಿಶೀಲಿಸಿದಾಗ ಅದರಲ್ಲಿದ್ದ ಮೊಬೈಲ್ ಕೂಡ ನಾಪತ್ತೆಯಾಗಿದೆ. ಆದರೆ, ಮೊಬೈಲ್‌ನಲ್ಲಿದ್ದ 2 ಸಿಮ್ ಕಾರ್ಡ್‌ಗಳನ್ನು ಕಳಚಿ ವ್ಯಾನಿಟಿ ಬ್ಯಾಗ್‌ನಲ್ಲಿ ಇಟ್ಟಿದ್ದು ಕಂಡುಬಂದಿದೆ. ಕಾರಿನಲ್ಲಿ ಬಂದ ಅಪರಿಚಿತ ಮಹಿಳೆ ಮತ್ತು ವ್ಯಕ್ತಿ ತಮಗೆ ಯಾವುದೋ ರಸಾಯನಿಕ ಸಿಂಪಡಿಸಿ ಚಿನ್ನಾಭರಣ ಮತ್ತು ಮೊಬೈಲ್ ಕದ್ದಿದ್ದಾರೆ ಎಂದು ಶಿಲ್ಪಾ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಕೌಲಂದೆ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ನಿವೇಶನ ನೀಡುವುದಾಗಿ ಇಂಜಿನಿಯರ್ ಸೇರಿ ಇತರರಿಗೆ 1.17 ಕೋಟಿ ವಂಚನೆ

ಹಾಸನ, ಮೇ 21–ಜಮೀನಿನಲ್ಲಿ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ನೀಡುವುದಾಗಿ ನಂಬಿಸಿ ಇಂಜಿನಿಯರ್ ಹಾಗೂ ಇತರರಿಂದ ವ್ಯಕ್ತಿಯೋರ್ವ 1.17 ಕೋಟಿ ರೂ. ಪಡೆದು ವಂಚಿಸಿರುವ ಬಗ್ಗೆ ಹಾಸನ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಾಸನದ ಶಿವಪ್ರಕಾಶ್ ಎಂಬಾತನೇ ಆರೋಪಕ್ಕೆ ಗುರಿಯಾಗಿದ್ದು, ಹಾಸನದ ಸತ್ಯಮಂಗಲ ಬಡಾವಣೆ ಹೊಸ ಮಾಸ್ಟರ್ ಕಾಲೇಜು ಎದುರು ಹೇಮರಾಜು, ಪುಟ್ಟರಾಜು ಮತ್ತು ಪುಟ್ಟೇಗೌಡರಿಗೆ ಸೇರಿದ ಜಮೀನನ್ನು ಅಭಿವೃದ್ಧಿಪಡಿಸಿ ಲೇಔಟ್ ನಿರ್ಮಿಸಲು ಜಂಟಿ ಕರಾರು ಒಪ್ಪಂದ ಮಾಡಿಕೊಂಡಿದ್ದು, ಲೇಔಟ್ ನಿರ್ಮಿಸಿದ ನಂತರ ನಿವೇಶಗಳನ್ನು ನೀಡುವುದಾಗಿ ಹಾಸನ ಕೆಆರ್‌ಪುರಂ ಇಂಜಿನಿಯರ್ ದೀಪಕ್‌ಕುಮಾರ್ ಮತ್ತಿತರರಿಂದ 1,17,20,000 ರೂ.ಗಳನ್ನು ಪಡೆದು ವಂಚಿಸಿದ್ದಾರೆ ಎಂದು ದೀಪಕ್‌ಕುಮಾರ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಸೆನ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮಾರುತಿ ಕಾರು ಕದ್ದ ಖದೀಮರು

ಮೈಸೂರು, ಮೇ 21–ಮೆಡಿಕಲ್ ಶಾಪ್ ಮುಂದೆ ನಿಲ್ಲಿಸಿದ್ದ ಕಾರನ್ನು ಕಳವು ಮಾಡಿರುವ ಘಟನೆ ನಾಡನಹಳ್ಳಿ ಗ್ರಾಮದಲ್ಲಿ ನಡೆದಿದೆ. ಮೈಸೂರಿನ ತೋಣಚಿಕೊಪ್ಪಲು ನಿವಾಸಿ ಎಸ್.ಕವಿತಾ, ಗ್ರಾಮದ ಈಶ್ವರ ದೇವಸ್ಥಾನದ ಬಳಿ ಓಂ ಶ್ರೀ ಸಾಯಿರಾಂ ಮೆಡಿಕಲ್ಸ್ ಅಂಡ್ ಜನರಲ್ ಸ್ಟೋರ್ ನಡೆಸುತ್ತಿದ್ದು, ಮೇ 14ರಂದು ತಮ್ಮ ಮಾರುತಿ–800 ಕಾರನ್ನು (ಕೆಎ 05 ಎಂಎ 6665) ಮೆಡಿಕಲ್ ಶಾಪ್ ಮುಂಭಾಗ ನಿಲ್ಲಿಸಿ ಪತಿ ಶಾಂತಮೂರ್ತಿ ಅವರೊಂದಿಗೆ ದ್ವಿಚಕ್ರ ವಾಹನದಲ್ಲಿ ತೋಣಚಿಕೊಪ್ಪಲಿನ ತಮ್ಮ ನಿವಾಸಕ್ಕೆ ತೆರಳಿದ್ದಾರೆ. ಮರುದಿನ ಬಂದು ನೋಡಿದಾಗ ಕಾರು ಕಳುವಾಗಿರುವುದು ಗೊತ್ತಾಗಿದೆ. ಈ ಸಂಬಂಧ ಮೈಸೂರಿನ ಆಲನಹಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಗರುಡಾ ಮಾಲ್ ಪಾರ್ಕಿಂಗ್‌ನಲ್ಲಿ ಬೈಕ್ ಕಳವು

ಮೈಸೂರು, ಮೇ 21–ಮೈಸೂರಿನ ಗರುಡಾ ಮಾಲ್ ಪಾರ್ಕಿಂಗ್‌ನಿಂದ ಬೈಕ್ ಕಳವಾಗಿದೆ. ಗರುಡಾ ಮಾಲ್‌ನಲ್ಲಿರುವ ಪಿವಿಆರ್‌ನಲ್ಲಿ ಎಕ್ಸಿಕ್ಯೂಟಿವ್ ಆಗಿರುವ ಹೆಚ್.ಆರ್. ಜಗದೀಶ್ ಮೇ 17ರಂದು ಬೆಳಗ್ಗೆ ಮಾಲ್‌ನ ಪಾರ್ಕಿಂಗ್‌ನಲ್ಲಿ ಬೈಕ್ (ಕೆಎ 09–ಇಎಸ್ 1278) ನಿಲ್ಲಿಸಿ ಕೆಲಸ ಮುಗಿಸಿ ಸಂಜೆ ಬಂದು ನೋಡುವಷ್ಟರಲ್ಲಿ ಅವರ ಬೈಕ್ ಕಳವಾಗಿದೆ. ಈ ಸಂಬಂಧ ದೇವರಾಜ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನ

ಪಿ.ವಿ.ಜ್ಞಾನದೇವ್



ಮೈಸೂರು, ಮೇ 21– ಮೈಸೂರು ಪುರಸಭೆ ಮಾಜಿ ಉಪಾಧ್ಯಕ್ಷ ದಿವಂಗತ ಲೇಟ್ ವೆಂಕಟರಾಮಯ್ಯ ಅವರ ಪುತ್ರ ಮತ್ತು ಮೈಸೂರಿನ ವಿನಾಯಕನಗರ (ಪಡುವಾರಹಳ್ಳಿ) ನಿವಾಸಿ ಪಿ.ವಿ. ಜ್ಞಾನದೇವ್ (72) ಗುರುವಾರ ರಾತ್ರಿ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಪತ್ನಿ ಕಮಲಮ್ಮ, ಪುತ್ರಿ ಗೀತಾ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನ ಚಿರಶಾಂತಿಧಾಮದಲ್ಲಿ ಶುಕ್ರವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದೇಶದಲ್ಲಿ ಸಿರಿಧಾನ್ಯ ಬೆಳೆ ಪ್ರಮಾಣ ಇಳಿಮುಖ

ರಾಷ್ಟ್ರೀಯ ಮಳೆಯಾಶ್ರಿತ ಪ್ರದೇಶ ಪ್ರಾಧಿಕಾರದ ಸಿಇಒ ಡಾ.ಅಶೋಕ್ ದಳವಾಯಿ ಆತಂಕ

ಮೈಸೂರು, ಮೇ21(ಆರ್‌ಕೆ)– ಭಾರತದಲ್ಲಿ ಸಿರಿಧಾನ್ಯ ಬೆಳೆ ಪ್ರಮಾಣ ಕಡಿಮೆಯಾಗುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ ಎಂದು ಕೃಷಿ ಮತ್ತು ರೈತ ಕಲ್ಯಾಣ ಮಂತ್ರಾಲಯದ ರಾಷ್ಟ್ರೀಯ ಮಳೆ ಆಶ್ರಿತ ಪ್ರದೇಶ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಅಶೋಕ ದಳವಾಯಿ ಕಳವಳ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ನಡೆಯುತ್ತಿರುವ 'ಟೆಕ್ ಭಾರತ್–2022' ಸಮ್ಮೇಳನದ ಅಂಗವಾಗಿ 3ನೇ ದಿನವಾದ ಇಂದು ಏರ್ಪಡಿಸಿದ್ದ 'ಆಹಾರ ತಂತ್ರಜ್ಞಾನ: ಸಿರಿಧಾನ್ಯ ಸಂಸ್ಕರಣೆಯಲ್ಲಿ ಉದ್ಯಮ ಅವಕಾಶಗಳು' ಎಂಬ ವಿಷಯ ಕುರಿತ ಗೋಷ್ಠಿಯಲ್ಲಿ ಅವರು ಮಾತನಾಡಿದರು.

> "ಮಣ್ಣಿನ ಗುಣ, ಮಳೆ ಪ್ರಮಾಣ ಹಾಗೂ ಹವಾಮಾನವೇ ಪ್ರಮುಖವಾಗಿ ಅವಲಂಬಿಸಿರುವ ನಮ್ಮ ದೇಶದಲ್ಲಿ ಸಿರಿಧಾನ್ಯ ಬೆಳೆಯಲು ಅನುಕೂಲವಾಗುತ್ತದೆ. ಇಲ್ಲಿ ಹೆಚ್ಚಾಗಿ ಬಳಸುವ ಅಕ್ಕಿ, ಗೋಧಿ ಉತ್ಪಾದನೆಗೆ ನೀರು, ಗೊಬ್ಬರ, ಕೃಷಿ ಕಾರ್ಮಿಕರ ಕೂಲಿ ಸೇರಿದಂತೆ ವೆಚ್ಚ ಕಡಿಮೆಯಾಗುತ್ತದಲ್ಲದೇ, ಹವಾಮಾನ ವೈಪರೀತ್ಯ, ಪ್ರಕೃತಿ ವಿಕೋಪ, ರೋಗ ರುಜಿನಗಳಂತಹ ಸಂದರ್ಭದಲ್ಲಿ ಬೆಳೆ ಇಳುವರಿ ಕಡಿಮೆಯಾಗುತ್ತದೆ. ಆದರೆ ಸಿರಿಧಾನ್ಯ ಬೆಳೆ ಎಲ್ಲಾ ಹವಾಗುಣಕ್ಕೂ ಹೊಂದಿಕೊಳ್ಳುತ್ತದೆ, ದೇಶದ ಆಹಾರಕ್ಕಿರುವ ಬೇಡಿಕೆ ಸರಿದೂಗಿಸಲು ಸಿರಿಧಾನ್ಯ ಬೆಳೆಗೆ ಪ್ರೋತ್ಸಾಹ ನೀಡಬೇಕಾಗಿದೆ. –ಡಾ.ಅಶೋಕ್ ದಳವಾಯಿ.



ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ನಡೆಯುತ್ತಿರುವ 'ಟೆಕ್ ಭಾರತ್–2022' ಸಮ್ಮೇಳನದ ಅಂಗವಾಗಿ 3ನೇ ದಿನವಾದ ಶನಿವಾರ ಸಿರಿಧಾನ್ಯ ವಿಷಯ ಕುರಿತ ಗೋಷ್ಠಿಯಲ್ಲಿ ಡಾ.ಅಶೋಕ ದಳವಾಯಿ ಮಾತನಾಡಿದರು.

ಭಾರತದ ಹವಾಮಾನಕ್ಕೆ ಹೊಂದಿಕೊಂಡಿರುವ ಸಿರಿಧಾನ್ಯಗಳನ್ನು ಆಂಧ್ರಪ್ರದೇಶ, ಒರಿಸ್ಸಾ, ತೆಲಂಗಾಣ ಹಾಗೂ ಕರ್ನಾಟಕ ರಾಜ್ಯಗಳ ಭಾಗದಲ್ಲಿ ಈ ಹಿಂದೆ ಹೆಚ್ಚಾಗಿ ಬೆಳೆಯಲಾಗುತ್ತಿತ್ತು. ಸುಮಾರು 35 ಮಿಲಿಯನ್ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುತ್ತಿದ್ದ ಸಿರಿಧಾನ್ಯ ಬೆಳೆ ಈಗ ಕೇವಲ 15 ಹೆಕ್ಟೇರ್ ಪ್ರದೇಶಕ್ಕಿಳಿದಿದೆ ಎಂದರು.

ಆರೋಗ್ಯಕ್ಕೆ ಪೂರಕವಾಗಿರುವ ಈ ಸಾಂಪ್ರದಾಯಿಕ ಬೆಳೆಗೆ ರೈತರನ್ನು ಪ್ರೋತ್ಸಾಹಿಸಲು ಕೃಷಿ ವಿಜ್ಞಾನಿಗಳು, ಆಹಾರ ತಂತ್ರಜ್ಞಾನದ ಸಂಪನ್ಮೂಲ ವ್ಯಕ್ತಿಗಳು ಕಾರ್ಯೋನ್ಮುಖರಾದರೆ ಉತ್ಪನ್ನ ಅಧಿಕವಾಗಲಿದೆ. ರಫ್ತು ವಹಿವಾಟು ವೃದ್ಧಿಗೂ ಸಹಕಾರಿಯಾಗಲಿದೆ ಎಂದರು.

ಕೃಷಿ ಕ್ಷೇತ್ರದಲ್ಲಿ ಸಿರಿಧಾನ್ಯ ಉದ್ಯಮಕ್ಕೆ ವಿಫುಲ ಅವಕಾಶವಿದೆ. ವಿಶ್ವವ್ಯಾಪಿ ಬಳಸುವ ಸಿರಿಧಾನ್ಯದಿಂದ ಬೇರೆ ಬೇರೆ ಆಹಾರ ತಯಾರಿಸಬಹುದಾಗಿದ್ದು, ನವ ಉದ್ಯಮಿಗಳು ಕೈಗಾರಿಕೆ ಆರಂಭಿಸಿ ಉದ್ಯೋಗ ಸೃಷ್ಟಿಸಲು ಅವಕಾಶವಿದೆ. ಇದರ ಬಗ್ಗೆ ಮಾಹಿತಿ ನೀಡಿ ಪ್ರೋತ್ಸಾಹಿಸುವ ಜವಾಬ್ದಾರಿ ಕೃಷಿ ವಿಜ್ಞಾನಿಗಳು, ಸಂಶೋಧಕರು ಹಾಗೂ ತಂತ್ರಜ್ಞರದ್ದಾಗಿದೆ ಎಂದರು.

ಸಿರಿಧಾನ್ಯ ಮೌಲ್ಯ ವರ್ಧನೆ(Value Adition) ಉತ್ಪನ್ನಗಳನ್ನು ತಯಾರಿಸಲು ಬಯಸುವ ಯುವಕರಿಗೆ ಬ್ಯಾಂಕು, ಹಣಕಾಸು ಸಂಸ್ಥೆಗಳಿಂದ ಕಡಿಮೆ ಬಡ್ಡಿದರದಲ್ಲಿ ಸಾಲ ಸೌಲಭ್ಯ ಸಿಗುತ್ತದೆಯಲ್ಲದೇ, ಕೇಂದ್ರ ಸರ್ಕಾರವೂ ಸಹ 93 ಸಾವಿರ ಕೋಟಿ ರೂ. ಅನುದಾನವನ್ನು ಕೃಷಿ ತಂತ್ರಜ್ಞಾನ ವಲಯಕ್ಕೆ ಒದಗಿಸಿದೆ ಎಂದರು.

ಹಿರಿಯ ವಿಜ್ಞಾನಿಗಳಾದ ಡಾ.ಜಿ.ವಿ. ಸಾಯಿಪ್ರಸಾದ್, ಡಾ. ಎನ್.ಜಿ. ಮಲ್ಲೇಶ್, ಟಿಸಿಎಸ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರಶಾಂತ್ ಪರಮೇಶ್ವರನ್, ಪುಣೆಯ ಎಂಎಂಎಸ್‌ಐಐಬಿ ಮುಖ್ಯಸ್ಥೆ ಡಾ. ನಿಶಾ ಭಾರತಿ, ತಿರುಚ್ಚಿಯ ವೇಲನ್ ಆಗ್ರೋ ಕಂಪನಿಯ ಕೆ.ವಿ. ಶಿವರಾಮ ಕೃಷ್ಣನ್, ಕೋಬ್ರಾ ಸಾಫ್ಟ್‌ವೇರ್ ನಿರ್ದೇಶಕ ಡಾ.ಅಳಗಪ್ಪನ್ ಕಾರ್ತಿಕೇಯನ್, ಎಂ.ಹೆಚ್.ಬಥಾನಲ್, ಡಾ.ವೆಂಕಟಾಚಲಪತಿ ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಸಮಾಜದಲ್ಲಿ ಅಶಾಂತಿ ಮೂಡಿಸುವವರ ಬಗ್ಗೆ ಎಚ್ಚರದಿಂದಿರಿ

ಹಿನಕಲ್ ಗ್ರಾಮ ನಿವಾಸಿಗಳಿಗೆ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಮರೀಗೌಡರ ಕಿವಿಮಾತು



ಮೈಸೂರು, ಮೇ21– ದೇಶದಲ್ಲಿ ಧರ್ಮ–ಧರ್ಮಗಳ ನಡುವೆ, ಜಾತಿ–ಜಾತಿಗಳ ನಡುವೆ ಕೋಮುವಾದ ಸೃಷ್ಟಿಸಿ ಸಮಾಜದ ಶಾಂತಿಯನ್ನು ಕದಡುವ ಪ್ರಯತ್ನಗಳು ನಡೆಯುತ್ತಿದ್ದು ಇಂತಹ ದುಷ್ಟ ಶಕ್ತಿಗಳ ಬಗ್ಗೆ ಜನರು ಎಚ್ಚರದಿಂದಿರಬೇಕೆಂದು ಜಿ.ಪಂ. ಮಾಜಿ ಅಧ್ಯಕ್ಷ ಕೆ.ಮರೀಗೌಡ ಕರೆ ನೀಡಿದರು.

ಮೈಸೂರಿನ ಹಿನಕಲ್ ಗ್ರಾಮದಲ್ಲಿ ನಡೆದ ಬ್ರಹ್ಮಶಿಲಾ ಕರುಕಲ್ಲು ಪ್ರತಿಷ್ಠಾಪನೆ ಹಾಗೂ ಪೂಜಾ ಮಹೋತ್ಸವದ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು ಹಿನ್‌ಕಲ್ ಗ್ರಾಮದಲ್ಲಿ ಸುಮಾರು 40 ಸಾವಿರ ಜನಸಂಖ್ಯೆ ಇದ್ದು, ಎಲ್ಲಾ ಸಮಾಜದ ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಉತ್ತಮ ಕಾರ್ಯಕ್ರಮ ಮಾಡಿದ್ದೀರಿ. ಪ್ರತಿಯೊಬ್ಬರು ದೇವರಲ್ಲಿ ಭಕ್ತಿ, ಶ್ರದ್ಧೆ, ನಂಬಿಕೆಯಿಟ್ಟು ಪೂಜೆ ಮಾಡಿದರೆ ಒಳ್ಳೆಯದಾಗುತ್ತದೆ. ಸಂಪ್ರದಾಯದಂತೆ ಅನಾದಿಕಾಲದಿಂದ ನಡೆದುಕೊಂಡು ಬಂದಿರುವ ಪದ್ಧತಿಯಂತೆ ಗ್ರಾಮಕ್ಕೆ ದುಷ್ಟಶಕ್ತಿಗಳಿಂದ ತೊಂದರೆ ಆಗಬಾರದೆಂದು ಕರುಕಲ್ಲು ಪ್ರತಿಷ್ಠಾಪನೆ ಮಾಡಿರುವುದು ಒಳ್ಳೆಯದು. ಈ ಕಾರ್ಯಕ್ರಮಕ್ಕೆ ವಿಪಕ್ಷ ನಾಯಕರಾದ ಸಿದ್ದರಾಮಯ್ಯನವರು ಬರಬೇಕಾಗಿತ್ತು. ಆದರೆ, ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ನೀಡುತ್ತಿರುವುದರಿಂದ ಬರಲು ಸಾಧ್ಯವಾಗಿಲ್ಲ. ಆದ್ದರಿಂದ ಎಲ್ಲರೂ ಒಗ್ಗಟ್ಟಿನಿಂದ ಟೈಲರ್ ರಾಜು ನೇತೃತ್ವದಲ್ಲಿ ಉತ್ತಮ ಕೆಲಸ ಮಾಡಿದ್ದೀರಿ. ಎಲ್ಲರಿಗೂ ದೇವರು ಒಳ್ಳೆಯದು ಮಾಡಲಿ ಎಂದರು.

ಹೆಚ್.ಡಿ.ಕೋಟೆ ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ಹಿನಕಲ್ ಗ್ರಾಮಕ್ಕೆ ನಾನು ಪ್ರಥಮವಾಗಿ ಬಂದಿದ್ದೇನೆ. ಹಿನ್‌ಕಲ್ ಗ್ರಾಮಸ್ಥರು 2005ರಿಂದಲೂ ಪ್ರೀತಿ, ವಿಶ್ವಾಸದಿಂದ ನಮ್ಮನ್ನು ಕಂಡಿದ್ದಾರೆ. ಹಿನ್‌ಕಲ್ ಗ್ರಾಮ ತುಂಬ ದೊಡ್ಡದಾಗಿ ಬೆಳೆದಿದ್ದು, ಹತ್ತಾರು ಕೋಮಿನ ಸಮುದಾಯದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ದೇವರ ಪೂಜೆ ನೆರವೇರಿಸಿದ್ದೀರಿ, ಚಾಮುಂಡೇಶ್ವರಿ ಕ್ಷೇತ್ರದಿಂದ ಪ್ರಥಮವಾಗಿ ಆಯ್ಕೆಯಾಗಿ ಮುಖ್ಯಮಂತ್ರಿಯಾಗಿ ರಾಜ್ಯಕ್ಕೆ ಉತ್ತಮ ಕೆಲಸ ಮಾಡಿದ ನನ್ನ ನೆಚ್ಚಿನ ನಾಯಕರಾದ ಸಿದ್ದರಾಮಯ್ಯನವರ ಆಶೀರ್ವಾದ ನನ್ನ ಮೇಲಿರುವುದರಿಂದ ನಾನು ಶಾಸಕನಾಗಿದ್ದೇನೆ. ದೇವರನ್ನು ಭಕ್ತಿಯಿಂದ ಕಟ್ಟುನಿಟ್ಟಾಗಿ ಪೂಜೆ ಮಾಡಿರಿ ದೇವರು ಎಲ್ಲರಿಗೂ ಒಳ್ಳೆಯದು ಮಾಡಲಿ ಎಂದರು. ಸಮಾರಂಭದಲ್ಲಿ ಜಿ.ಪಂ.ಮಾಜಿ ಸದಸ್ಯರಾದ ನಳಿನಿ ಅರಸ್, ರಾಕೇಶ್ ಪಾಪಣ್ಣ, ಹೆಚ್.ಸಿ.ರಾಜು, ಗ್ರಾ.ಪಂ. ಮಾಜಿ ಉಪಾಧ್ಯಕ್ಷ ಹೊನ್ನಪ್ಪ, ಹಿನ್‌ಕಲ್ ಪ್ರಕಾಶ್, ಶ್ರೀನಿವಾಸ್, ಕೆ.ಜಿ.ನಾಗರಾಜ್, ರಮೇಶ್‌ಹೊಟ್ಟೇಗೌಡ, ಬೈರನಾಯ್ಕ, ಪೈ.ಕುಮಾರ್, ರಾಜಣ್ಣ, ಮಿಲ್‌ಸ್ವಾಮಿ, ತಮ್ಮಣ್ಣೇಗೌಡ, ಕೇಬಲ್ ಪಾಪಣ್ಣ, ಗಣೇಶ್, ಪೈ, ಮಹಾದೇವ್, ದಿನೇಶ್, ದೇವರಾಜ್ ಹಾಜರಿದ್ದರು.

ಶ್ರೀ ಸಪ್ತರ್ಷಿ ಗುರುಕುಲ ಸೇವಾಶ್ರಮಕ್ಕೆ ಉಚಿತ ಪ್ರವೇಶ

ಮೈಸೂರು, ಮೇ 21– ಮೈಸೂರಿನ ಕೆ.ಆರ್.ಎಸ್ ರಸ್ತೆಯ ಮಂಟಿ ಹತ್ತಿರದ ಸಾಧನಹಳ್ಳಿಯಲ್ಲಿರುವ ಶ್ರೀ ಸಪ್ತರ್ಷಿ ಗುರುಕುಲ ಸೇವಾಶ್ರಮಕ್ಕೆ ಪ್ರವೇಶ ಪ್ರಾರಂಭವಾಗಿದೆ. ಇಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲೆ ಶಿಕ್ಷಣದ ಜೊತೆಗೆ ಗುರುಕುಲ ಪದ್ಧತಿಯಲ್ಲಿ ಸಂಸ್ಕೃತ, ವೇದಾಧ್ಯಯನ, ಜ್ಯೋತಿಷ್ಯ, ಭಗವದ್ಗೀತೆ, ಭಾಗವತ, ರಾಮಾಯಣ ಗ್ರಂಥಗಳ ಬಗ್ಗೆ ಉಚಿತ ಶಿಕ್ಷಣ ಹಾಗೂ ಊಟ ವಸತಿ ಕೊಡಲಾಗುವುದು. ಹೆಚ್ಚಿನ ಮಾಹಿತಿಗೆ ಮೊ. 944843 4111 ಮೂಲಕ ಸಂಪರ್ಕಿಸಬಹುದು.

ಅರ್ಜಿ ಆಹ್ವಾನ

ಮೈಸೂರು, ಮೇ 21– 5ನೇ ತರಗತಿಯಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಂದ ಬಾಬು ಜಗಜೀವನರಾಂ ಬಾಲಕರ ವಿದ್ಯಾರ್ಥಿನಿಲಯಕ್ಕೆ ಅರ್ಜಿ ಆಹ್ವಾನಿಸಿದೆ. ದಾಖಲಾದ ವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿ ಸೌಕರ್ಯ ಕಲ್ಪಿಸಲಾಗುವುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮೇ 27. ಮಾಹಿತಿಗೆ ಸಂಪರ್ಕಿಸಿ ದೂ: 9900349876, 8722691411, 8105946168.

ಭಾರತ ವಿಮಾನ ನಿಲ್ದಾಣ ಪ್ರಾಧಿಕಾರದಿಂದ ಎನ್‌ಓಸಿ ವಿಳಂಬ ಹಿನ್ನೆಲೆ

ಮೈಸೂರು–ಚಾ.ನಗರ ರೈಲು ಮಾರ್ಗ ವಿದ್ಯುದ್ದೀಕರಣ ಕಾಮಗಾರಿ ಅಪೂರ್ಣ

ಮೈಸೂರು, ಮೇ 21(ಆರ್‌ಕೆ)–ಭಾರತ ವಿಮಾನ ನಿಲ್ದಾಣ ಪ್ರಾಧಿಕಾರ (Airport Authority Of India)ದಿಂದ ನಿರಾಕ್ಷೇಪಣಾ ಪತ್ರ (Noc) ನೀಡುವುದು ವಿಳಂಬವಾಗಿರುವ ಕಾರಣ ಮೈಸೂರು–ಚಾಮರಾಜನಗರ ನಡುವಿನ ರೈಲು ಮಾರ್ಗ ವಿದ್ಯುದ್ದೀಕರಣ ಕಾಮಗಾರಿ ಪೂರ್ಣಗೊಂಡಿಲ್ಲ.

ಈಗಾಗಲೇ 61 ಕಿ.ಮೀ. ರೈಲು ಮಾರ್ಗದ ವಿದ್ಯುದ್ದೀಕರಣ ಕಾಮಗಾರಿ ಪೂರ್ಣಗೊಂಡಿದೆ. ಮಂಡಕಳ್ಳಿ ವಿಮಾನ ನಿಲ್ದಾಣದ ರನ್‌ವೇ ಪಕ್ಕದಲ್ಲಿ ಕೇವಲ 750 ಮೀಟರ್‌ವರೆಗಿನ ರೈಲ್ವೇ ಲೈನ್‌ನಲ್ಲಿ ಮಾತ್ರ ನಿರಾಕ್ಷೇಪಣಾ ಪತ್ರ ದೊರೆಯದ ಕಾರಣ ಕಾಮಗಾರಿ ಸ್ಥಗಿತಗೊಂಡಿದೆ. ರನ್‌ವೇ ಪಕ್ಕದಲ್ಲೇ ವಿಮಾನ ನಿಲ್ದಾಣದ ರನ್‌ವೇ ಇರುವುದರಿಂದ ವಿಮಾನ ಹಾರಾಟ, ಲ್ಯಾಂಡಿಂಗ್, ಟೇಕ್ ಆಫ್ ಆಗುವಾಗ ರೈಲ್ವೆ ಮಾರ್ಗದ ವಿದ್ಯುತ್ ಲೈನ್‌ನಿಂದ ತೊಂದರೆ ಆಗಬಹುದು ಎಂಬ ಕಾರಣಕ್ಕಾಗಿ ರೈಲ್ವೇ ಇಲಾಖೆ ಅನುಮತಿಗಾಗಿ ಪತ್ರ ಬರೆದು ಕೋರಿಕೊಂಡಿದೆಯಾದರೂ, ವಿಮಾನ ನಿಲ್ದಾಣ ಪ್ರಾಧಿಕಾರದ ಎನ್‌ಓಸಿ ಸೆಲ್‌ನಿಂದ ಕ್ಲಿಯರೆನ್ಸ್ ನೀಡದಿರುವುದರಿಂದ ವಿದ್ಯುದ್ದೀಕರಣ ಕಾಮಗಾರಿ ಪೂರ್ಣಗೊಂಡಿಲ್ಲ ಎಂದು ಮೂಲಗಳು ತಿಳಿಸಿವೆ.


ರೈಲ್ವೆ ಲೈನ್ ವಿದ್ಯುದ್ದೀಕರಣ ಯೋಜನೆಯು 2022ರ ಮಾರ್ಚ್ ಮಾಹೆಯಲ್ಲೇ ಪೂರ್ಣಗೊಳ್ಳಬೇಕಾಗಿತ್ತು. ನಿರಾಕ್ಷೇಪಣಾ ಪತ್ರ ನೀಡುವುದು ವಿಳಂಬವಾಗಿರುವುದರಿಂದ ರೈಲ್ವೇ ಸೇಫ್ಟಿ ಆಯುಕ್ತ ಕಾಮಗಾರಿ ಪರಿಶೀಲನೆಯನ್ನು ಮಾಡಲು ಸಾಧ್ಯವಾಗಿಲ್ಲ ಎಂದು ಮೂಲಗಳು ತಿಳಿಸಿವೆ.

ಈಗಾಗಲೇ ಬೆಂಗಳೂರು–ಮೈಸೂರು ನಡುವಿನ ಜೋಡಿ ರೈಲು ಮಾರ್ಗದ ವಿದ್ಯುದ್ದೀಕರಣ ಪೂರ್ಣಗೊಂಡು ರೈಲುಗಳು ಕಾರ್ಯಾಚರಣೆ ನಡೆಸುತ್ತಿವೆ. ಮೈಸೂರು–ಚಾಮರಾಜನಗರ ನಡುವೆಯೂ ಶೇ.97 ರಷ್ಟು ವಿದ್ಯುದ್ದೀಕರಣ ಕಾಮಗಾರಿ ಮುಗಿದಿದ್ದು, ಮಂಡಕಳ್ಳಿ ವಿಮಾನ ನಿಲ್ದಾಣದ ಬಳಿ ಮಾತ್ರ ಬಾಕಿ ಉಳಿದಿದೆ. ಎನ್‌ಓಸಿ ನೀಡುವ ಸಂಬಂಧ ವಿಮಾನ ನಿಲ್ದಾಣದ ಉನ್ನತ ಮಟ್ಟದಲ್ಲಿ ನಿರ್ಧಾರ ಕೈಗೊಳ್ಳಬೇಕು. ನಿಯಮಾನುಸಾರ ಸಾಧಕ–ಬಾಧಕಗಳನ್ನು ಅವಲೋಕನ ಮಾಡಿ ನಿರಾಕ್ಷೇಪಣಾ ಪತ್ರ ನೀಡಲಾಗುತ್ತದೆ. ವಿಳಂಬಕ್ಕೆ ಹಲವು ಕಾರಣಗಳಿರುತ್ತವೆಯೇ ಹೊರತು, ನಮ್ಮ ಹಂತದಲ್ಲಿ ಯಾವುದೇ ನಿರ್ಣಯ ಕೈಗೊಳ್ಳಲಾಗುವುದಿಲ್ಲ ಎಂದು ಮೈಸೂರಿನ ವಿಮಾನ ನಿಲ್ದಾಣದ ಮೂಲಗಳು ಪ್ರತಿಕ್ರಿಯಿಸಿವೆ. ಎನ್‌ಓಸಿ ನೀಡುವ ಸಂಬಂಧ ವಿಮಾನ ನಿಲ್ದಾಣದ ಉನ್ನತ ಮಟ್ಟದಲ್ಲಿ ನಿರ್ಧಾರ ಕೈಗೊಳ್ಳಬೇಕು. ನಿಯಮಾನುಸಾರ ಸಾಧಕ–ಬಾಧಕಗಳನ್ನು ಅವಲೋಕನ ಮಾಡಿ ನಿರಾಕ್ಷೇಪಣಾ ಪತ್ರ ನೀಡಲಾಗುತ್ತದೆ. ವಿಳಂಬಕ್ಕೆ ಹಲವು ಕಾರಣಗಳಿರುತ್ತವೆಯೇ ಹೊರತು, ನಮ್ಮ ಹಂತದಲ್ಲಿ ಯಾವುದೇ ನಿರ್ಣಯ ಕೈಗೊಳ್ಳಲಾಗುವುದಿಲ್ಲ.



> "ವಿಮಾನ ನಿಲ್ದಾಣದ ರನ್‌ವೇ ಪಕ್ಕದಲ್ಲೇ ಹಾದುಹೋಗಿರುವ ಮೈಸೂರು–ಚಾಮರಾಜನಗರ ರೈಲು ಮಾರ್ಗದ ವಿದ್ಯುದ್ದೀಕರಣ ಮಾಡುವುದರಿಂದ ವಿಮಾನ ಹಾರಾಟದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ ಇದರ ಸಾಧಕ–ಬಾಧಕಗಳ ಬಗ್ಗೆ ಪರಿಶೀಲಿಸಿದ ನಂತರವಷ್ಟೇ ಎನ್‌ಓಸಿ ನೀಡುವುದು ನಿಯಮ. ಅದರಂತೆ ರೈಲ್ವೆ ಇಲಾಖೆ ಕೋರಿಕೆಯ ಮೇರೆಗೆ ಭಾರತ ವಿಮಾನ ನಿಲ್ದಾಣಗಳ ಪ್ರಾಧಿಕಾರದ ಉನ್ನತ ಮಟ್ಟದ ಅಧಿಕಾರಿಗಳು ಎನ್‌ಓಸಿ ಘಟಕದಿಂದ ಅಭಿಪ್ರಾಯ ಪಡೆದ ನಂತರವಷ್ಟೇ ನಿರಾಕ್ಷೇಪಣ ಪತ್ರ ನೀಡಬೇಕು. ಆ ಬಗ್ಗೆ ಪ್ರಾಧಿಕಾರದ ಉನ್ನತ ಮಟ್ಟದಲ್ಲಿದೆ. ವಿಮಾನಗಳು, ಪ್ರಯಾಣಿಕರು, ವಿಮಾನ ನಿಲ್ದಾಣದ ಸುರಕ್ಷತೆ ದೃಷ್ಟಿಯಿಂದ ಪ್ರಸ್ತಾವನೆ ಕುರಿತಂತೆ ಹಲವು ಹಂತಗಳಲ್ಲಿ ಚರ್ಚಿಸಿ ಅಭಿಪ್ರಾಯ ಸಂಗ್ರಹಿಸಿದ ನಂತರವಷ್ಟೇ ರೈಲ್ವೆ ಇಲಾಖೆಗೆ ಎನ್‌ಓಸಿ ಸಿಗಲಿದೆ. ಆ ಕುರಿತು ನಮ್ಮ ಪಾತ್ರವೇನೂ ಇರುವುದಿಲ್ಲ. ನಾವು ವಸ್ತು ಸ್ಥಿತಿ ಬಗ್ಗೆ ಮಾಹಿತಿ ನೀಡಿದ್ದೇವಷ್ಟೆ.'
> –ಆರ್.ಮಂಜುನಾಥ್, ಮೈಸೂರು ವಿಮಾನ ನಿಲ್ದಾಣ ನಿರ್ದೇಶಕ

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.05.2022 ಭಾನುವಾರ, ಮಳೆ ನಕ್ಷತ್ರ : ಕೃತಿಕ 11.05.2022 ರಿಂದ 24.05.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ
ತಿಥಿ: ಸಪ್ತಮಿ, ನಕ್ಷತ್ರ : ಧನಿಷ್ಠ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಅವಧೂತ ದತ್ತಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮ ದಿನೋತ್ಸವ, ಬೆಳಗ್ಗೆ 9ಕ್ಕೆ ಶ್ರೀಚಕ್ರಪೂಜೆ, ಮಹಾಗಣಪತಿ ಪೂಜೆ, ಬೆಳಗ್ಗೆ 9.45ಕ್ಕೆ ಆಶ್ರಮದ ನೂತನ ಮುಖ್ಯದ್ವಾರ (ಹನುಮದ್ವಾರ) ಉದ್ಘಾಟನೆ, ಬೆಳಗ್ಗೆ 10ಕ್ಕೆ 80ನೇ ಜನ್ಮ ದಿನೋತ್ಸವಗಳ ಉದ್ಘಾಟನೆ, ನವೀಕೃತ ನಾದಮಂಟಪ ಉದ್ಘಾಟನೆ, ಸಾನ್ನಿಧ್ಯ: ಶ್ರೀ ತ್ರಿದಂಡಿ ಚಿನ್ನ ಶ್ರೀಮನ್ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ಮುಖ್ಯ ಅತಿಥಿಗಳು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಜಿಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸಂಸದ ಪ್ರತಾಪ್ ಸಿಂಹ, ಶಾಸಕ ಎಸ್.ಎ.ರಾಮದಾಸ್, ಸಂಜೆ 6.30ಕ್ಕೆ ಸಂಗೀತ ಕಾರ್ಯಕ್ರಮ: ಅಭಂಗ–ಭಜನ ಗಾಯನ, ಪಂಡಿತ್ ಮಹೇಶ್ ಕಾಲೇ, ಪಂಡಿತ್ ರಾಮ್‌ದಾಸ್ ಪಲ್ಸುಲೇ (ತಬಲ), ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಊಟಿ ರಸ್ತೆ.

■ **ಚೈತನ್ಯ ಮೆಡಿಟೇಷನ್ ಸೆಂಟರ್:** ರೇಖಿ ಎನರ್ಜಿ ಹೀಲಿಂಗ್ ತರಗತಿ, ಸ್ಥಳ: ಚೈತನ್ಯ ಮೆಡಿಟೇಷನ್ ಸೆಂಟರ್, ಕುವೆಂಪುನಗರ, ಬೆಳಿಗ್ಗೆ 9.30ರಿಂದ.

■ **ಶ್ರೀ ಶ್ರೀನಿವಾಸಸ್ವಾಮಿ ಕೈಂಕರ್ಯ ಸಭಾ :** ಶ್ರೀ ಶ್ರೀನಿವಾಸಸ್ವಾಮಿಯವರ ವಾರ್ಷಿಕ ಮಹೋತ್ಸವ, ಸಂಜೆ 7ಕ್ಕೆ ಶಯನೋತ್ಸವ, ಸ್ಥಳ: ಸಭಾ ಆವರಣ, ತಿಲಕ್‌ನಗರ.

■ **ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್, ನೇಗಿಲಯೋಗಿ ವಿದ್ಯಾವರ್ಧಕ ಸ್ಪರ್ಧಾ ಕೇಂದ್ರ :** ಎಸ್‌ಎಸ್‌ಎಲ್‌ಸಿ ನಂತರ ಮುಂದೇನು? ಉಚಿತ ಕಾರ್ಯಾಗಾರ, ಅಧ್ಯಕ್ಷತೆ : ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಗೌರವಾಧ್ಯಕ್ಷ ಪ್ರೊ.ಕೆ.ಆರ್.ರಂಗಯ್ಯ, ಉದ್ಘಾಟನೆ: ವೃತ್ತಿ ಮಾರ್ಗದರ್ಶಕ ಡಾ.ಬಿ.ಎನ್.ರವೀಶ್, ಮುಖ್ಯ ಅತಿಥಿಗಳು: ಡಿ.ರವಿಕುಮಾರ್, ಜಿ.ಎನ್.ಪ್ರಸನ್ನ, ಪರಮೇಶ್ವರ, ಜಗದೀಶ್‌ಕುಮಾರ್ ಎಸ್.ಎನ್., ಎಸ್.ಭಾರತಿ, ಸ್ಥಳ: ನೇಗಿಲಯೋಗಿ ಮರುಳೇಶ್ವರ ಸೇವಾ ಭವನ, ಕೆ.ಜಿ.ಕೊಪ್ಪಲು, ಬೆಳಗ್ಗೆ 10.30ಕ್ಕೆ.

■ **ರಂಗಾಯಣ :** ರಂಗಾಯಣ ತಂಡದಿಂದ ಡಾ.ಎಸ್.ಎಲ್.ಭೈರಪ್ಪ ಅವರ 'ಪರ್ವ' ನಾಟಕ ಪ್ರದರ್ಶನ, ರಂಗರೂಪ, ನಿರ್ದೇಶನ: ಪ್ರಕಾಶ್ ಬೆಳವಾಡಿ, ಸ್ಥಳ: ಭೂಮಿಗೀತ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ–ಬಿ.ಕೆ. ರವಿ, 6.20 ಗೀತಾರಾಧನ, 6.35 'ಬದುಕು ಬದಲಿಸಿದ ಶೋಧ' ಲೇಖನ ಮತ್ತು ಪ್ರಸ್ತುತಿ– ಸುರೇಂದ್ರನಾಥ್ ಸಾತ್ವಿಕ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಎಂ. ರಾಘವೇಂದ್ರ, ವ್ಯಾಖ್ಯಾನ– ಡಾ.ಹೆಚ್.ಎನ್. ಮಂಜುರಾಜ್, 7.15 ಪ್ರಾಯೋಜಿತ ಕಾರ್ಯಕ್ರಮ 'ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ' ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ, 9.05 ಜೀವಾವಸಕ್ಕೆ ಕಾಯಿದೆಯ ಕಾವಲು–ಅಂತಾರಾಷ್ಟ್ರೀಯ ಜೀವ ವೈವಿಧ್ಯ ದಿನದಂದು ವಿಶೇಷ ಕಾರ್ಯಕ್ರಮ. ಭಾಗವಹಿಸುವವರು ಅನಂತ ಹೆಗಡೆ ಆಶಿಸರ ಹಾಗೂ ಪ್ರಶಾಂ ವಿ. ರಾವ್. ನಿರ್ಮಾಣ– ದಿವಾಕರ ಹೆಗಡೆ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳವಳಿಯ ಪಯಣ, 9.40 ಹೃದಯಾಘಾತ ಕುರಿತು ಬಿ.ಜಿ.ಎಸ್. ಅಪೋಲೋ ಆಸ್ಪತ್ರೆ ಪ್ರಾಯೋಜಿತ ಕಾರ್ಯಕ್ರಮ, 9.45 ನಮ್ಮ ಆರೋಗ್ಯ–ಸ್ಕ್ವಿಂಟ್ ಐಸ್ ಅಂದರೆ ಮೆಳ್ಳೆಗಣ್ಣು ಕುರಿತು ಡಾ. ಕೆ.ವಿ. ರವಿಶಂಕರ್ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ–ಮುಖಾ ಮುಖಿ, ವಿಷಯ–ವಿದ್ಯಾರ್ಥಿಗಳಿಗೆ ಪೂರಕವಾದ ಶಾಲಾ ವಾತಾವರಣ ಹೇಗಿರಬೇಕು. ಭಾಗವಹಿಸುವ ತಜ್ಞರು– ವೈ.ಎಸ್. ರಾಜೇಶ್, ಮಕ್ಕಳು– ಜ್ಯೋತಿಶ್ರೀ, ಹೃಶಿಕೇಶ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05ವನಿತಾ ವಿಹಾರ, 12.35 ದೇವರನಾಮ, ವೃಂದಗಾನ, ರಾಜ್‌ಕುಮಾರ್ ಭಾರತಿ, 12.45 ಜನಪದ ಸಂಗೀತ– ಪಾಪಣ್ಣಮ್ಮ ಮತ್ತು ತಂಡ, 1.20 ಭಾವಗೀತೆ–ಅಂಬಿಕಾ ಕೆ. ರಾಮ್, 2.35 ಚಲನ ಚಿತ್ರ ಧ್ವನಿ ವಾಹಿನಿ, 3.40 ಯಕ್ಷಗಾನ ತಾಳ ಮದ್ದಲೆ, 5.00'ಬದುಕು ಬದಲಿಸಿದ ಶೋಧ' ಲೇಖನ ಮತ್ತು ಪ್ರಸ್ತುತಿ–ಸುರೇಂದ್ರನಾಥ್ ಸಾತ್ವಿಕ್, 7.00 AIR Nxt programme – ವಿಷಯ – ನನ್ನ ಕನಸಿನ ಭಾರತ, 9.05 ಚಿಣ್ಣರ ಸುದ್ದಿ ಲೋಕ–ಪ್ರಚಲಿತ ವಿದ್ಯಮಾನಗಳ ವಾರ್ತಾ ಸಂಚಿಕೆ, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ, ದನೀಶ್ ಅಸ್ಲಂ–ಸರೋಡ್ ವಾದನ, ಉಸ್ತಾ ಅಖ್ರಾರ್ ಹಸನ್ – ತಬಲ, 11.00 ಸವಿನೆನಪು

■ **ವಿಶ್ವಮಾನವ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘ:** ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಿಗೆ ಗೌರವ ಸಮರ್ಪಣೆ, ಉದ್ಘಾಟನೆ: ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಅಧ್ಯಕ್ಷತೆ: ಕೆ.ಎಸ್.ಕೃಷ್ಣ, ಮುಖ್ಯ ಅತಿಥಿಗಳು: ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಡಾ.ಮಂಜೇಗೌಡ, ಕಾರ್ಯಾಧ್ಯಕ್ಷ ಸಿ.ಜಿ.ಗಂಗಾಧರ್, ನಿರ್ದೇಶಕ ಕೆ.ವಿ. ಶ್ರೀಧರ್, ಸ್ಥಳ: ಡಾ.ಪುಟ್ಟರಾಜ ಗವಾಯಿ ಕ್ರೀಡಾಂಗಣದ ಯೋಗ ಮಂದಿರ, ಜೆ.ಪಿ.ನಗರ, ಸಂಜೆ 5ಕ್ಕೆ.

■ **ಮೈಸೂರು ಉತ್ಸವ:** ವಸ್ತುಪ್ರದರ್ಶನ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನದ ಪಕ್ಕ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಶಿವಕಾಂತಾನಂದ ಅವರಿಂದ ಭಾರತದಲ್ಲಿ ಶಕ್ತಿಪೂಜೆ ಕುರಿತು ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಅಭಿಯಂತರರು :** ಅಭಿಯಂತರರು ತಂಡದಿಂದ ಸಾಹಿತಿ ಪೂರ್ಣಚಂದ್ರ ತೇಜಸ್ವಿಯವರ ಚಿದಂಬರ ರಹಸ್ಯ ನಾಟಕ ಪ್ರದರ್ಶನ, ರಂಗ ನಿರ್ದೇಶಕ : ಹೆಚ್.ಎಸ್. ಸುರೇಶ್ ಬಾಬು, ಸ್ಥಳ: ರಮಾಗೋವಿಂದ ರಂಗ ಮಂದಿರ, ರಾಮಕೃಷ್ಣನಗರ, ಸಂಜೆ 7ಕ್ಕೆ.

■ **ಕ್ರೀಡಾ ಭಾರತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ :** ಭಾರತ್ ಪರಿಕ್ರಮ–ಬೈಕ್ ರ‍್ಯಾಲಿ, ಸ್ಥಳ: ಚಾಮುಂಡಿ ವಿಹಾರ ಸ್ಟೇಡಿಯಂ, ಬೆಳಗ್ಗೆ 7.30ಕ್ಕೆ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮೇ 22 ಭಾನುವಾರ 2022

ಸಂಪುಟ: 43 | ಸಂಚಿಕೆ: 36 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಪೆಟ್ರೋಲ್ 9.50, ಡೀಸೆಲ್ 7 ರೂ. ಇಳಿಕೆ
ಉಜ್ವಲ ಸಿಲಿಂಡರ್‌ಗೆ 200 ರೂ. ಸಬ್ಸಿಡಿ
ರಸಗೊಬ್ಬರ, ಸಿಮೆಂಟ್ ದರ ಇಳಿಕೆ ಘೋಷಣೆ

ಬೆಲೆ ಏರಿಕೆಯಿಂದ ತತ್ತರಿಸಿರುವ ಜನತೆಗೆ ಅಲ್ಪ ರಿಲೀಫ್









ನವದೆಹಲಿ, ಮೇ 21– ಮಹತ್ವದ ಬೆಳವಣಿಗೆಯೊಂದರಲ್ಲಿ ಕೇಂದ್ರ ಸರ್ಕಾರ ಪೆಟ್ರೋಲ್, ಡೀಸೆಲ್, ಗ್ಯಾಸ್, ರಸಗೊಬ್ಬರ ಮತ್ತು ಸಿಮೆಂಟ್ ದರವನ್ನು ಇಳಿಕೆ ಮಾಡುವ ಮೂಲಕ ಬೆಲೆ ಏರಿಕೆಯಿಂದ ತತ್ತರಿಸಿದ ಜನರಿಗೆ ಸ್ವಲ್ಪ ಮಟ್ಟಿನ ರಿಲೀಫ್ ನೀಡಿದೆ.




ಕೇಂದ್ರ ಸರ್ಕಾರ ಇಂಧನ ಅಬಕಾರಿ ಸುಂಕದಲ್ಲಿ ಇಳಿಕೆ ಮಾಡಿರುವುದರಿಂದ ಪೆಟ್ರೋಲ್ ಬೆಲೆ 9.5 ರೂ., ಡೀಸೆಲ್ ದರ 7 ರೂ. ಇಳಿಕೆಯಾಗಿದೆ. ಈ ಕುರಿತು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಟ್ವೀಟ್ ಮೂಲಕ ಮಾಹಿತಿ ನೀಡಿದ್ದು, ಇಂಧನ ಬೆಲೆಗಳ ಮೇಲಿನ ಕೇಂದ್ರ ಅಬಕಾರಿ ಸುಂಕದಲ್ಲಿ ಕಡಿತ ಮಾಡಲಾಗಿದೆ. ಪೆಟ್ರೋಲ್ ಬೆಲೆ 9.5ರಷ್ಟು ಮತ್ತು ಡೀಸೆಲ್ 7ರಷ್ಟು ಅಗ್ಗವಾಗಲಿದೆ. ಪೆಟ್ರೋಲ್ ಮೇಲಿನ ಕೇಂದ್ರ ಅಬಕಾರಿ ಸುಂಕವನ್ನು ಪ್ರತಿ ಲೀಟರ್‌ಗೆ 8 ಮತ್ತು ಡೀಸೆಲ್‌ಗೆ 6ರಷ್ಟು ಕಡಿತಗೊಳಿಸಲಾಗಿದೆ ಎಂದು ಹೇಳಿದರು.

ಪೆಟ್ರೋಲ್–ಡೀಸೆಲ್ ಮಾತ್ರವಲ್ಲದೇ ಇತರೆ ವಸ್ತುಗಳ ಬೆಲೆ ಕೂಡ ಇಳಿಕೆಯಾಗಿದ್ದು, ಸಿಮೆಂಟ್ ಲಭ್ಯತೆಯನ್ನು ಸುಧಾರಿಸಲು ಮತ್ತು ಸಿಮೆಂಟ್ ಬೆಲೆ ಕಡಿಮೆ ಮಾಡಲು ಉತ್ತಮ ಲಾಜಿಸ್ಟಿಕ್ಸ್ ಮೂಲಕ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ನಮ್ಮ ಆಮದು ಅವಲಂಬನೆ ಹೆಚ್ಚಿರುವ ಪ್ಲಾಸ್ಟಿಕ್ ಉತ್ಪನ್ನಗಳಿಗೆ ಕಚ್ಚಾ ವಸ್ತುಗಳು ಮತ್ತು ಮಧ್ಯವರ್ತಿಗಳ ಮೇಲಿನ ಕಸ್ಟಮ್ಸ್ ಸುಂಕವನ್ನು ಸಹ ನಾವು ಕಡಿಮೆ ಮಾಡುತ್ತಿದ್ದೇವೆ. ಉಕ್ಕಿನ ಕೆಲವು ಕಚ್ಚಾ ವಸ್ತುಗಳ ಮೇಲಿನ ಆಮದು ಸುಂಕವನ್ನು ಕಡಿಮೆ ಮಾಡಲಾಗುವುದು. ಕೆಲವು ಉಕ್ಕಿನ ಉತ್ಪನ್ನಗಳ ಮೇಲೆ ರಫ್ತು ಸುಂಕವನ್ನು ವಿಧಿಸಲಾಗುವುದು ಎಂದು ಹೇಳಿದರು.

ಪ್ರಧಾನಿ ಮೋದಿ ಅಧಿಕಾರ ವಹಿಸಿಕೊಂಡಾಗಿನಿಂದ, ನಮ್ಮ ಸರ್ಕಾರ ಬಡವರ ಕಲ್ಯಾಣಕ್ಕಾಗಿ ಮೀಸಲಾಗಿದೆ. ನಾವು ಬಡ ಮತ್ತು ಮಧ್ಯಮ ವರ್ಗದವರಿಗೆ ಸಹಾಯ ಮಾಡಲು ಹಲವಾರು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಪರಿಣಾಮವಾಗಿ, ನಮ್ಮ ಅಧಿಕಾರಾವಧಿಯಲ್ಲಿ ಸರಾಸರಿ ಹಣದುಬ್ಬರವು ಹಿಂದಿನ ಸರ್ಕಾರಗಳಿಗಿಂತ ಕಡಿಮೆಯಾಗಿದೆ. ಇಂದು ಜಗತ್ತು ಕಷ್ಟದ ▶ 7ನೇ ಪುಟಕ್ಕೆ

ಸಂಪುಟ ವಿಸ್ತರಣೆ ಬಗ್ಗೆ ಚರ್ಚೆ ಆಗಿಲ್ಲ



ಬೆಂಗಳೂರು, ಮೇ21 (ಕೆಎಂಶಿ)– ಸಂಪುಟ ವಿಸ್ತರಣೆ ಬಗ್ಗೆ ಪಕ್ಷದ ವರಿಷ್ಠರ ಜತೆ ಚರ್ಚೆಯಾಗಿಲ್ಲ. ಸುಪ್ರೀಂಕೋರ್ಟ್ ಬಿಬಿಎಂಪಿ ಹಾಗೂ ▶ 7ನೇ ಪುಟಕ್ಕೆ

ಗಣಿಗಾರಿಕೆಗೆ ಭೂಮಿ ನೀಡದ ರೈತನ ಅಪಹರಿಸಿ ಹತ್ಯೆಗೈದು, ಹೂತರು...

● ನಾಗಮಂಗಲ ತಾಲೂಕಲ್ಲಿ ರಾಕ್ಷಸಿ ಕೃತ್ಯ ● ಸಂಬಂಧಿಯೂ ಪ್ರಕರಣದಲ್ಲಿ ಶಾಮೀಲು ● ತಮಿಳ್ನಾಡಿನ ಉದ್ಯಮಿಯಿಂದ ಗಣಿಗಾರಿಕೆ; ಪಕ್ಕದ ಜಮೀನಿನ ಮೇಲೂ ಕಣ್ಣಿತ್ತು ● ಹತ್ಯೆಗೀಡಾದ ಮೋಹನ್ ತಾಯಿ, ಪತ್ನಿ ದೂರಿಗೆ ಸ್ಪಂದಿಸದ ಪೋಲೀಸರು

ನಾಗಮಂಗಲ, ಮೇ 21 (ಮಹೇಶ್, ಎಸಿಪಿ)–ಗಣಿಗಾರಿಕೆಗೆ ಜಮೀನು ನೀಡಲು ನಿರಾಕರಿಸಿದ ರೈತನ ಅಪಹರಿಸಿ ಹತ್ಯೆ ಮಾಡಿರುವ ಘಟನೆ ನಾಗಮಂಗಲ ತಾಲೂಕು ನರಗಲು ಗ್ರಾಮದಿಂದ ವರದಿಯಾಗಿದೆ.



ಎನ್.ಆರ್.ಮೋಹನ್

ನರಗಲು ಗ್ರಾಮದ ರೈತ ಎನ್.ಆರ್.ಮೋಹನ್(31)ನನ್ನು ಹತ್ಯೆ ಮಾಡಲಾಗಿದೆ. ಈತನನ್ನು ಮೇ 15ರಂದು ಸಂಜೆ ತಮಿಳುನಾಡು ಮೂಲದ ಗಣಿ ಉದ್ಯಮಿ ಹಾಗೂ ಈತನ ದೊಡ್ಡಪ್ಪನ ಮಗ, ಗ್ರಾಪಂ ಮಾಜಿ ಸದಸ್ಯ ಅಪಹರಿಸಿದ್ದು, ಅದೇ ದಿನ ರಾತ್ರಿ ಆತನ ತಾಯಿ ವಸಂತಮ್ಮ ಬಿಂಡಿಗನವಿಲೆ ಠಾಣೆ ಪೊಲೀಸರಿಗೆ ದೂರು ನೀಡಲು ತೆರಳಿದರಾದರೂ, ಅವರಿಗೆ ಪೊಲೀಸರು ಸ್ಪಂದಿಸಿಲ್ಲ. ಮರು ದಿನ ಮೋಹನ್‌ನ ಪತ್ನಿ ಯಮುನಾ ತನ್ನ ಪತಿಯನ್ನು ಅಪಹರಿಸಲಾಗಿದೆ ಎಂದು ಆಧಾರ ಸಮೇತ ದೂರು ನೀಡಿದಾಗ ಅದನ್ನು ಸ್ವೀಕರಿಸಲು ನಿರಾಕರಿಸಿದ ಪೊಲೀಸರು, ಆಕೆಯಿಂದ ನಾಪತ್ತೆ ದೂರು ಬರೆಸಿಕೊಂಡು ಸಾಗ ಹಾಕಿದ್ದಾರೆ. ಅನ್ಯ ಮಾರ್ಗವಿಲ್ಲದೆ ಪೊಲೀಸರು ಹೇಳಿದಂತೆ ನಾಪತ್ತೆ ದೂರು ಸಲ್ಲಿಸಿದ ನಂತರವೂ ಕೂಡ ಗಣಿ ಉದ್ಯಮಿ ಮತ್ತು ಗ್ರಾಪಂ ಮಾಜಿ ಸದಸ್ಯನನ್ನು ಕರೆದು ವಿಚಾರಣೆ ಕೂಡ ಮಾಡದೇ ಪೊಲೀಸರು ನಿರ್ಲಕ್ಷ್ಯ ವಹಿಸಿದ್ದರಿಂದ ಯಮುನಾ ಅವರು ತನ್ನ ಮಕ್ಕಳೊಂದಿಗೆ ಮಂಡ್ಯ ಎಸ್ಪಿ ಕಚೇರಿಗೆ ತೆರಳಿ ದೂರು ಸಲ್ಲಿಸಿದ್ದಾರೆ. ಎಸ್ಪಿಯವರ ನಿರ್ದೇಶನದ ಮೇರೆಗೆ ಮೇ 19ರಂದು ರಾತ್ರಿ ಬಿಂಡಿಗನವಿಲೆ ಪೊಲೀಸರು ಅಪಹರಣ ಪ್ರಕರಣ ದಾಖಲಿಸಿಕೊಂಡು ▶ 6ನೇ ಪುಟಕ್ಕೆ

ತಾಯಿ-ಮಕ್ಕಳ ಸ್ಥಿತಿ ಕಂಡು ಮರುಗಿದ ಎಸ್ಪಿ

ರೈತ ಮೋಹನ್ ಅಪಹರಣವಾಗಿರುವ ಬಗ್ಗೆ ಮೇ 15ರಂದು ರಾತ್ರಿ ಆತನ ತಾಯಿ ಮತ್ತು ಮೇ 16ರಂದು ಪತ್ನಿ ದೂರು ನೀಡಿದರೂ ಸ್ವೀಕರಿಸದೇ ಕೊನೆಗೆ ಯಮುನಾ ಜಿಲ್ಲಾ ಎಸ್ಪಿ ಅವರನ್ನು ಭೇಟಿಯಾಗಿದ್ದಾರೆ. ನಿರ್ದೇಶನದಂತೆ ಕಾರ್ಯ ಪ್ರವೃತ್ತರಾದ ನಂತರ ಅಪಹರಣ ಹಾಗೂ ಕೊಲೆ ಪ್ರಕರಣ ಬಯಲಾಗಿದೆ.

ಅಪಹರಣವಾದ ಕೆಲವೇ ಗಂಟೆಗಳಲ್ಲಿ ಮೋಹನ್‌ನ ತಾಯಿ ದೂರು ನೀಡಿದ್ದರೂ ಸಹ ತೀವ್ರ ನಿರ್ಲಕ್ಷ್ಯ ವಹಿಸಿ, ಕೊನೆಗೆ ಎಸ್ಪಿ ಅವರ ನಿರ್ದೇಶನದಂತೆ ಮೇ 19ರಂದು ದೂರು ದಾಖಲಿಸಿಕೊಂಡು ತನಿಖೆ ಆರಂಭಿಸಿದ ಬಿಂಡಿಗನವಿಲೆ ಪೊಲೀಸರು ರೈತ ಮೋಹನ್ ಕೊಲೆಯಾಗಿರುವುದನ್ನು ಬಯಲಿಗೆಳೆದಿದ್ದಾರೆ. ಈ ಪ್ರಕರಣದಲ್ಲಿ ಬಿಂಡಿಗನವಿಲೆ ಠಾಣೆ ಪೊಲೀಸರ ನಿರ್ಲಕ್ಷ್ಯತೆ ಎದ್ದು ಕಾಣುತ್ತಿದೆ. ಗ್ರಾಮಸ್ಥರೂ ಕೂಡ ಆ ಠಾಣೆ ಸಬ್ ಇನ್ಸ್‌ಪೆಕ್ಟರ್ ಅನ್ನು ▶ 6ನೇ ಪುಟಕ್ಕೆ

ಮೋಹನನ ತಾಯಿ, ಹೆಂಡತಿ ಮೊರೆ ಕೇಳದ ಪೊಲೀಸರು!

ಜಮೀನಿನಿಂದ ದನಗಳನ್ನು ಹೊಡೆದುಕೊಂಡು ಬರುತ್ತೇನೆ ಎಂದು ಮೇ 15ರಂದು ಮಧ್ಯಾಹ್ನ ಮನೆಯಿಂದ ತೆರಳಿದ ರೈತ ಮೋಹನ್ ಅಪಹರಿಸಲ್ಪಟ್ಟಿದ್ದಾನೆ ಎಂಬುದಕ್ಕೆ ಸಾಂದರ್ಭಿಕ ಸಾಕ್ಷ್ಯವನ್ನು ಗ್ರಾಮಸ್ಥರ ಸಹಕಾರದಿಂದ ಮೋಹನ್‌ನ ಪತ್ನಿ ಯಮುನಾ ಅವರೇ ಬಿಂಡಿಗನವಿಲೆ ಪೊಲೀಸರಿಗೆ ಒದಗಿಸಿದ್ದರೂ ಕೂಡ ಅವರು ಅದನ್ನು ಗಣನೆಗೇ ತೆಗೆದುಕೊಂಡಿಲ್ಲ. ಅದ್ದಿಹಳ್ಳಿ ಹಾಲಿನ ಡೈರಿ ಮುಂಭಾಗ ರೈತ ಮೋಹನ್‌ನ ಬೈಕ್ ಪತ್ತೆಯಾದ ಹಿನ್ನೆಲೆಯಲ್ಲಿ ಮೋಹನ್‌ನ ಜಮೀನು ಮತ್ತು ಅದ್ದಿಹಳ್ಳಿ ಹಾಲಿನ ಡೈರಿ ಮಧ್ಯೆ ಇರುವ ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನು ಗ್ರಾಮಸ್ಥರು ಪರಿಶೀಲಿಸಿದ್ದಾರೆ.

ಆ ವೇಳೆ ಅಪರಿಚಿತ ವ್ಯಕ್ತಿಯೋರ್ವ ಮೋಹನ್‌ನ ಬೈಕ್ ಅನ್ನು ತಳ್ಳಿಕೊಂಡು ಹೋಗುತ್ತಿರುವುದು ಹಾಗೂ ಅನಂತರ ಮಾರುತಿ ಓಮ್ನಿವೊಂದು ತೆರಳುತ್ತಿರುವುದು ಕಂಡು ಬಂದಿದೆ. ಗಣಿಗಾರಿಕೆಗೆ ಮೋಹನ್ ಜಮೀನು ನೀಡದೇ ಇದ್ದಿದ್ದರಿಂದ ಗಣಿ ಉದ್ಯಮಿ ರಾಜು ಮತ್ತು ಗ್ರಾಪಂ ಮಾಜಿ ಸದಸ್ಯ ಕುಮಾರ್ ಅವರುಗಳು ಮೋಹನ್ ವಿರುದ್ಧ ದ್ವೇಷ ಸಾಧಿಸುತ್ತಿದ್ದುದು, ಅಲ್ಲದೇ ಇತ್ತೀಚೆಗೆ ರಾಜು ನಡೆಸುತ್ತಿದ್ದ ಗಣಿ ಮೇಲೆ ಅಧಿಕಾರಿಗಳು ದಾಳಿ ನಡೆಸಿದ್ದರಿಂದ ಈ ದಾಳಿಯನ್ನು ಮೋಹನ್ ಮಾಡಿಸಿದ್ದಾನೆ ▶ 6ನೇ ಪುಟಕ್ಕೆ

ಮರಕ್ಕೆ ಟೆಂಪೋ ಟ್ರಾಕ್ಸ್ ಡಿಕ್ಕಿ: 8 ಮಂದಿ ದಾರುಣ ಸಾವು

ಮಸಣವಾಯ್ತು ಮದುವೆ ಮನೆ



ಧಾರವಾಡ, ಮೇ 21– ಟೆಂಪೋ ಟ್ರಾಕ್ಸ್ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ 8 ಜನ ಮೃತಪಟ್ಟಿದ್ದು, 13 ಮಂದಿ ಗಾಯಗೊಂಡಿದ್ದಾರೆ.

ಬಾಡ ಗ್ರಾಮದ ಬಳಿ ಅಪಘಾತ ಸಂಭವಿಸಿದ್ದು, ಅಪಘಾತಕ್ಕೀಡಾದ ಕ್ರೂಸರ್‌ನಲ್ಲಿ 20ಕ್ಕೂ ಹೆಚ್ಚು ಜನ ಪ್ರಯಾಣಿಸುತ್ತಿದ್ದರು. ಗಾಯಾಳುಗಳನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಮದುವೆ ಹಿಂದಿನ ದಿನ ನಿಶ್ಚಿತಾರ್ಥ ಮುಗಿಸಿ ಮನ್ಸೂರು ಗ್ರಾಮದಿಂದ ಬೆನಕಟ್ಟಿಗೆ ತೆರಳುತ್ತಿದ್ದಾಗ ಚಾಲಕನ ನಿಯಂತ್ರಣ ತಪ್ಪಿ ಮರಕ್ಕೆ ವಾಹನ ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ ನಾಲ್ವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ನಾಲ್ವರು ಆಸ್ಪತ್ರೆಗೆ ಸಾಗಿಸುವ ಮಾರ್ಗದಲ್ಲಿ ಮೃತಪಟ್ಟಿದ್ದಾರೆ. ಮೃತರಲ್ಲಿ ಮೂವರು ಮಕ್ಕಳು ಇದ್ದಾರೆ. ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಪಿ.ಕೃಷ್ಣಕಾಂತ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮನ್ಸೂರು ಗ್ರಾಮದಿಂದ ನಿಗದಿ (ಬೆನಕನಕಟ್ಟಿ)ಗೆ ಹೋಗುವಾಗ ಈ ಘಟನೆ ನಡೆದಿದೆ. ಅನನ್ಯ, ಹರೀಶ, ಶಿಲ್ಪಾ, ನೀಲವ್ವ, ಮಧುಶ್ರೀ, ಮಹೇಶ್ವರಯ್ಯ, ಶಂಭುಲಿಂಗಯ್ಯ, ಸಾವನ್ನಪ್ಪಿದ ದುರ್ದೈವಿಗಳು.

ನಕ್ಕರೆ ಅದೇ ಸ್ವರ್ಗ

ಟಿಕೆಟ್ ಪರೀಕ್ಷಕರು : (ಓರ್ವ ಪ್ರಯಾಣಿಕ ರೈಲಿನಲ್ಲಿ ಎರಡು ಟಿಕೆಟ್‌ನೊಂದಿಗೆ ಪ್ರಯಾಣಿಸುತ್ತಿದ್ದಾಗ) "ಎರಡು ಟಿಕೆಟ್ ಖರೀದಿಸಿದ ಕಾರಣ ಏನು?"
ಪ್ರಯಾಣಿಕ : "ಒಂದು ಕಳೆದರೆ ಮತ್ತೊಂದು ಇರಲಿ ಅಂತ"
ಟಿಕೆಟ್ ಪರೀಕ್ಷಕರು : "ಒಂದು ವೇಳೆ ಎರಡೂ ಕಳೆದು ಹೋದರೆ"
ಪ್ರಯಾಣಿಕ : "ಅದಕ್ಕಾಗಿಯೇ ನಾನು ತಿಂಗಳ ಪಾಸ್ ಅನ್ನೂ ಸಹ ಇಟ್ಟುಕೊಂಡಿದ್ದೇನೆ!"

ಮೈಸೂರು ಮಿತ್ರ
ಭಾನುವಾರ, 22 ಮೇ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ತನುವಿನ ಕೋಪ ಹಿರಿತನಕ್ಕೆ ಕೇಡು.
ಮನದ ಕೋಪ ತನ್ನ ಅರಿವಿಗೆ ಕೇಡು. –ಬಸವಣ್ಣ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ನರಿ ಕೂಗು ಗಿರಿ ಮುಟ್ಟೀತೆ?

ನಿಮ್ಮ ಪತ್ರಗಳು

ಇವರದು ಕಟ್ಟು–ಕೆಡವು ಪಾಲಿಸಿ!




ಮಾನ್ಯರೆ,

ಮೈಸೂರಿನ ನಂಜನಗೂಡು ರಸ್ತೆ ಜೆಎಸ್‌ಎಸ್ ಕಾಲೇಜು ಬಳಿ ಹಾಗೂ ಶ್ರೀರಾಂಪುರ ಹಳೆ ಚೆಕ್‌ಪೋಸ್ಟ್ ಬಳಿ ಹೆಚ್.ಡಿ.ಕೋಟೆ ರಸ್ತೆಯಲ್ಲಿ ಬಸ್ ತಂಗುದಾಣಗಳ ನಿರ್ಮಾಣ ಮಾಡಲಾಗುತ್ತಿದೆ. ಇವುಗಳನ್ನು ಯಾವ ಉದ್ದೇಶಕ್ಕಾಗಿ ನಿರ್ಮಾಣ ಮಾಡುತ್ತಿದ್ದಾರೆ. ಇದೊಂದು ಸಾರ್ಥಕ ಕಾಯಕವೇ? ಎಂಬುದು ನೋಡಿದ ತಕ್ಷಣ ಮನದಟ್ಟಾಗುತ್ತದೆ. ಕಾರಣ ಈ ಎರಡು ಕಡೆ ರಸ್ತೆ ಅಗಲೀಕರಣ ಪ್ರಸ್ತಾಪವಿದೆ. ಹಾಗಾಗಿ ಈ ರಸ್ತೆಗಳ ಆಜುಬಾಜಲ್ಲಿ ಮನೆಗಳು, ಕಾಂಪೌಂಡ್ ನಿರ್ಮಾಣ ಮಾಡುವುದಕ್ಕೂ ಅಧಿಕಾರಿಗಳು ನಿರ್ಬಂಧ ಹಾಕುತ್ತಿದ್ದಾರೆ. ಆದರೆ ಈ ಎರಡೂ ಕಡೆ ಪುಣ್ಯಾತ್ಮರು ಸಾರ್ವಜನಿಕರ ತೆರಿಗೆ ಹಣವನ್ನು ಪೋಲು ಮಾಡುವ ಉದ್ದೇಶವೇನು? ಇಂತಹ ಕಡೆ ರಸ್ತೆ ಅಗಲೀಕರಣ ಕೈಗೆತ್ತಿಕೊಂಡಾಗ ಇದನ್ನು ಒಡೆದು ಹಾಕುತ್ತಾರೆ ಎಂಬ ಸಾಮಾನ್ಯ ಜ್ಞಾನವೂ ಇಲ್ಲವೆ? ಅದು ಪಿಲ್ಲರ್ ಹಾಕಿ, ಇಟ್ಟಿಗೆಯಿಂದ ಸುಭದ್ರ ರೀತಿ ನಿರ್ಮಾಣ ಮಾಡಲಾಗುತ್ತಿದೆ. ಹಾಗಾಗಿ ಬಾರೀ ಪ್ರಮಾಣದಲ್ಲಿ ಹಣ ಖರ್ಚಾಗುತ್ತಿರುವುದು ಮನವರಿಕೆ ಆಗುತ್ತದೆ. ಸಂಬಂಧಪಟ್ಟವರು ಇದರತ್ತ ಕೂಡಲೇ ಗಮನಹರಿಸದಿದ್ದರೆ ಸಾರ್ವಜನಿಕರ ತೆರಿಗೆ ಹಣ ಪೋಲಾಗಲಿದೆ.

ಈ ಕಾರ್ಯವನ್ನು ನೋಡಿದರೆ ಅರಣ್ಯ ಇಲಾಖೆಯವರ ಮರ ನೆಡುವ ಮಹಾ ಕಾರ್ಯ ಕಣ್ಣೆದುರಿಗೆ ಬರುತ್ತದೆ. ಅವರು ಸಹ ವಿದ್ಯುತ್ ತಂತಿ ಹಾದು ಹೋಗಿರುವಲ್ಲಿ, ರಸ್ತೆಯ ಅಂಚಲ್ಲಿ ಗಿಡಗಳನ್ನು ನೆಡುವ ಘನ ಕಾರ್ಯ ಮಾಡುತ್ತಾರೆ. ಗಿಡಗಳು ಬೆಳೆದು ವಿದ್ಯುತ್ ತಂತಿಗೆ ತಾಗುವ ಹಂತಕ್ಕೆ ಬಂದಾಗ ಅದರ ನೆತ್ತಿಯನ್ನೇ ತುಂಡರಿಸುತ್ತಾರೆ. ಮತ್ತೆ ಸಸಿ ನೆಡುವ ಸಾರ್ಥಕತೆ ಏನು? ಇನ್ನು ರಸ್ತೆ ಅಗಲೀಕರಣ ಮಾಡಲೇಬೇಕಾಗುತ್ತದೆ. ಆಗ ಇನ್ನೇನು ಮರವಾಗುವ ಮಟ್ಟಕ್ಕೆ ಬೆಳೆದ ಸಸಿಯನ್ನು ಕೈಯ್ಯಾರೆ ತುಂಡರಿಸುತ್ತಾರೆ. ಇದೆಲ್ಲಾ ಪ್ರಾಕೃತಿಕ 'ಪಾಪ'ವಲ್ಲವೆ?

–ರಮೇಶ್, ಕುವೆಂಪುನಗರ, ಮೈಸೂರು.

ಮೊದಲು ಮೂಲಭೂತ ಸೌಲಭ್ಯ ಕಲ್ಪಿಸಿ, ಆಮೇಲೆ ಬೃಹತ್ ಪಾಲಿಕೆ ಬಗ್ಗೆ ಯೋಚಿಸಿ

ಮಾನ್ಯರೆ,

ಮೈಸೂರಿನಲ್ಲಿ ಕಳೆದ ಕೆಲವು ದಿನಗಳಿಂದ ಬೀಳುತ್ತಿರುವ ಮಳೆಯಿಂದ ನಗರದ ಗುಂಡಿಬಿದ್ದ ರಸ್ತೆಗಳಿಗೆ ಹಾಕಿದ್ದ ಡಾಂಬರು ಕಿತ್ತು ಹೋಗಿದೆ. ಅದರ ಜೊತೆ ಮುಂಚೆಯೇ ಹಾಳಾಗಿದ್ದ ರಸ್ತೆಗಳು ಗುಂಡಿಗಳಾಗಿ ರಸ್ತೆಯೇ ಇಲ್ಲದಂತಾಗಿ ಪಾದಚಾರಿಗಳು, ವಾಹನಚಾಲಕರು ಪ್ರಾಣ ಕೈಯ್ಯಲ್ಲಿ ಹಿಡಿದುಕೊಂಡು ಓಡಾಡುವ ಪರಿಸ್ಥಿತಿ ಇದೆ. ಆದರೆ ಅವುಗಳ ರಿಪೇರಿಗೆ ಗಮನಹರಿಸದೆ, ನಗರದ ಹೊರವಲಯ ದಲ್ಲಿರುವ ಹೂಟಗಳ್ಳಿ, ಕಡಕೊಳ, ಬೋಗಾದಿ, ರಮ್ಮನಹಳ್ಳಿ ಮುಂತಾದ ಪಟ್ಟಣ ಪಂಚಾಯಿತಿ, ಗ್ರಾಮ ಪಂಚಾಯ್ತಿಯ ವ್ಯಾಪ್ತಿಯಲ್ಲಿರುವ ಗ್ರಾಮಗಳನ್ನು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿಸಿಕೊಂಡು ಬೃಹತ್ ಮಹಾ ನಗರಪಾಲಿಕೆಯನ್ನಾಗಿ ಮಾರ್ಪಡಿಸುವ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ. ಇದರಿಂದ ನಗರಪಾಲಿಕೆಗೆ ಬರುವ ಲಾಭದ ಬಗ್ಗೆ ಯೋಚನೆಯೇ ಹೊರತು ಕೆಟ್ಟು ನಿಂತಿರುವ ರಸ್ತೆ ರಿಪೇರಿಯ ಬಗ್ಗೆಯಾಗಲೀ ಅಥವಾ ಒಳಚರಂಡಿಗಳು ಕಟ್ಟಿಕೊಂಡು ಮನೆಯ ಒಳಗಡೆ ಬರುತ್ತಿರುವ ಗಲೀಜು ನೀರಿನಿಂದ ನಾಗರಿಕರು ಪಡುತ್ತಿರುವ ತೊಂದರೆ ನಿವಾರಿಸುವ ಬಗ್ಗೆಯಾಗಲೀ ಅಥವಾ ಮಳೆ ಬಂದಾಗ ತಗ್ಗು ಪ್ರದೇಶ ಗಳಲ್ಲಿ ಇರುವ ಮನೆಗಳಿಗೆ ನೀರು ನುಗ್ಗಿ ಕಷ್ಟ ಅನುಭವಿಸುತ್ತಿರುವವರಿಗೆ ಶಾಶ್ವತ ಪರಿಹಾರ ಕಲ್ಪಿಸುವ ಬಗ್ಗೆಯಾಗಲೀ ಯೋಚಿಸದೆ ಕೇವಲ ಲಾಭದ ಬಗ್ಗೆ ಯೋಚಿ ಸುತ್ತಿರುವ ಮೇಯರ್ ಮತ್ತು ಪಾಲಿಕೆ ಸದಸ್ಯರು, ಆಯುಕ್ತರು ಬೃಹತ್ ನಗರಪಾಲಿಕೆ ಯೋಚನೆಗೆ ಮುಂಚೆ. ಈಗಿರುವ ಬಡಾವಣೆಗಳಿಗೆ ಸರಿಯಾದ ಸೌಲಭ್ಯಗಳನ್ನು ಕಲ್ಪಿಸುವತ್ತ ಚಿಂತನೆ ಮಾಡಲಿ.

–ಬ್ಯಾಂಕ್ ಶಿವಕುಮಾರ್, ಜೆ.ಪಿ.ನಗರ ಮೈಸೂರು.

ಮಳೆ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಿ

ಮಾನ್ಯರೆ,

ಕಳೆದ 8 ದಿನಗಳಿಂದ ಒಂದೇ ಸಮನೆ ಸುರಿಯುತ್ತಿರುವ ಅಕಾಲಿಕ ಮಳೆಯಿಂದಾಗಿ ಮೈಸೂರು ಆಶ್ರಯ ಬಡಾವಣೆಯಾದ 45ನೇ ವಾರ್ಡ್ ವ್ಯಾಪ್ತಿಯ ಆನಂದ ನಗರದ 50ಕ್ಕೂ ಹೆಚ್ಚು ಮನೆಗಳು ಸಂಪೂರ್ಣವಾಗಿ ಜಲಾವೃತವಾಗಿವೆ. ಮಳೆ



ನೀರಿನ ಜೊತೆ ಚರಂಡಿಯ ಮಲಿನ ನೀರು ತುಂಬಿಕೊಂಡಿರುವುದರಿಂದ ಹುಳ ಉಪಟಗಳು, ಹಾವು–ಚೇಳುಗಳು ತೇಲಾಡುತ್ತಿದ್ದು, ಸ್ಥಳೀಯ ನಿವಾಸಿಗಳು ಸಾಂಕ್ರಾಮಿಕ ರೋಗ ಹರಡುವ ಭೀತಿಯಲ್ಲಿದ್ದಾರೆ. ವಯೋವೃದ್ಧರು ಹಾಗೂ ಅನಾರೋಗ್ಯ ಪೀಡಿತರಿಗೆ ತುಂಬಾ ತೊಂದರೆಯಾಗಿದೆ.

ಭೂ ಮಾಫಿಯಾದವರು ರಾಜಕಾಲುವೆಯನ್ನು ಒತ್ತುವರಿ ಮಾಡಿಕೊಂಡು, ಅಕ್ರಮವಾಗಿ ಮನೆ ನಿರ್ಮಿಸಿರುವುದರಿಂದ ಬೋಗಾದಿಯ 4 ಕೆರೆಗಳು ಸಂಪೂರ್ಣವಾಗಿ ಮುಚ್ಚಿವೆ.

ರಾಜಕಾಲುವೆಯ ಒತ್ತುವರಿಯನ್ನು ನಿರ್ದಾಕ್ಷಿಣ್ಯವಾಗಿ ತೆರವುಗೊಳಿಸಬೇಕು ಹಾಗೂ ಕಳೆದ ನವೆಂಬರ್‌ನಲ್ಲಿ ಮಳೆಯಿಂದ ತುಂಬಿಕೊಂಡು ಜಲಾವೃತವಾಗಿದ್ದಾಗ ಸ್ಥಳೀಯ ಶಾಸಕ ಜಿ.ಟಿ.ದೇವೇಗೌಡರು ಹಾಗೂ ಮಹಾ ನಗರ ಪಾಲಿಕೆ ಸದಸ್ಯರು ಬಡಾವಣೆಯ 45 ಕುಟುಂಬಗಳಿಗೆ ಪರಿಹಾರ ಕೊಡಿಸುತ್ತೇವೆಂದು ಹೇಳಿ ಸರ್ವೆ ಕಾರ್ಯ ನಡೆಸಿ, ಮೈಸೂರು ತಾಲೂಕು ತಹಸೀಲ್ದಾರ್ ಅವರಿಗೆ ಅರ್ಜಿ ನೀಡಿದ್ದರೂ ಸಹ ಇದುವರೆವಿಗೂ ಪರಿಹಾರ ದೊರೆತಿಲ್ಲ ಮತ್ತು ಮಳೆ ಬಂದಾಗ ಪದೇ ಪದೆ ನೀರು ತುಂಬಿಕೊಳ್ಳುತ್ತಿರುವುದು ಇಲ್ಲಿನ ನಿವಾಸಿಗಳಿಗೆ ಆತಂಕವನ್ನುಂಟು ಮಾಡಿದೆ. ಈ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವರಾಗಲಿ, ಲೋಕಸಭಾ ಸದಸ್ಯರಾಗಲೀ, ಜಿಲ್ಲಾಡಳಿತವಾಗಲೀ ಅಥವಾ ಸಂಬಂಧಪಟ್ಟ ಯಾರೊಬ್ಬರೂ ಸ್ಥಳಕ್ಕೆ ಭೇಟಿ ನೀಡದೆ ಸಮಸ್ಯೆಯನ್ನು ಬಗೆಹರಿಸಿಕೊಡದಿರುವುದು ಖಂಡನೀಯ ಹಾಗೂ ಶೀಘ್ರ ಸಮಸ್ಯೆಗೆ ಶಾಶ್ವತ ಪರಿಹಾರ ದೊರಕಿಸಿಕೊಡುವಂತೆ ಮನವಿ.

–ಸೋಮಯ್ಯ ಮಲೆಯೂರು, ಆಶ್ರಯ ಬಡಾವಣೆ ನಿವಾಸಿಗಳ ಒಕ್ಕೂಟ,

ಭಗವದ್ಗೀತೆ ಶ್ಲೋಕಗಳ ಕಂಠಪಾಠ ಸ್ಪರ್ಧೆ

500 ವಿಜೇತರಿಗೆ ಗಣಪತಿ ಸಚ್ಚಿದಾನಂದ ಶ್ರೀಗಳಿಂದ ಪ್ರಮಾಣ ಪತ್ರ ವಿತರಣೆ

9 ಆವೃತ್ತಿಗಳಲ್ಲಿ ಆನ್‌ಲೈನ್ ಮೂಲಕ ನಡೆದ ಸ್ಪರ್ಧೆಯಲ್ಲಿ ಮೂರು ಸಾವಿರ ಮಂದಿ ಭಾಗಿ




ಭಗವದ್ಗೀತೆ ಶ್ಲೋಕಗಳ ಕಂಠಪಾಠ ಸ್ಪರ್ಧೆ ವಿಜೇತರು. ಮತ್ತೊಂದು ಚಿತ್ರದಲ್ಲಿ ವಿಜೇತ ಬಾಲಕಿಗೆ ಗಣಪತಿ ಸಚ್ಚಿದಾನಂದ ಶ್ರೀಗಳು ಪ್ರಮಾಣಪತ್ರ ಹಾಗೂ ಪದಕ ವಿತರಿಸಿದರು.

ಮೈಸೂರು,ಮೇ 21(ಎಂಟಿವೈ)– ಭಗವದ್ಗೀತೆ ಶ್ಲೋಕಗಳ ಕಂಠಪಾಠ ಪರೀಕ್ಷೆಯಲ್ಲಿ ತೇರ್ಗಡೆಯಾದ 500ಕ್ಕೂ ಹೆಚ್ಚು ಮಂದಿಗೆ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಗಳು ಪ್ರಮಾಣ ಪತ್ರ ಹಾಗೂ ಪದಕ ವಿತರಿಸಿ, ಆಶೀರ್ವದಿಸಿದರು. ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಗಳ 80ನೇ ಜನ್ಮ ದಿನದ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ತೇರ್ಗಡೆಯಾದವರಿಗೆ ಪ್ರಮಾಣ ಪತ್ರ ಮತ್ತು ಪದಕಗಳನ್ನು ವಿತರಿಸಲಾಯಿತು.

ಮೈಸೂರಿನ ಅವಧೂತ ದತ್ತಪೀಠದ ವತಿಯಿಂದ ಭಗವದ್ಗೀತೆಯ 18 ಅಧ್ಯಾಯಗಳು ಮತ್ತು 700 ಶ್ಲೋಕಗಳನ್ನು ಕಂಠಪಾಠ ಮಾಡಿಸಿ ಅವರಿಗೆ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಅದರಂತೆ 2017 ರಿಂದ ವಿವಿಧ ಆವೃತ್ತಿಗಳಲ್ಲಿ ಸ್ಪರ್ಧೆಗಳು ನಡೆಸುತ್ತಿದ್ದು, ಈ ಸ್ಪರ್ಧೆಯಲ್ಲಿ ಈವರೆಗೆ ಸುಮಾರು 3000 ಮಂದಿ ಭಾಗವಹಿಸಿದ್ದರು. 2021ನೇ ಸಾಲಿನಿಂದ ಆರಂಭವಾದ 9ನೇ ಆವೃತ್ತಿಯಲ್ಲಿ 900ಕ್ಕೂ ಹೆಚ್ಚು ಆಸಕ್ತರು ಭಗವದ್ಗೀತೆ ಶ್ಲೋಕಗಳ ಕಂಠಪಾಠ ಸ್ಪರ್ಧೆಯಲ್ಲಿ ಭಾಗವಹಿಸಿ, ಸಂಸ್ಕೃತ ಪಂಡಿತರ ಎದುರು ಪರೀಕ್ಷೆ ಎದುರಿಸಿ ದ್ದಾರೆ. ಅದರಲ್ಲಿ ತೇರ್ಗಡೆಯಾದ 500 ಅಭ್ಯರ್ಥಿಗಳಿಗೆ ಇಂದು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಗಳು ಪ್ರಮಾಣ ಪತ್ರ ಹಾಗೂ ಪದಕ ವಿತರಿಸಿ ಆಶೀರ್ವದಿಸಿದರು.

ಈ ಸ್ಪರ್ಧೆಯಲ್ಲಿ ದೇಶ, ವಿದೇಶ ಸೇರಿದಂತೆ ಹಲವೆಡೆಯಿಂದ ಆನ್‌ಲೈನ್ ಮೂಲಕ ತರಗತಿಗೆ ಹಾಜರಾಗುವ ಮೂಲಕ ಪ್ರತಿ ನಿತ್ಯ ಒಂದು ಗಂಟೆಗಳ ಕಾಲ ಭಗವದ್ಗೀತೆಯ 18 ಅಧ್ಯಾಯಗಳು ಮತ್ತು 700 ಶ್ಲೋಕಗಳನ್ನು ಕಂಠಪಾಠ ತರಬೇತಿಯನ್ನು ನೀಡಲಾಗಿತ್ತು. ಈ ಬಾರಿಯ ಸ್ಪರ್ಧೆಯಲ್ಲಿ 5 ರಿಂದ 71 ವರ್ಷವರೆಗಿನ ವಯೋಮಾನ ದವರು ಭಾಗವಹಿಸಿದ್ದರು. ಭಗವದ್ಗೀತೆಯ ಶ್ಲೋಕಗಳ 10ನೇ ಆವೃತ್ತಿ ಆರಂಭವಾಗಿದ್ದು, ಡಿಸೆಂಬರ್‌ನಲ್ಲಿ ನಡೆಯುವ 'ಗೀತ ಜಯಂತಿ' ವೇಳೆ ಪ್ರಮಾಣ ಪತ್ರ ಹಾಗೂ ಪದಕ ವಿತರಿಸಲಾಗುತ್ತದೆ. 9ನೇ ಆವೃತ್ತಿಯಲ್ಲಿ ಭಾಗವಹಿಸಿದ ಗುಂಟೂರಿನ 5 ವರ್ಷದ ಪುಟಾಣಿ ನೇಹಾ, 71 ವರ್ಷ ವಯೋಮಾನದವರಾದ ಆಂಧ್ರಪ್ರದೇಶದ ಅಮಲಾಪುರದ ವಿಶ್ವನಾಥ್, ಹೈದ್ರಾಬಾದ್‌ನ ಕಸ್ತೂರಿ ದೇವಿ, ವೆಲ್ಲೂರಿನ ಜಯಂತಿ ಪ್ರಮಾಣ ಪತ್ರ ಸ್ವೀಕರಿಸಿದ್ದು ವಿಶೇಷವಾಗಿತ್ತು.

ಶ್ರೀಗಳ ಹುಟ್ಟುಹಬ್ಬ ಧಾರ್ಮಿಕ ಕಾರ್ಯಕ್ರಮಕ್ಕೆ ಆನ್‌ಲೈನ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಚಾಲನೆ



ಮೈಸೂರು,ಮೇ 21(ಜಿಎ)– ಮೈಸೂರಿನ ಅವಧೂತ ದತ್ತ ಪೀಠಂನ ಪೀಠಾಧಿಪತಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 80ನೇ ವರ್ಷದ ಹುಟ್ಟು ಹಬ್ಬದ ಅಂಗವಾಗಿ ಆಯೋಜಿಸಿರುವ ಕಾರ್ಯಕ್ರಮವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭಾನುವಾರ(ಮೇ22) ಆನ್‌ಲೈನ್ ಮೂಲಕ ಉದ್ಘಾಟಿಸಲಿದ್ದಾರೆ.

ಮೈಸೂರಿನ ಊಟಿ ರಸ್ತೆಯಲ್ಲಿರುವ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಮೇ 22ರಂದು ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 80ನೇ ವರ್ಷದ ಹುಟ್ಟು ಹಬ್ಬ ಹಾಗೂ ಅನೇಕ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದು, ಬೆಳಗ್ಗೆ 11 ಗಂಟೆಗೆ ಆನ್‌ಲೈನ್ ಮೂಲಕ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಉದ್ಘಾಟಿಸಲಿದ್ದಾರೆ.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 80ನೇ ವರ್ಷದ ಹುಟ್ಟು ಹಬ್ಬ, ಜಯಲಕ್ಷ್ಮಿ ಮಾತಾ ಅವರ ಜನ್ಮ ಶತಮಾನೋತ್ಸವ, ನಾದಮಂಟಪದ 24ನೇ ವಾರ್ಷಿಕೋತ್ಸವ ಪ್ರಯುಕ್ತ ಅವಧೂತ ದತ್ತ ಪೀಠಂನಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಅದರಂತೆ ಮೇ 22ರ ಬೆಳಗ್ಗೆ 9ಕ್ಕೆ ಶ್ರೀಚಕ್ರ ಪೂಜೆ, 9.30ಕ್ಕೆ ಮಹಾ ಗಣಪತಿ ಹೋಮದ ಪೂರ್ಣಾಹುತಿ 9.45ಕ್ಕೆ ಹನುಮ ದ್ವಾರ ಉದ್ಘಾಟನೆ ನಡೆಯಲಿದ್ದು, 11ಕ್ಕೆ ಪ್ರಧಾನ ಮಂತ್ರಿ ಮೋದಿ ಅವರು ಕಾರ್ಯಕ್ರಮವನ್ನು ಅಧಿಕೃತವಾಗಿ ಉದ್ಘಾಟಿಸಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಕುರಿತು ಮಾತನಾಡಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಹೈದರಾಬಾದ್‌ನ ತ್ರಿದಂಡಿ ಚಿನ್ನ ಶ್ರೀಮನ್ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಹಕಾರ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರೂ ಆದ ಎಸ್.ಟಿ.ಸೋಮಶೇಖರ್, ಸಂಸದ ಪ್ರತಾಪ್ ಸಿಂಹ, ಶಾಸಕ ಎಸ್.ಎ. ರಾಮದಾಸ್ ಸೇರಿದಂತೆ ಸಹಸ್ರಾರು ಭಕ್ತರು ಪಾಲ್ಗೊಳ್ಳಲಿದ್ದಾರೆ.






ಶನಿವಾರ ಹುಟ್ಟುಹಬ್ಬ ಆಚರಿಸಿಕೊಂಡ ಯುವ ಮುಖಂಡರಾದ ಎಲ್.ಚೌಡಪ್ಪ ಅವರನ್ನು ಅವರ ಅಭಿಮಾನಿಗಳು, ಸ್ನೇಹಿತರು, ಹಿತೈಷಿಗಳು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು. ಇದೇ ವೇಳೆ ಮೇಟಗಳ್ಳಿ ರಂಗರಾವ್ ಅಂಧಮಕ್ಕಳ ಶಾಲೆಯಲ್ಲಿ ಫಲಹಾರ ವಿತರಿಸಲಾಯಿತು. ಚಿತ್ರದಲ್ಲಿ ಶಾಸಕ ಎಲ್.ನಾಗೇಂದ್ರ ಕಾರ್ಪೋರೇಟರ್‌ಗಳಾದ ರವೀಂದ್ರ, ಪ್ರಮೀಳಾ, ಮುಖಂಡರಾದ ಸ್ವೀಟ್ ಮಹೇಶ್, ರಮೇಶ್, ಕಿರಣ್‌ಗೌಡ, ಚೌಡಪ್ಪನವರ ಸ್ನೇಹ ಬಳಗದ ಸದಸ್ಯರು, ಯುವ ಮುಖಂಡರನ್ನು ಕಾಣಬಹುದು.

ಜೂನ್ 21ಕ್ಕೆ ಮೈಸೂರಿಗೆ ಪ್ರಧಾನಿ ನರೇಂದ್ರ ಮೋದಿ ಆಗಮನದ ಹಿನ್ನೆಲೆ

ಮೈಸೂರಲ್ಲಿ ಉನ್ನತ ಮಟ್ಟದ ಸಭೆಗೆ ವಿಶ್ವನಾಥ್ ಆಗ್ರಹ

- ಮುಖ್ಯ ಕಾರ್ಯದರ್ಶಿ, ಸಚಿವರೊಂದಿಗೆ ಸಿಎಂ ಚರ್ಚಿಸಬೇಕು
- ಮೈಸೂರು ಅದ್ವಾನ ಪ್ರಧಾನಿಗಳಿಗೆ ತಿಳಿಯಬಾರದು
- ಪ್ರಧಾನಿ ನರೇಂದ್ರ ಮೋದಿ ಬಳಿ ಕೇಳಬೇಕಾದ ವಿಷಯ ಪಟ್ಟಿ ಮಾಡಿ
- ಮೈಸೂರು ಪ್ಯಾರಿಸ್ ಘೋಷಣೆ ಏನಾಯಿತು ಕೇಳಿ



ಮೈಸೂರು,ಮೇ 21(ಎಂಟಿವೈ)– ಮೈಸೂರಲ್ಲಿ ಜೂ.21ರಂದು ಜರುಗಲಿರುವ ಅಂತರರಾಷ್ಟ್ರೀಯ ಯೋಗ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಪ್ರಧಾನಿ ನರೇಂದ್ರ ಮೋದಿ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿ, ಸಂಬಂಧಿಸಿದ ಸಚಿವರುಗಳೊಂದಿಗೆ ಮೈಸೂರಲ್ಲಿ ತುರ್ತು ಉನ್ನತ ಮಟ್ಟದ ಸಭೆ ನಡೆಸಿ ಸಿದ್ಧತೆ ಮಾಡಿಕೊಳ್ಳಬೇಕು ಎಂದು ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಸಲಹೆ ನೀಡಿದ್ದಾರೆ.

ಮೈಸೂರಿನ ಜಲದರ್ಶಿನಿ ಆವರಣದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮೈಸೂರಿಗೆ ಪ್ರಧಾನಿ ನರೇಂದ್ರ ಮೋದಿ ಹಾಗೆ ಬಂದು, ಹೀಗೆ ಹೋದರು ಎಂಬಂತಾಗಬಾರದು. ಪ್ರಧಾನಿಗೆ ಕೊಳಚೆ ನಗರಕ್ಕೆ ಬಂದಿದ್ದೇನೆ ಎನಿಸಬಾರದು. ಮಳೆ ಹಿನ್ನೆಲೆಯಲ್ಲಿ ಮೈಸೂರಿನ ಹಲವೆಡೆ ಅದ್ವಾನವಾಗಿದೆ. ಅದನ್ನು ಸರಿಪಡಿಸುವ ಕೆಲಸ ಆಗಬೇಕು. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು, ಸರ್ಕಾರದ ಮುಖ್ಯ ಕಾರ್ಯದರ್ಶಿ, ಮೈಸೂರು ಜಿಲ್ಲಾ ಮಂತ್ರಿ, ಯೋಗ ದಿನಕ್ಕೆ ಸಂಬಂಧಪಟ್ಟ ಮಂತ್ರಿಗಳು, ಅಧಿಕಾರಿಗಳು ಮೈಸೂರಿಗೆ ಬಂದು ಸಭೆ ಮಾಡಬೇಕು. ಬೆಂಗಳೂರಲ್ಲಿ ಕುಳಿತು ಸಭೆ ಮಾಡಿದರೆ ಪರಿಣಾಮಕಾರಿಯಾಗುವುದಿಲ್ಲ ಎಂದು ಹೇಳಿದರು.

ಪೂರ್ವಭಾವಿ ಸಭೆಯಲ್ಲಿ ಪ್ರಧಾನಿಗಳು ಮೈಸೂರಿಗೆ ಬಂದಾಗ ಏನು ಕೇಳಬೇಕು ಎಂದು ಪಟ್ಟಿ ಸಿದ್ಧಮಾಡಿಕೊಳ್ಳಬೇಕು, ಮೈಸೂರು ನಗರ ಪಾರಂಪರಿಕ ನಗರಿ. ಈ ನಗರಕ್ಕೆ ತನ್ನದೇ ಆದ ಇತಿಹಾಸ, ಮಹತ್ವವಿದೆ. ಅದನ್ನು ಕಾಪಾಡಿಕೊಂಡು ಮುಂದುವರೆಯಲು ಕೇಂದ್ರದಿಂದ ಹೆಚ್ಚಿನ ಅನುದಾನ ನೀಡುವಂತೆ ಮನವಿ ಸಲ್ಲಿಸಬೇಕು ಎಂದು ವಿಶ್ವನಾಥ್ ಹೇಳಿದರು.

ಲೋಕಸಭಾ ಚುನಾವಣೆ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ಮೈಸೂರಿಗೆ ಬಂದಿದ್ದಾಗ ಮೈಸೂರನ್ನು ಪ್ಯಾರಿಸ್ ಮಾಡುವುದಾಗಿ ಘೋಷಿಸಿದ್ದರು. ಅದು ಏನಾಯಿತು ಎಂದು ನೀವೆ ಕೇಳಿ ಎಂದು ಪತ್ರಕರ್ತರಿಗೆ ಹೇಳಿದರು.

ಪಠ್ಯ ಕ್ರಮ ಕೇಸರೀಕರಣಕ್ಕೆ ವಿಶ್ವನಾಥ್ ವಿರೋಧ

ಪಠ್ಯ ಪರಿಷ್ಕರಣೆಗೆ ಶಿಕ್ಷಣ ತಜ್ಞರಿರಬೇಕು; ಸಂಘ ಪರಿವಾರದವರಲ್ಲ!

ಮೈಸೂರು: ಪಠ್ಯಕ್ರಮವನ್ನು ಕೇಸರೀಕರಣ ಮಾಡುವ ಹುನ್ನಾರ ನಡೆಯುತ್ತಿದೆ ಎಂದೆನಿಸುತ್ತಿದ್ದು, ಪಠ್ಯಪುಸ್ತಕ ಪರಿಷ್ಕರಣೆ ರಾಜಕೀಯ ಸಂಘರ್ಷಕ್ಕೆ ಎಡೆ ಮಾಡಿಕೊಡಬಾರದು ಎಂದು ಹೆಚ್.ವಿಶ್ವನಾಥ್ ಕಿಡಿಕಾರಿದ್ದಾರೆ.

ದೇಶ ಸಮೃದ್ಧಿಯಾಗಬೇಕಾದರೆ, ಶಿಕ್ಷಣ ಹಾಗೂ ಸಂಸ್ಕೃತಿ ಗಟ್ಟಿಗೊಳ್ಳಬೇಕಾಗುತ್ತದೆ. ಎಲ್ಲಿ ಇವು ದುರ್ಬಲಗೊಳ್ಳುತ್ತದೋ ಅಂತಹ ದೇಶ ಹಾಳಾಗುತ್ತದೆ. ಹಾಗಾಗಿ ಶಿಕ್ಷಣ ಸರಿದಾರಿಯತ್ತ ಸಾಗಬೇಕು. ಯಾವ ಪಕ್ಷದ ಸರ್ಕಾರ ಆಡಳಿತಕ್ಕೆ ಬರುತ್ತದೋ ಆ ಪಕ್ಷದ ನೀತಿ, ಸಿದ್ಧಾಂತವನ್ನು ಪಠ್ಯಕ್ರಮದಲ್ಲಿ ಅಳವಡಿಸುವುದು ಸರಿಯಲ್ಲ. ಇದರಿಂದ ಶಿಕ್ಷಣದ ಹಾದಿ ತಪ್ಪಿಸಿದಂತಾಗುತ್ತದೆ. ಸರ್ಕಾರ ಪಠ್ಯಕ್ರಮವನ್ನು ಕೇಸರೀಕರಣ ಮಾಡುವುದಕ್ಕೆ ಬಿಡಬಾರದು. ಶಿಕ್ಷಣ ತಜ್ಞರೊಂದಿಗೆ ಸಮಾಲೋಚಿಸಿ ದೇಶದ ಸುಭದ್ರತೆ ಉತ್ತಮ ಶಿಕ್ಷಣ ನೀಡುವುದಕ್ಕೆ ಪೂರಕವಾದ ಪಠ್ಯಕ್ರಮ ತಯಾರಿಸಬೇಕು ಎಂದು ಆಗ್ರಹಿಸಿದರು.

ರಾಜ್ಯದಲ್ಲಿ ರಚಿಸಲಾಗಿರುವ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಗೆ ಶಿಕ್ಷಣ ತಜ್ಞರನ್ನು ನಿಯೋಜಿಸದೇ ಸಂಘ ಪರಿವಾರದ ಕಾರ್ಯಕರ್ತ ರೋಹಿತ್ ಚಕ್ರತೀರ್ಥನನ್ನು ನೇಮಿಸಿರುವುದು ದುರಂತ. ಕೇವಲ ಎರಡು ಪುಸ್ತಕ ಬರೆದು, ಕೆಲವು ಪತ್ರಿಕೆಗಳ ಅಂಕಣ ಬರೆದ ಮಾತ್ರಕ್ಕೆ ಶಿಕ್ಷಣ ತಜ್ಞ ಎನಿಸಿಕೊಳ್ಳಲು ಸಾಧ್ಯವಿಲ್ಲ. ರೋಹಿತ್ ಚಕ್ರವರ್ತಿ ಯಾರು, ಆತನ ಹಿನ್ನೆಲೆ ಏನು? ಎಂದು ಸರ್ಕಾರ ಜನರ ಮುಂದೆ ಇಡಬೇಕು ಎಂದರು.

ಪಠ್ಯಪುಸ್ತಕದಲ್ಲಿ ಕೇಸರಿಕರಣ ನುಸುಳುತ್ತಿರುವುದು ಅಪಾಯಕಾರಿ. ಧರ್ಮ ಆಧಾರಿತ ಪಠ್ಯ ಯಾವುದೇ ಕಾರಣಕ್ಕೂ ಬೇಡ. ಯಜ್ಞ ಕುಂಡ ಯಾವ ಕಡೆ ಇರಬೇಕು ಎಂದು ಪಠ್ಯಬೋಧನೆ ಮಾಡುವುದು ಯಾರಿಗೆ ಬೇಕು? ಅಲ್ಲದೆ, ಕೆ.ಬಿ.ಹೆಡಗೇವಾರ್ ಯಾರು ಎಂಬುದೇ ನಮಗೆ ಗೊತ್ತಿಲ್ಲ. ಬಾಯಿಗೆ ಬಂದಂಗೆ ಯಾರು ಯಾರೋದು ಪಾಠ ಸೇರಿಸುವುದು ಸರಿಯಲ್ಲ. ಹೆಡಗೇವಾರ್‌ಗೂ ಟಿಪ್ಪು ಸುಲ್ತಾನ್‌ಗೂ ಹೋಲಿಕೆ ಮಾಡುತ್ತಿರುವುದು ಕೂಡ ಸಮಂಜಸವಲ್ಲ. ಟಿಪ್ಪು ಬ್ರಿಟಿಷರ ವಿರುದ್ಧ ಹೋರಾಡಿದ ವೀರ ಚರಿತ್ರೆ ಎಲ್ಲರಿಗೂ ಗೊತ್ತಿದೆ. 'ಮೈಸೂರು ಹುಲಿ' ಎನ್ನುವುದು ಬಿರುದಷ್ಟೇ. ಬ್ರಿಟಿಷರಿಗೆ ಮಂಡಿಯೂರದೇ ತನ್ನ ಮಕ್ಕಳನ್ನು ಒತ್ತೆ ಇಟ್ಟ ಇತಿಹಾಸ ಟಿಪ್ಪುಸುಲ್ತಾನ್‌ಗೆ ಇದೆ. ಆದರೆ, ಹೆಡಗೇವಾರ್ ಏನು ಮಾಡಿದರು ಎಂಬುದು ಎಲ್ಲರಿಗೂ ತಿಳಿದಿದೆ. ಇವರು ಬ್ರಿಟಿಷರ ಮುಂದೆ ಮಂಡಿಯೂರಿದ್ದರು ಎಂದು ಕಿಡಿಕಾರಿದರು.

ಮೈಸೂರಲ್ಲಿ ರಾಜಕಾಲುವೆ ಒತ್ತುವರಿ ತೆರವುಗೊಳಿಸಿ

ಮೈಸೂರು: ಬೆಂಗಳೂರು–ಮೈಸೂರು ಸೇರಿದಂತೆ ರಾಜ್ಯಾದ್ಯಂತ ಮಳೆಯಿಂದ ಅಪಾರ ಹಾನಿಯುಂಟಾಗಿ ಸಾರ್ವಜನಿಕರು ಪರದಾಡುವ ಸ್ಥಿತಿ ನಿರ್ಮಾಣಗೊಂಡಿದ್ದು, ತಕ್ಷಣ ಮೈಸೂರು ಸೇರಿದಂತೆ ಎಲ್ಲೆಡೆ ರಾಜಕಾಲುವೆ ಒತ್ತುವರಿಯನ್ನು ತೆರವುಗೊಳಿಸಲು ಕ್ರಮ ಜರುಗಿಸಬೇಕೆಂದು ಎಂಎಲ್‌ಸಿ ಹೆಚ್.ವಿಶ್ವನಾಥ್ ಆಗ್ರಹಿಸಿದ್ದಾರೆ.

ಮೈಸೂರು ಸೇರಿದಂತೆ ರಾಜ್ಯಾದ್ಯಂತ ರಾಜಕಾಲುವೆಗಳ ಅತಿಕ್ರಮಣವಾಗಿದೆ. ನಗರೀಕರಣ ಹೆಚ್ಚಾಗುತ್ತಿದೆ. ಕೆರೆ, ಕಟ್ಟೆ, ಕಾಲುವೆಗಳ ಲಿಂಕ್ ಕಟ್ಟಾಗಿದೆ. ಇದರಿಂದಲೇ ಮಳೆ ನೀರು ಸರಾಗವಾಗಿ ಹರಿದು ಹೋಗದೆ ತಗ್ಗು ಪ್ರದೇಶಕ್ಕೆ ನುಗ್ಗುತ್ತಿದೆ. ಸಿದ್ದರಾಮಯ್ಯನವರು ಅಧಿಕಾರದಲ್ಲಿದ್ದ ವೇಳೆ ಬೆಂಗಳೂರಿನ ರಾಜಕಾಲುವೆ ಒತ್ತುವರಿ ತೆರವು ಆರಂಭಿಸಿದ್ದರು. ಆ ಜಾಗದಲ್ಲಿ ಚಿತ್ರ ನಟ ದರ್ಶನ್, ರಾಜಕಾರಣಿ ಶಾಮನೂರು ಶಿವಶಂಕರಪ್ಪ ಅವರ ಮನೆಗಳಿವೆ ಎಂಬ ಕಾರಣಕ್ಕೆ ತೆರವು ಕಾರ್ಯಾಚರಣೆ ಸ್ಥಗಿತಗೊಂಡಿತು ಎಂದರು.

ಇವರಿಬ್ಬರ ಮನೆ ಉಳಿಯಿತು. ನೂರಾರು ಬಡವರು ಮಾತ್ರ ಮನೆ ಕಳೆದು ಕೊಂಡು ಬೀದಿಗೆ ಬಿದ್ದರು. ಶ್ರೀಮಂತರ ಮನೆಗಳು ಹಾಗೇ ಉಳಿದವು. ಆದ್ದರಿಂದ ಮೈಸೂರು ಸೇರಿದಂತೆ ಎಲ್ಲೆಡೆ ರಾಜಕಾಲುವೆ ಒತ್ತುವರಿ ತೆರವು ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಕಳೆದ ಕೆಲ ವರ್ಷದಿಂದ ಹವಾಮಾನ ವೈಪರೀತ್ಯದಿಂದ ವಾತಾವರಣದಲ್ಲಿ ಏರುಪೇರಾಗುತ್ತಿದೆ. ಇದರಿಂದ ಮೈಸೂರು, ಬೆಂಗಳೂರಲ್ಲಿ ಹಲವು ಬಡಾವಣೆಗಳು ಜಲಾವೃತವಾಗಿ ಜನರು ಪರದಾಡುವಂತಾಗಿದೆ. ಮನೆಗಳಿಗೆ ನೀರು ನುಗ್ಗಿ ಜನ ಪರಿತಪಿಸುತ್ತಿದ್ದಾರೆ. ದೊಡ್ಡ ಮಟ್ಟದಲ್ಲಿ ಅವಾಂತರಗಳಾಗುತ್ತಿವೆ ಎಂದರು.

ಅಮೆರಿಕಾದಲ್ಲಿ ಹವಾಮಾನದಲ್ಲಿ ಏರುಪೇರಾದರೆ ವಿಜ್ಞಾನಿಗಳು ಹಾಗೂ ಪರಿಸರವಾದಿಗಳ ಅಭಿಪ್ರಾಯ ಕೇಳಿ ಅಗತ್ಯ ಕ್ರಮ ಕೈಗೊಳ್ಳುತ್ತಾರೆ. ಆದರೆ ನಮ್ಮಲ್ಲಿ ಮಳೆ ಬಂದಾಗ ಚರಂಡಿ ಸ್ವಚ್ಛಗೊಳಿಸುವುದಕ್ಕೆ ಮುಂದಾಗುತ್ತಾರೆ. ಆದರೆ ಶಾಶ್ವತ ಪರಿಹಾರ ಕಂಡು ಹಿಡಿಯಲು ಮಾತ್ರ ಇದುವರೆಗೂ ಕ್ರಮ ಕೈಗೊಂಡಿಲ್ಲ. ಈ ಹಿನ್ನೆಲೆಯಲ್ಲಿ ಕೂಡಲೇ ಹವಾಮಾನ ವೈಪರೀತ್ಯದ ಬಗ್ಗೆ ಪರಿಸರವಾದಿಗಳು, ತಜ್ಞರು ಹಾಗೂ ವಿಜ್ಞಾನಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಗ್ರೇಟರ್ ಮೈಸೂರು: ಮೈಸೂರನ್ನು ಗ್ರೇಟರ್ ಮೈಸೂರು ಮಾಡಲು ಮುಂದಾಗಿದ್ದಾರೆ. ಇದಕ್ಕೆ ಮೈಸೂರು ಸುತ್ತಮುತ್ತಲಿನ ಗ್ರಾ.ಪಂ ಸೇರಿಸಲಾಗುತ್ತಿದೆ. ಆದರೆ ಈ ವ್ಯಾಪ್ತಿಯಲ್ಲಿರುವ ಕೆರೆ, ಕಟ್ಟೆ, ಕಾಲುವೆಗಳ ಸ್ಥಿತಿಗತಿಯೇನು ಎಂದು ಅವಲೋಕಿಸಬೇಕು ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಪತ್ರಿಕಾ ಪ್ರತಿನಿಧಿ ಪುತ್ರನ ಸಾಧನೆ



ಮೈಸೂರು, ಮೇ 21–ಮಂಡಿ ಮೊಹಲ್ಲಾದ ಪತ್ರಿಕಾ ಪ್ರತಿನಿಧಿ ರವಿಕುಮಾರ್ ಮತ್ತು ಎನ್.ಸವಿತಾ ದಂಪತಿ ಪುತ್ರ ಆರ್.ಲಿಖಿತ್ ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 607 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಈತ ಕನ್ನಡದಲ್ಲಿ 125, ಇಂಗ್ಲೀಷ್–95, ಹಿಂದಿ–98, ಗಣಿತ–99, ವಿಜ್ಞಾನ–91 ಮತ್ತು ಸಮಾಜ ವಿಜ್ಞಾನದಲ್ಲಿ 99 ಅಂಕ ಪಡೆದು ಸಾಧನೆ ಮಾಡಿದ್ದಾರೆ. ಲಿಖಿತ್ ಸಾವಿತ್ರಿ ಕಾನ್ವೆಂಟ್ ವಿದ್ಯಾರ್ಥಿ.



ಮೈಸೂರು ಮಿತ್ರ ಭಾನುವಾರ 22 ಮೇ 2022

ಮೂರನೇ ಪುಟದಿಂದ

ಅಪಹರಿಸಿ ಹತ್ಯೆಗೈದು, ಹೂತರು...

ಯಮುನಾ ಸಂಶಯ ವ್ಯಕ್ತಪಡಿಸಿದ್ದ ಗಣಿ ಉದ್ಯಮಿಯನ್ನು ವಶಕ್ಕೆ ಪಡೆದು ವಿಚಾರಣೆ ಗೊಳಪಡಿಸಿದಾಗ ರೈತ ಮೋಹನ್‌ನನ್ನು ಅಪಹರಿಸಿ ಹತ್ಯೆ ಮಾಡಿರುವುದು ಬಯಲಾಗಿದೆ.

ಗಣಿ ಉದ್ಯಮಿಯು ರೈತ ಮೋಹನ್‌ನನ್ನು ಮೇ 15ರಂದು ಸಂಜೆಯೇ ಅಪಹರಿಸಿ ಹತ್ಯೆ ಮಾಡಿದ ನಂತರ ಶವವನ್ನು ಹೊಳೆನರಸೀಪುರ ತಾಲೂಕಿನ ತೇರಾಳು ಗ್ರಾಮದ ಗೋಮಾಳದಲ್ಲಿ ಹೂತು ಹಾಕಿರುವುದು ಬಯಲಾದ ನಂತರ ಪೊಲೀಸರು ಅಲ್ಲಿಗೆ ತೆರಳಿ, ಶವವನ್ನು ಹೊರ ತೆಗೆದಿದ್ದಾರೆ. ಹತ್ಯೆಗೀಡಾದ ರೈತ ಮೋಹನ್ ಪತ್ನಿ ಹೇಳಿದ್ದ ಗಣಿ ಉದ್ಯಮಿ ರಾಜು ಮತ್ತು ಗ್ರಾಪಂ ಮಾಜಿ ಸದಸ್ಯ ಕುಮಾರ್, ಮೋಹನ್‌ನನ್ನು ಅಪಹರಿಸಿ ಹತ್ಯೆ ಮಾಡಿದ್ದು, ಇವರಿಬ್ಬರ ಜೊತೆಗೆ ಜೆಸಿಬಿ ಚಾಲಕ ಸಂದೀಪ್‌ನನ್ನು ಪೊಲೀಸರು ಬಂಧಿಸಿದ್ದಾರೆ.

ವಿವರ: ತಮಿಳುನಾಡು ಮೂಲದ ರಾಜು ಎಂಬ ಗಣಿ ಉದ್ಯಮಿ ನರಗಲು ಗ್ರಾಮದ ಹಲಗೇಗೌಡ ಅಲಿಯಾಸ್ ಕುಮಾರ ಎಂಬುವರ ಜಮೀನನ್ನು ಗುತ್ತಿಗೆಗೆ ಪಡೆದು ಕಳೆದ 2 ವರ್ಷದಿಂದ ಗಣಿಗಾರಿಕೆ ನಡೆಸುತ್ತಿದ್ದ. ಆ ಜಮೀನಿಗೆ ಹೊಂದಿಕೊಂಡಂತೆಯೇ ಇರುವ ಕುಮಾರನ ಚಿಕ್ಕಪ್ಪನ ಮಗ ಮೋಹನ್‌ನ ಜಮೀನನ್ನೂ ಕೂಡ ಗಣಿಗಾರಿಕೆಗೆ ನೀಡುವಂತೆ ಒತ್ತಾಯಿಸಿದ್ದ ಎಂದು ಹೇಳಲಾಗಿದ್ದು, ಗಣಿ ಉದ್ಯಮಿ ರಾಜು ಜೊತೆ ಸೇರಿ ಮೋಹನ್‌ನ ದೊಡ್ಡಪ್ಪನ ಮಗ ಕುಮಾರನೂ ಕೂಡ ಗಣಿಗಾರಿಕೆಗೆ ಜಮೀನು ನೀಡಬೇಕೆಂದು ಮೋಹನ್‌ಗೆ ಒತ್ತಾಯ ಮಾಡುತ್ತಿದ್ದ ಎಂದು ಹೇಳಲಾಗಿದ್ದು, ವ್ಯವಸಾಯ ಮಾಡುತ್ತಿರುವ ಜಮೀನನ್ನು ಗಣಿಗಾರಿಕೆಗೆ ನೀಡುವುದಿಲ್ಲ ಎಂದು ಮೋಹನ್ ನಿರಾಕರಿಸಿದ ಹಿನ್ನೆಲೆಯಲ್ಲಿ ಮೋಹನ್ ಮೇಲೆ ಗಣಿ ಉದ್ಯಮಿ ಮತ್ತು ದೊಡ್ಡಪ್ಪನ ಮಗ ಕುಮಾರ ದ್ವೇಷ ಸಾಧಿಸುತ್ತಿದ್ದರು ಎಂದು ಹೇಳಲಾಗಿದೆ.

ಮೇ 15ರಂದು ಮಧ್ಯಾಹ್ನ 3.30ರ ಸುಮಾರಿನಲ್ಲಿ ಜಮೀನಿನಲ್ಲಿದ್ದ ದನಗಳನ್ನು ಮನೆಗೆ ಹೊಡೆದುಕೊಂಡು ಬರುತ್ತೇನೆ ಎಂದು ಪತ್ನಿಗೆ ತಿಳಿಸಿ, ಮೋಹನ್ ಬೈಕ್‌ನಲ್ಲಿ ತೆರಳಿದ್ದಾರೆ. ಸಂಜೆ 4.30ರ ವೇಳೆಗೆ ಮಳೆ ಬರುವ ವಾತಾವರಣವಿದ್ದ ಕಾರಣ ಯಮುನಾ ಪತಿಯ ಮೊಬೈಲ್‌ಗೆ ಕರೆ ಮಾಡಿದಾಗ ಸ್ವಿಚ್ ಆಫ್ ಆಗಿತ್ತು. ಹುಡುಕಾಟ ನಡೆಸಿದ ವೇಳೆ ಅದ್ದಿಹಳ್ಳಿ ಹಾಲಿನ ಡೈರಿ ಮುಂಭಾಗ ಮೋಹನ್‌ನ ಬೈಕ್ ಪತ್ತೆಯಾಗಿದೆ.

ಮೋಹನ್‌ನನ್ನು ಗಣಿ ಉದ್ಯಮಿ ರಾಜು ಮತ್ತು ದೊಡ್ಡಪ್ಪನ ಮಗ, ಗ್ರಾಪಂ ಮಾಜಿ ಸದಸ್ಯ ಕುಮಾರ ಅಪಹರಣ ಮಾಡಿದ್ದಾರೆ ಎಂದು ಶಂಕಿಸಿದ ಮೋಹನ್ ತಾಯಿ ಅದೇ ದಿನ ರಾತ್ರಿ 11.30ಕ್ಕೆ ದೂರು ನೀಡಲು ಬಿಂಡಿಗನವಿಲೆ ಠಾಣೆಗೆ ತೆರಳಿದಾಗ ಪೊಲೀಸರು ಸ್ಪಂದಿಸಲಿಲ್ಲ. ಈ ಹಿನ್ನೆಲೆಯಲ್ಲಿ ಮರು ದಿನ ಯಮುನಾ ಅವರು ಠಾಣೆಗೆ ತೆರಳಿ ತನ್ನ ಪತಿಯನ್ನು ರಾಜು ಮತ್ತು ಕುಮಾರ ಅಪಹರಣ ಮಾಡಿದ್ದಾರೆ ಎಂದು ದೂರು ನೀಡಿದರೆ, ಅದನ್ನು ಸ್ವೀಕರಿಸಲು ನಿರಾಕರಿಸಿದ ಪೊಲೀಸರು, ಮೋಹನ್ ನಾಪತ್ತೆಯಾಗಿದ್ದಾರೆ ಎಂದು ದೂರನ್ನು ಬರೆಸಿಕೊಂಡು ಯಮುನಾ ಅವರನ್ನು ಸಾಗಹಾಕಿದ್ದಾರೆ.

ಪೊಲೀಸರು ಯಾವುದೇ ಕ್ರಮ ಕೈಗೊಳ್ಳದೇ ನಿರ್ಲಕ್ಷ್ಯ ವಹಿಸಿದ್ದರಿಂದ ಯಮುನಾ ತನ್ನ ಇಬ್ಬರು ಮಕ್ಕಳನ್ನು ಕರೆದುಕೊಂಡು ಮಂಡ್ಯ ಎಸ್ಪಿ ಯತೀಶ್ ಅವರನ್ನು ಮೇ 19ರಂದು ಭೇಟಿ ಮಾಡಿದ್ದಾರೆ. ಎಸ್ಪಿ ನಿರ್ದೇಶನದ ಮೇರೆಗೆ ಅಂದು ರಾತ್ರಿ 8 ಗಂಟೆ ಸಮಯದಲ್ಲಿ ಬಿಂಡಿಗನವಿಲೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ನಾಗಮಂಗಲ ಡಿವೈಎಸ್‌ಪಿ ನವೀನ್‌ಕುಮಾರ್ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ ಸುಧಾಕರ್ ಬಿಂಡಿಗನವಿಲೆ ಠಾಣೆ ಸಬ್‌ಇನ್ಸ್‌ಪೆಕ್ಟರ್ ಶ್ರೀಧರ್ ಅವರಿಗೆ ಸೂಕ್ತ ನಿರ್ದೇಶನಗಳನ್ನು ನೀಡಿದ ಫಲವಾಗಿ ಶುಕ್ರವಾರ ಗಣಿ ಉದ್ಯಮಿ ರಾಜುವನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ ರೈತ ಮೋಹನ್‌ನನ್ನು ಅಪಹರಿಸಿ ಹತ್ಯೆ ಮಾಡಿರುವುದು ಬೆಳಕಿಗೆ ಬಂದಿದೆ.

ಮೇ 15ರಂದು ಮಧ್ಯಾಹ್ನ ಜಮೀನಿನ ಬಳಿ ತೆರಳಿದ ಮೋಹನ್‌ನನ್ನು ಗಣಿ ಉದ್ಯಮಿ ರಾಜು ಮತ್ತಿತರರು ಕಾರಿನಲ್ಲಿ ಅಪಹರಿಸಿದ್ದಾರೆ. ಕಾರಿನಲ್ಲೇ ಉಸಿರುಗಟ್ಟಿಸಿ ಆತನನ್ನು ಹತ್ಯೆ ಮಾಡಿದ ನಂತರ ಹೊಳೆನರಸೀಪುರ ತಾಲೂಕು ತೇರಾಳು ಗ್ರಾಮದ ಗೋಮಾಳದಲ್ಲಿ ಜೆಸಿಬಿಯಿಂದ ಗುಂಡಿ ತೆಗೆದು ಶವವನ್ನು ಹೂತು ಹಾಕಿದ್ದಾರೆ ಎಂಬುದು ವಿಚಾರಣೆ ವೇಳೆ ತಿಳಿದು ಬಂದಿದೆ. ಆರೋಪಿಯನ್ನು ತೇರಾಳು ಗ್ರಾಮಕ್ಕೆ ಕರೆದೊಯ್ದ ಪೊಲೀಸರು ಹೊಳೆನರಸೀಪುರ ತಹಸೀಲ್ದಾರರ ಸಮ್ಮುಖದಲ್ಲಿ ಶವವನ್ನು ಹೊರ ತೆಗೆದರು. ಸ್ಥಳದಲ್ಲೇ ವೈದ್ಯರು ಮರಣೋತ್ತರ ಪರೀಕ್ಷೆ ನಡೆಸಿದ ನಂತರ ದೇಹವನ್ನು ವಾರಸುದಾರರ ವಶಕ್ಕೆ ನೀಡಲಾಗಿದೆ. ಈ ಪ್ರಕರಣದಲ್ಲಿ ಗಣಿ ಉದ್ಯಮಿ ರಾಜು, ಕೊಲೆಯಾದ ಮೋಹನ್ ದೊಡ್ಡಪ್ಪನ ಮಗ, ಗ್ರಾಪಂ ಸದಸ್ಯ ಕುಮಾರ್ ಮತ್ತು ಜೆಸಿಬಿ ಚಾಲಕ ಸಂದೀಪ್‌ನನ್ನು ಬಂಧಿಸಿರುವ ಪೊಲೀಸರು, ವಿಚಾರಣೆ ಮುಂದುವರೆಸಿದ್ದು, ಪ್ರಕರಣದಲ್ಲಿ ಭಾಗಿಯಾಗಿರುವ ಇತರರಿಗಾಗಿ ಹುಡುಕಾಟ ನಡೆಸಿದ್ದಾರೆ. ಪ್ರಕರಣದ ತನಿಖೆ ಪ್ರಗತಿಯಲ್ಲಿದ್ದು, ಯಾರ್ಯಾರು ಭಾಗಿಯಾಗಿದ್ದಾರೆ ಎಂಬುದು ಮುಂದಿನ ವಿಚಾರಣೆಯಲ್ಲಿ ತಿಳಿಯಬೇಕಾಗಿದೆ ಡಿವೈಎಸ್‌ಪಿ ನವೀನ್‌ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಕೊಲೆಯಾದ ಮೋಹನ್ ಜೆಡಿಎಸ್ ಕಾರ್ಯಕರ್ತನಾಗಿದ್ದು, ವಿಷಯ ತಿಳಿಯುತ್ತಿದ್ದಂತೆಯೇ ಶಾಸಕ ಸುರೇಶ್‌ಗೌಡ ಗಣಿಗಾರಿಕೆ ನಡೆಯುತ್ತಿದ್ದ ಸ್ಥಳಕ್ಕೆ ಭೇಟಿ ನೀಡಿದ್ದಲ್ಲದೇ, ಮೋಹನ್ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಮೊರೆ ಕೇಳದ ಪೊಲೀಸರು!

ಎಂದು ಭಾವಿಸಿ ಅವರಿಬ್ಬರೂ ಆತನ ವಿರುದ್ಧ ಕತ್ತಿ ಮಸೆಯುತ್ತಿರುವುದನ್ನು ಅರಿತಿದ್ದ ಗ್ರಾಮಸ್ಥರು, ಮೋಹನ್‌ನನ್ನು ರಾಜು ಮತ್ತು ಕುಮಾರ್ ಅಪಹರಣ ಮಾಡಿದ್ದಾರೆ ಎಂಬ ನಿರ್ಧಾರಕ್ಕೂ ಬಂದುಬಿಟ್ಟಿದ್ದರು.

ಹೀಗಾಗಿ ಮೇ 16ರಂದು ಬಿಂಡಿಗನವಿಲೆ ಠಾಣೆಗೆ ತೆರಳಿದ ಯಮುನಾ, ತನ್ನ ಪತಿಯನ್ನು ರಾಜು ಮತ್ತು ಕುಮಾರ್ ಅಪಹರಿಸಿದ್ದಾರೆ ಎಂದು ಖಚಿತವಾಗಿ ತಿಳಿಸಿದ್ದಲ್ಲದೇ ಅದೇ ರೀತಿ ದೂರನ್ನೂ ಬರೆದುಕೊಂಡು ಹೋಗಿದ್ದರು. ಪೊಲೀಸರು ಅಪಹರಣ ಪ್ರಕರಣ ದಾಖಲಿಸಲು ನಿರಾಕರಿಸಿದಾಗ ಸಿಸಿ ಕ್ಯಾಮೆರಾ ದೃಶ್ಯಾವಳಿಗಳ ಬಗ್ಗೆ ಕೂಡ ತಿಳಿಸಿ ರಾಜು ಮತ್ತು ಕುಮಾರ್‌ನನ್ನು ವಿಚಾರಣೆ ನಡೆಸಬೇಕು ಎಂದು ಒತ್ತಾಯಿಸಿದ್ದಾರೆ. ಕೊನೆಗೆ ಅನ್ಯ ಮಾರ್ಗವಿಲ್ಲದೆ ಪೊಲೀಸರು ಹೇಳಿದಂತೆ ನಾಪತ್ತೆ ದೂರು ನೀಡಿ ಬಂದಿದ್ದಾರೆ. ಮೂರು ದಿನಗಳಾದರೂ ಪೊಲೀಸರು ರಾಜು ಮತ್ತು ಕುಮಾರ್‌ನನ್ನು ವಿಚಾರಣೆಯೇ ಮಾಡದೇ ಇದ್ದುದರಿಂದ ಗ್ರಾಮಸ್ಥರ ಸಲಹೆಯಂತೆ ತನ್ನಿಬ್ಬರು ಮಕ್ಕಳನ್ನು ಕರೆದುಕೊಂಡು ಮೇ 19ರಂದು ಮಂಡ್ಯಗೆ ತೆರಳಿ ಎಸ್ಪಿ ಯತೀಶ್ ಅವರನ್ನು ಭೇಟಿ ಮಾಡಿ ಎಲ್ಲಾ ವಿದ್ಯಮಾನಗಳನ್ನೂ ತಿಳಿಸಿದ್ದಾರೆ. ಕೊನೆಗೆ ಎಸ್ಪಿ ನಿರ್ದೇಶನದಂತೆ ಅಂದು ರಾತ್ರಿ 8 ಗಂಟೆಗೆ ಬಿಂಡಿಗನವಿಲೆ ಠಾಣೆ ಪೊಲೀಸರು ಅಪಹರಣ ಪ್ರಕರಣ ದಾಖಲಿಸಿಕೊಂಡು ಮರುದಿನ ರಾಜುವನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೊಲೆ ಪ್ರಕರಣ ಬಯಲಾಗಿದೆ. ಒಂದು ವೇಳೆ ಯಮುನಾ ಮಂಡ್ಯಗೆ ತೆರಳಿ ಎಸ್ಪಿ ಅವರನ್ನು ಭೇಟಿ ಮಾಡದೇ ಇದ್ದಲ್ಲಿ ಈ ಪ್ರಕರಣವೇ ಮುಚ್ಚಿಹೋಗುತ್ತಿತ್ತು ಎಂದು ಗ್ರಾಮಸ್ಥರು ತಿಳಿಸಿದ್ದು, ಆಧಾರ ಸಮೇತ ಅಪಹರಣ ದೂರು ನೀಡಿದರೂ ಸ್ವೀಕರಿಸಲು ನಿರಾಕರಿಸಿ ನಾಪತ್ತೆ ದೂರು ಬರೆಸಿಕೊಂಡಿದ್ದಲ್ಲದೇ ಅನಂತರವೂ ಯಾವುದೇ ರೀತಿಯ ಕ್ರಮ ಕೈಗೊಳ್ಳದೇ ಇದ್ದ ಬಿಂಡಿಗನವಿಲೆ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಶ್ರೀಧರ್ ಅವರನ್ನು ಅಮಾನತುಪಡಿಸಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಸ್ಥಿತಿ ಕಂಡು ಮರುಗಿದ ಎಸ್ಪಿ

ಅಮಾನತುಪಡಿಸಬೇಕೆಂದು ಆಗ್ರಹಿಸಿದ್ದಾರೆ. ಆದರೆ ಮಂಡ್ಯ ಜಿಲ್ಲೆ ಅಡಿಷನಲ್ ಎಸ್ಪಿ ವೇಣುಗೋಪಾಲ್ ಅವರು ಮಾತ್ರ ಬಿಂಡಿಗನವಿಲೆ ಠಾಣೆ ಪೊಲೀಸರನ್ನು ಶ್ಲಾಘಿಸುವುದಾಗಿ ಹೇಳಿದ್ದಾರೆ.

'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅವರು, ಈ ಪ್ರಕರಣದಲ್ಲಿ ಪೊಲೀಸರ ಕಾರ್ಯವನ್ನು ಶ್ಲಾಘಿಸುತ್ತೇನೆ. ದೂರುದಾರರು ನೀಡಿದ ದೂರನ್ನು ದಾಖಲಿಸಿಕೊಂಡಿದ್ದಾರೆ. ಕೇವಲ ಒಂದೇ ದಿನದಲ್ಲಿ ಪ್ರಕರಣವನ್ನು ಪತ್ತೆ ಹಚ್ಚಿ ಶವವನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿಗಳನ್ನು ಬಂಧಿಸಿದ್ದಾರೆ. ಪೊಲೀಸರ ಈ ಕಾರ್ಯವನ್ನು ಶ್ಲಾಘಿಸಲೇಬೇಕು ಎಂದು ಗ್ರಾಮಸ್ಥರು ದೂಷಣೆ ಹಾಕುತ್ತಿರುವ ಪೊಲೀಸರ ಪ್ರಶಂಸಿಸಿದ್ದಾರೆ.

ಅಕ್ರಮ ಸಾಗಾಣಿಕೆ: 4 ಲಕ್ಷ ಮೌಲ್ಯದ ಯೂರಿಯಾ ವಶ



ಕೆ.ಆರ್.ಪೇಟೆ,ಮೇ 21–ತಾಲೂಕಿನ ಮುದುಗೆರೆ–ಕಾಳಿಮುರುಕನಹಳ್ಳಿ ಬಳಿ ಇರುವ ಅರಣ್ಯ ಪ್ರದೇಶದ ರಸ್ತೆಯ ಮೂಲಕ ಅಕ್ರಮವಾಗಿ ಸಾಗಿಸುತ್ತಿದ್ದ ಸುಮಾರು 4 ಲಕ್ಷ ರೂ. ಮೌಲ್ಯದ ಯೂರಿಯಾವನ್ನು ಲಾರಿ ಸಮೇತ ಕೃಷಿ ಇಲಾಖೆ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಸ್ಥಳೀಯ ರೈತರು ಅನುಮಾನಾಸ್ಪದವಾಗಿ ಅರಣ್ಯ ಪ್ರದೇಶದ ರಸ್ತೆಯಲ್ಲಿ ರಸಗೊಬ್ಬರ ತುಂಬಿದ ಲಾರಿ ಹೋಗುತ್ತಿರುವ ಬಗ್ಗೆ ಪ್ರಶ್ನಿಸಿದಾಗ ಚಾಲಕ ಲಾರಿಯನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದಾನೆ.

ವಿಷಯ ತಿಳಿಸಿದ ತಕ್ಷಣ ಜಿಲ್ಲಾ ಜಂಟಿ ಕೃಷಿ ನಿರ್ದೇಶಕ ಅಶೋಕ್, ಪಾಂಡವಪುರ ಉಪ ಕೃಷಿ ನಿರ್ದೇಶಕಿ ಮಮತಾ, ತಾಲೂಕು ಕೃಷಿ ಸಹಾಯಕ ನಿರ್ದೇಶಕ ಟಿ.ಎಸ್.ಮಂಜುನಾಥ್, ಜಾರಿದಳ ಕೃಷಿ ನಿರ್ದೇಶಕ ವೆಂಕಟೇಶ್, ವಿಷಯ ತಜ್ಞ ಕೃಷಿ ನಿರ್ದೇಶಕ ಹರ್ಷ, ಕೃಷಿ ಅಧಿಕಾರಿಗಳಾದ ಶ್ರೀಧರ್, ಮಾನಸ, ಶಿವಕುಮಾರ್, ಆನಂದ್, ಅಭಿಷೇಕ್‌ಗೌಡ ಮತ್ತಿತರರನ್ನು ಒಳಗೊಂಡ ಅಧಿಕಾರಿಗಳ ತಂಡವು ಕೆ.ಆರ್.ಪೇಟೆ ಗ್ರಾಮಾಂತರ ಠಾಣೆ ಸಬ್‌ಇನ್ಸ್‌ಪೆಕ್ಟರ್ ಪ್ರಮೋದ್ ನೇತೃತ್ವದಲ್ಲಿ ರಸಗೊಬ್ಬರ ತುಂಬಿದ್ದ ಲಾರಿಯನ್ನು ವಶಕ್ಕೆ ಪಡೆಯಿತು. ತಮಿಳುನಾಡು ನೋಂದಣಿಯ ಲಾರಿ (ಟಿಎನ್–36 ಎಎಸ್9156)ಯಲ್ಲಿ ಸಾಗಿಸುತ್ತಿದ್ದ ಚಾಲಕ ಪರಾರಿಯಾಗಿದ್ದಾನೆ. ಈ ಹಿನ್ನೆಲೆಯಲ್ಲಿ ಬದಲಿ ಚಾಲಕನ ಮೂಲಕ ಲಾರಿಯನ್ನು ಪಟ್ಟಣದ ಪೊಲೀಸ್ ಠಾಣೆಗೆ ತಂದು, ಲಾರಿ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಿ, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಯೂರಿಯಾವನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಲಾರಿಯನ್ನು ಹಿಡಿದು ಕೃಷಿ ಅಧಿಕಾರಿಗಳು ಮತ್ತು ಪೊಲೀಸರಿಗೆ ನೀಡಿರುವ ಸ್ಥಳೀಯ ರೈತರನ್ನು ಶ್ಲಾಘಿಸಿರುವ ತಾಲೂಕು ಕರವೇ ಅಧ್ಯಕ್ಷ ಹೊನ್ನೇನಹಳ್ಳಿ ವೇಣು, ಈ ರೀತಿ ಅಕ್ರಮ ದಂಧೆಗೆ ಕಡಿವಾಣ ಹಾಕಲು ಕೃಷಿ ಇಲಾಖೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿದ್ದಾರೆ.



ಶ್ರೀರಂಗಪಟ್ಟಣ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ನಡೆದ ಚುನಾವಣೆಯಲ್ಲಿ ನೂತನ ಅಧ್ಯಕ್ಷರಾಗಿ ತಾಲೂಕು ವರದಿಗಾರ ಗಂಜಾಂ ಮಂಜು ಅವಿರೋಧವಾಗಿ ಆಯ್ಕೆಯಾದರು. ಸಂಘದ ಪದಾಧಿಕಾರಿಗಳು ನೂತನ ಅಧ್ಯಕ್ಷರನ್ನು ಅಭಿನಂದಿಸಿದರು.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಶನಿವಾರ	104.15 ಅಡಿ
ಒಳಹರಿವು	10,587 ಕ್ಯೂಸೆಕ್
ಹೊರಹರಿವು	1,115 ಕ್ಯೂಸೆಕ್

ಮೂರನೇ ಪುಟದಿಂದ

7 ರೂ. ಇಳಿಕೆ

ಕಾಲವನ್ನು ದಾಟುತ್ತಿದ್ದು, ಕೋವಿಡ್-19 ಸಾಂಕ್ರಾಮಿಕ ರೋಗದಿಂದ ಜಗತ್ತು ಚೇತರಿಸಿಕೊಳ್ಳುತ್ತಿರುವಾಗಲೂ, ಉಕ್ರೇನ್ ಸಂಘರ್ಷವು ಪೂರೈಕೆ ಸರಪಳಿ ಸಮಸ್ಯೆಗಳನ್ನು ಮತ್ತು ವಿವಿಧ ಸರಕುಗಳ ಕೊರತೆಯನ್ನು ತಂದಿದೆ. ಇದು ಬಹಳಷ್ಟು ದೇಶಗಳಲ್ಲಿ ಹಣದುಬ್ಬರ ಮತ್ತು ಆರ್ಥಿಕ ಸಂಕಷ್ಟಕ್ಕೆ ಕಾರಣವಾಗುತ್ತಿದೆ. ಸಾಂಕ್ರಾಮಿಕ ಸಮಯದಲ್ಲಿಯೂ ಸಹ, ನಮ್ಮ ಸರ್ಕಾರವು ವಿಶೇಷವಾಗಿ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆಯೊಂದಿಗೆ ಕಲ್ಯಾಣದ ಮಾದರಿಯನ್ನು ಹೊಂದಿಸಿದೆ. ಇದನ್ನು ಈಗ ವಿಶ್ವದಾದ್ಯಂತ ಗುರುತಿಸಲಾಗಿದ್ದು ಮಾತ್ರವಲ್ಲದೇ ಪ್ರಶಂಸಿಸಲಾಗಿದೆ.

ಸವಾಲಿನ ಅಂತಾರಾಷ್ಟ್ರೀಯ ಪರಿಸ್ಥಿತಿಯ ಹೊರತಾಗಿಯೂ, ಅಗತ್ಯ ವಸ್ತುಗಳ ಕೊರತೆ, ಕೊರತೆ ಇಲ್ಲ ಎಂಬುದನ್ನು ನಾವು ಖಚಿತಪಡಿಸಿಕೊಂಡಿದ್ದೇವೆ. ಕೆಲವು ಅಭಿವೃದ್ಧಿ ಹೊಂದಿದ ದೇಶಗಳು ಸಹ ಕೆಲವು ಕೊರತೆ, ಅಡೆತಡೆಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಅಗತ್ಯ ವಸ್ತುಗಳ ಬೆಲೆಯನ್ನು ನಿಯಂತ್ರಣದಲ್ಲಿಡಲು ನಾವು ಬದ್ಧರಾಗಿದ್ದೇವೆ. ಜಾಗತಿಕವಾಗಿ ರಸಗೊಬ್ಬರ ಬೆಲೆ ಏರಿಕೆಯಾಗುತ್ತಿದ್ದರೂ ಇಂತಹ ಬೆಲೆ ಏರಿಕೆಯಿಂದ ನಮ್ಮ ರೈತರನ್ನು ರಕ್ಷಿಸಿದ್ದೇವೆ. ಬಜೆಟ್‌ನಲ್ಲಿ 1.05 ಲಕ್ಷ ಕೋಟಿ ರೂಗಳನ್ನು ರಸಗೊಬ್ಬರ ಸಬ್ಸಿಡಿ ಜೊತೆಗೆ ಹೆಚ್ಚುವರಿಯಾಗಿ 1.10 ಲಕ್ಷ ಕೋಟಿ ರೂವನ್ನು ನಮ್ಮ ರೈತರಿಗೆ ಮೀಸಲಿಡಲಾಗಿದೆ. ಕೇಂದ್ರ ಸರ್ಕಾರ ನಿರ್ದಿಷ್ಟವಾಗಿ ಸರ್ಕಾರದ ಎಲ್ಲಾ ವಿಭಾಗಗಳನ್ನು ಸೂಕ್ಷ್ಮತೆಯಿಂದ ಕೆಲಸ ಮಾಡಲು ಮತ್ತು ಸಾಮಾನ್ಯ ಜನರಿಗೆ ಪರಿಹಾರವನ್ನು ನೀಡುವಂತೆ ಕೇಳಿಕೊಂಡಿದೆ. ಬಡವರಿಗೆ ಮತ್ತು ಸಾಮಾನ್ಯರಿಗೆ ಸಹಾಯ ಮಾಡುವ ಪ್ರಧಾನಿ ಮೋದಿ ಅವರ ಬದ್ಧತೆಗೆ ಅನುಗುಣವಾಗಿ, ಇಂದು ನಾವು ನಮ್ಮ ಜನರಿಗೆ ಸಹಾಯ ಮಾಡಲು ಹೆಚ್ಚಿನ ಕ್ರಮಗಳನ್ನು ಘೋಷಿಸುತ್ತಿದ್ದೇವೆ ಎಂದಿದ್ದಾರೆ. ಉಜ್ವಲ ಯೋಜನೆಯ 9 ಕೋಟಿಗೂ ಹೆಚ್ಚು ಫಲಾನುಭವಿಗಳಿಗೆ ಪ್ರತಿ ಗ್ಯಾಸ್ ಸಿಲಿಂಡರ್‌ಗೆ (12 ಸಿಲಿಂಡರ್‌ಗಳವರೆಗೆ) 200 ರೂ. ಸಬ್ಸಿಡಿ ನೀಡಲಾಗಿದೆ. ಇದು ನಮ್ಮ ತಾಯಿ ಮತ್ತು ಸಹೋದರಿಯರಿಗೆ ಸಹಾಯವಾಗುತ್ತದೆ. ಇದರಿಂದ ಸರ್ಕಾರದ ಮೇಲೆ ವರ್ಷಕ್ಕೆ ಸುಮಾರು 6100 ಕೋಟಿ ರೂಗಳ ಒತ್ತಡ ಬೀಳಲಿದೆ.

ವಿಸ್ತರಣೆ ಬಗ್ಗೆ ಚರ್ಚೆ ಆಗಿಲ್ಲ

ಇತರೆ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಸೂಚಿಸಿರುವ ಹಿನ್ನೆಲೆಯಲ್ಲಿ ಅದರ ಬಗ್ಗೆ ಚರ್ಚೆ ಮಾಡಲಾಗಿದೆ ಎಂದು ಸಿಎಂ ಬೊಮ್ಮಾಯಿ ತಿಳಿಸಿದರು. ಅಮಿತ್ ಶಾ ಅವರ ಸೂಚನೆಯಂತೆ ಅರುಣ್ ಸಿಂಗ್ ಅವರೊಂದಿಗೆ ಮಾತನಾಡಿ, ಪರಿಷತ್ ಹಾಗೂ ರಾಜ್ಯಸಭಾ ಚುನಾವಣೆಗೆ ಕಳುಹಿಸಲಾಗಿರುವ ಪಟ್ಟಿ ಬಗ್ಗೆ ವಿವರಗಳನ್ನು ನೀಡಲಾಗಿದೆ. 4 ವಿಧಾನ ಪರಿಷತ್ ಸ್ಥಾನಗಳಿಗೆ 24 ಕಡೇ ದಿನಾಂಕವಾಗಿದ್ದು, ತುರ್ತಾಗಿ ನಿರ್ಣಯಗಳನ್ನು ಕೈಗೊಳ್ಳಬೇಕಿದೆ. ರಾಜ್ಯಸಭೆ ಚುನಾವಣೆಗೆ 31ರವರೆಗೆ ಸಮಯಾವಕಾಶವಿದೆ. ಕೋರ್ ಕಮಿಟಿ ಚರ್ಚೆಯ ನಿರ್ಣಯಗಳ ಬಗ್ಗೆ ಅರುಣ್ ಸಿಂಗ್ ಅವರಿಗೆ ತಿಳಿಸಲಾಗಿದೆ. ಆದಷ್ಟು ಬೇಗನೆ ತೀರ್ಮಾನ ತೆಗೆದುಕೊಳ್ಳುವುದಾಗಿ ಹೇಳಿದ್ದಾರೆ ಎಂದರು. ಭಾನುವಾರ ಬೆಳಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ದಾವೋಸ್‌ಗೆ ಪ್ರಯಾಣ ಬೆಳೆಸಲಿದ್ದಾರೆ.



ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ, ಶ್ರೀ ಜಯ ಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ವತಿಯಿಂದ ಕಾಲೇಜಿನ ಆವರಣದಲ್ಲಿ ನಡೆಯುತ್ತಿರುವ 'ಜೆಸಿಯಾನ್'ದಲ್ಲಿ ನಟ ರಿಷಬ್ ಶೆಟ್ಟಿ ಅಮರು ಹಾಗೂ ಹರಿಕಥೆಯಲ್ಲ ಗಿರಿಕಥೆ ಚಿತ್ರತಂಡ ಪಾಲ್ಗೊಂಡು ವಿದ್ಯಾರ್ಥಿಗಳನ್ನು ರಂಜಿಸಿತು. ಈ ವೇಳೆ ವಿಧಾನ ಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್, ಚಿತ್ರ ನಿರ್ಮಾಪಕ ಸಂದೇಶ್, ಪಾಲಿಕೆ ಸದಸ್ಯ ಸಾತ್ವಿಕ್, ಕಾಲೇಜಿನ ಪ್ರಾಧ್ಯಾಪಕರ ವೃಂದ, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಅತ್ಯುನ್ನತ ಶ್ರೇಣಿ



ಮೈಸೂರು, ಮೇ 21- ಬನ್ನಿಮಂಟಪದ ಸೇಂಟ್ ಜೋಸೆಫ್ ಪ್ರೌಢಶಾಲೆಯ ವಿದ್ಯಾರ್ಥಿನಿ ಎನ್.ಹಂಪನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 608(ಶೇ.97.28) ಅಂಕಗಳಿಸಿ, ಉತ್ತೀರ್ಣರಾಗಿದ್ದಾಳೆ. ಈಕೆ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ನೌಕರ ನಂಜುಂಡಸ್ವಾಮಿ ಹಾಗೂ ಚೇತನ ದಂಪತಿಯ ಪುತ್ರಿ.

ಏಕಾಏಕಿ ಕೆಲಸದಿಂದ ತೆಗೆದ ಆರೋಪ ; ನೈರುತ್ಯ ರೈಲ್ವೆ ಮೈಸೂರು ವಿಭಾಗದ ಡಿಆರ್‌ಎಂ ಕಚೇರಿಯ

ಸ್ವಚ್ಛತಾ ಕಾರ್ಮಿಕರಿಂದ ದಿಢೀರ್ ಪ್ರತಿಭಟನೆ



ಮೈಸೂರು,ಮೇ 21(ಪಿಎಂ)- ನೈರುತ್ಯ ರೈಲ್ವೆಯ ಮೈಸೂರು ವಿಭಾಗದ ಡಿಆರ್‌ಎಂ ಕಚೇರಿಯಲ್ಲಿ ಕಳೆದ 10 ವರ್ಷಗಳಿಂದ ಗುತ್ತಿಗೆಯಡಿ ಸ್ವಚ್ಛತಾ ಕಾರ್ಮಿಕರಾಗಿ ಕಾರ್ಯನಿರ್ವಹಿಸುತ್ತಿರುವ ತಮ್ಮನ್ನು ಇಂದು ಏಕಾಏಕಿ ಕೆಲಸದಿಂದ ತೆಗೆದು ಹಾಕಿದ್ದಾರೆ ಎಂದು ಆರೋಪಿಸಿ, 14 ಮಂದಿ ಸ್ವಚ್ಛತಾ ಕಾರ್ಮಿಕರು ಶನಿವಾರ ದಿಢೀರ್ ಪ್ರತಿಭಟನೆ ನಡೆಸಿದರು.

ಐಎನ್‌ಟಿಯುಸಿ ಸಂಘಟನೆಯ ಜಿಲ್ಲಾ ಪದಾಧಿಕಾರಿಗಳ ನೇತೃತ್ವದಲ್ಲಿ ಡಿಆರ್‌ಎಂ ಕಚೇರಿಯ ಮುಖ್ಯದ್ವಾರದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಕನಿಷ್ಠ ಕೂಲಿ 12,600 ರೂ. ನೀಡಬೇಕು. ಆದರೆ ಗುತ್ತಿಗೆದಾರರು ಕೇವಲ 6ರಿಂದ 8 ಸಾವಿರ ರೂ ವೇತನ ನೀಡುವ ಜೊತೆಗೆ ಇಎಸ್‌ಐ ಮತ್ತು ಪಿಎಫ್ ಸೌಲಭ್ಯ ಸಹ ನೀಡದೇ ವಂಚಿಸುತ್ತಿದ್ದಾರೆ. ಇದರ ವಿರುದ್ಧ ಕಾರ್ಮಿಕ ಇಲಾಖೆಗೆ ದೂರು ನೀಡಿದ ಹಿನ್ನೆಲೆಯಲ್ಲಿ ಏಕಾಏಕಿ ನಮ್ಮನ್ನು ಕೆಲಸದಿಂದ ತೆಗೆದು, ಬೇರೆ ಕಾರ್ಮಿಕರಿಂದ ಕೆಲಸ ಮಾಡಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಐಎನ್‌ಟಿಯುಸಿ ಜಿಲ್ಲಾಧ್ಯಕ್ಷ ಅನಿಲ್‌ಕುಮಾರ್ ಮಾತನಾಡಿ, ಮಂಡ್ಯದ ಶ್ರೀ ನಿಮಿಷಾಂಬ ಎಂಟರ್ ಪ್ರೈಸಸ್ ಗುತ್ತಿಗೆದಾರ ಸಂಸ್ಥೆ ಮಾಲೀಕರು ಕನಿಷ್ಠ ಕೂಲಿ, ಇಎಸ್‌ಐ ಮತ್ತು ಪಿಎಫ್ ಸೌಲಭ್ಯ ನೀಡದೇ ಇವರನ್ನು ವಂಚಿಸಿದ್ದಾರೆ. ನಿಯಮಾನುಸಾರ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಖಾತೆ ತೆರೆದು ಅಲ್ಲಿಗೆ ಕಾರ್ಮಿಕರ ವೇತನ ಜಮಾ ಮಾಡಬೇಕು. ಆದರೆ ಗುತ್ತಿಗೆದಾರರು ಮಂಡ್ಯದ ಖಾಸಗಿ ಬ್ಯಾಂಕ್‌ನಲ್ಲಿ ಕಾರ್ಮಿಕರ ಖಾತೆ ತೆರೆದು, ಖಾತೆ ಪುಸ್ತಕ ಮತ್ತು ಎಟಿಎಂ ಕಾರ್ಡ್‌ಗಳನ್ನು ಈ ಕಾರ್ಮಿಕರಿಗೆ ನೀಡದೇ 10 ವರ್ಷಗಳಿಂದ ತಾವೇ ವೇತನದ ಹಣ ಪಡೆದುಕೊಂಡು ನಗದು ರೂಪದಲ್ಲಿ ಕಡಿಮೆ ವೇತನ ನೀಡುವ ಮೂಲಕ ವಂಚಿಸಿದ್ದಾರೆ ಎಂದು ಆರೋಪಿಸಿದರು.

ಈ ಸ್ವಚ್ಛತಾ ಕಾರ್ಮಿಕರಿಗೆ ಕನಿಷ್ಠ ವೇತನ ನೀಡದೇ ಇಎಸ್‌ಐ ಮತ್ತು ಪಿಎಫ್ ಸೌಲಭ್ಯದಿಂದ ವಂಚಿಸಿರುವ ಸಂಬಂಧ ಕರ್ನಾಟಕ ಸ್ಟೇಟ್ ರೈಲ್ವೆ ಕಾಂಟ್ರಾಕ್ಟ್ ಮಜ್ದೂರ್ ಸಂಘದ (ಐಎನ್‌ಟಿಯುಸಿಗೆ ಅಂತರ್ಗತ) ವತಿಯಿಂದ ಮೇ 17ರಂದು ಸೆಕ್ಷನ್ 22ರ ಐಡಿ ಆಕ್ಟ್ ಅನುಸಾರ ಕಾರ್ಮಿಕ ಇಲಾಖೆಗೆ ದೂರು ನೀಡಲಾಗಿತ್ತು. ಮೇ 20ರ ಶುಕ್ರವಾರ ಪ್ರಾದೇಶಿಕ ಕಾರ್ಮಿಕ ಆಯುಕ್ತರು ವಿಚಾರಣೆ ನಡೆಸಿ, ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ತಮಗೆ ಸಲ್ಲಿಸ ಬೇಕೆಂದು ಗುತ್ತಿಗೆದಾರರಿಗೆ ಸೂಚನೆ ನೀಡಿ ಜೂ.3ಕ್ಕೆ ವಿಚಾರಣೆ ಮುಂದೂಡಿದ್ದರು ಎಂದು ವಿವರಿಸಿದರು.

ದೂರು ಸಂಬಂಧ ವಿಚಾರಣೆ ಪೂರ್ಣಗೊಳ್ಳುವವರೆಗೆ ಯಾವುದೇ ಸ್ವಚ್ಛತಾ ಕಾರ್ಮಿಕರನ್ನು ಕೆಲಸದಿಂದ ತೆಗೆಯ ಬಾರದು ಎಂದೂ ಸೂಚನೆ ನೀಡಿದ್ದರು. ಅದಾಗ್ಯೂ ಇಂದು ಬೆಳಗ್ಗೆ ಕೆಲಸಕ್ಕೆ ಹಾಜರಾದ ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕಿರುವುದಾಗಿ ಹೊರ ಕಳುಹಿಸಿದ್ದಾರೆ. ಜೊತೆಗೆ ಇವರ ಬದಲಿಗೆ ಬೇರೆ ಕಾರ್ಮಿಕರನ್ನು ಕರೆಯಿಸಿ, ಕೆಲಸ ಮಾಡಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಐಎನ್‌ಟಿಯುಸಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ನಂಜಪ್ಪ ಬಸವನಗುಡಿ, ಸ್ವಚ್ಛತಾ ಕಾರ್ಮಿಕರಾದ ಭಾವಾನಿ, ಗಿರಿಜಾ, ಸುಶೀಲಾಮ್ಮ, ಸರ್ವಮಂಗಳಾ, ಮುರಳಿ ಸೇರಿದಂತೆ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಪ್ರತಿಭಟನಾ ಸ್ಥಳಕ್ಕೆ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರ ಭೇಟಿ

ಮೈಸೂರು,ಮೇ 21(ಪಿಎಂ)- ರೈಲ್ವೆ ಡಿಆರ್‌ಎಂ ಕಚೇರಿಯ ಸ್ವಚ್ಛತಾ ಕಾರ್ಮಿಕರನ್ನು ಕೆಲಸದಿಂದ ತೆಗೆದಿರುವ ಸಂಬಂಧ ಆಯೋಗದಲ್ಲಿ ಸುಮೊಟೋ ಪ್ರಕರಣ ದಾಖಲಿಸಿ, ಅವರಿಗೆ ತ್ವರಿತವಾಗಿ ನ್ಯಾಯ ದೊರಕಿಸಿಕೊಡುವುದಾಗಿ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ ತಿಳಿಸಿದರು.

ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, ಅಹವಾಲು ಆಲಿಸಿದ ಅವರು, ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿ, ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗಕ್ಕೂ ಪತ್ರ ಬರೆದು, ಸೂಕ್ತ ಕ್ರಮಕ್ಕೆ ಒತ್ತಾಯಿಸುತ್ತೇನೆ ಎಂದರು. ಸರ್ಕಾರಿ ವಲಯದ ಸಂಸ್ಥೆಗಳು ಹಾಗೂ ವಿವಿಧ ಇಲಾಖೆಗಳಲ್ಲಿ ಗುತ್ತಿಗೆಯಡಿ ಕಾರ್ಯ ನಿರ್ವಹಿಸುವ ಸ್ವಚ್ಛತಾ ಕಾರ್ಮಿಕರಿಗೆ ಕನಿಷ್ಠ ವೇತನ ನೀಡದೇ ಮತ್ತು ಇಎಸ್‌ಐ, ಪಿಎಫ್ ಸೌಲಭ್ಯ ಕಲ್ಪಿಸದೇ ಗುತ್ತಿಗೆದಾರರು ಶೋಷಣೆ ಮಾಡುತ್ತಿರುವುದು ಕಂಡು ಬರುತ್ತಿದೆ. ಈ ಸಂಬಂಧ ಸೂಕ್ತ ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ಕೆಲಸಕ್ಕೆ ವಾಪಸ್ ತೆಗೆದುಕೊಂಡ ಹಿನ್ನೆಲೆ ; ಪ್ರತಿಭಟನೆ ಅಂತ್ಯ

ಗುತ್ತಿಗೆದಾರರು ಮತ್ತು ಅಧಿಕಾರಿಗಳು ಸಮಾಲೋಚಿಸಿ, 12 ಮಂದಿ ಸ್ವಚ್ಛತಾ ಕಾರ್ಮಿಕರನ್ನು ವಾಪಸ್ ಕೆಲಸಕ್ಕೆ ತೆಗೆದುಕೊಂಡ ಹಿನ್ನೆಲೆಯಲ್ಲಿ ಮಧ್ಯಾಹ್ನ 3ರ ವೇಳೆಗೆ ಪ್ರತಿಭಟನೆ ಅಂತ್ಯಗೊಳಿಸಲಾಯಿತು. ಉಳಿದ ಇಬ್ಬರನ್ನು ಕೆಲ ದಿನಗಳ ಹಿಂದೆಯೇ ಕೆಲಸದಿಂದ ತೆಗೆದಿದ್ದು, ಇವರನ್ನು ಕೆಲಸಕ್ಕೆ ವಾಪಸ್ ತೆಗೆದುಕೊಳ್ಳುವ ಬಗ್ಗೆ ಕಾಲಾವಕಾಶ ಕೋರಿದ್ದಾರೆ ಎಂದು ಐಎನ್‌ಟಿಯುಸಿ ಜಿಲ್ಲಾಧ್ಯಕ್ಷ ಅನಿಲ್‌ಕುಮಾರ್ ತಿಳಿಸಿದರು.

ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಮೇ 21-ಮೈಸೂರಿನ ಮರಿಮಲ್ಲಪ್ಪ ಕಾಲೇಜು ವಿದ್ಯಾರ್ಥಿ ಆರ್.ಹಮ್ರಿತ್‌ಗೌಡ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 602 ಅಂಕ ಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾನೆ. ಕನ್ನಡದಲ್ಲಿ 114, ಇಂಗ್ಲೀಷ್-97, ಹಿಂದಿ-95, ಗಣಿತ-97, ಸಮಾಜ ವಿಜ್ಞಾನ-99 ಅಂಕ ಗಳಿಸಿದ್ದಾನೆ. ಈತ ಮೇಟಗಳ್ಳಿಯ ಲೋಕನಾಯಕ ನಗರ ನಿವಾಸಿ ಜಿಮ್ (ಯೋಗ) ರವಿ ಮತ್ತು ವಸಂತ ದಂಪತಿ ಪುತ್ರ.

ಕಾಶ್ಮೀರ ಸುರಂಗ ಕುಸಿತ: ಸಾವಿನ ಸಂಖ್ಯೆ 9ಕ್ಕೆ ಏರಿಕೆ

ಶ್ರೀನಗರ್, ಮೇ 21- ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶದ ರಾಮಬನ್‌ನಲ್ಲಿ ನಿರ್ಮಿಸಲಾಗುತ್ತಿದ್ದ ಸುರಂಗವೊಂದು ಕುಸಿದ ಘಟನೆಯಲ್ಲಿ ಸಾವಿನ ಸಂಖ್ಯೆ ಒಂಬತ್ತಕ್ಕೆ ಏರಿದೆ. ಸುರಂಗದ ಅವಶೇಷಗಳ ಅಡಿ ಇನ್ನೂ ಒಂದಿಬ್ಬರು ಮಂದಿ ಸಿಲುಕಿಕೊಂಡಿರುವ ಸಾಧ್ಯತೆ ಇದೆ, ಅವರ ರಕ್ಷಣೆಗೆ ಕಾರ್ಯಾಚರಣೆ ಮುಂದುವರಿದಿದೆ. ನಿನ್ನೆ ಶುಕ್ರವಾರ ಈ ಜಾಗದಲ್ಲಿ ಭೂಕುಸಿತವಾದ್ದರಿಂದ ರಕ್ಷಣಾ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿತ್ತು. ಶನಿವಾರ ಕಾರ್ಯಾಚರಣೆ ಪುನಾರಂಭಗೊಂಡಿತು. "ಭೂಕುಸಿತ ಪ್ರದೇಶದಲ್ಲಿ ಅವಶೇಷ ತೆರವು ಕಾರ್ಯಾಚರಣೆ ಪುನಾರಂಭಿಸಿದ್ದೇವೆ. ಆದಷ್ಟೂ ಬೇಗ ಕಾರ್ಯ ಮುಗಿಸಲು ಯಂತ್ರೋಪಕರಣ ಮತ್ತು ತಾಂತ್ರಿಕ ಪರಿಣತಿಯ ಜನರ ಸಂಖ್ಯೆಯನ್ನು ಹೆಚ್ಚಿಸಿದ್ದೇವೆ" ಎಂದು ತಹಶೀಲ್ದಾರ್ ಜಾವೇದ್ ಹೇಳಿದ್ದಾರೆ. ನಿನ್ನೆ ಘಟನಾ ಸ್ಥಳದಲ್ಲಿ ಒಂದು ಮೃತದೇಹ ಸಿಕ್ಕಿತ್ತು. ಅವಶೇಷಗಳ ಅಡಿಯಲ್ಲಿ ಶನಿವಾರ ಎಂಟು ಮೃತ ದೇಹಗಳನ್ನು ಹೊರತೆಗೆಯಲಾಗಿದೆ. ಇದರೊಂದಿಗೆ ಸಾವಿನ ಸಂಖ್ಯೆ ಒಂಬತ್ತಕ್ಕೆ ಏರಿದೆ.

ಗಂಜೀಫಾ ರಘುಪತಿ ಭಟ್ಟರ ಸ್ಟುಡಿಯೋಗೆ ಸ್ಪೇನ್ ಕಾನ್ಸೂಲ್ ಜನರಲ್ ಭೇಟಿ



ಮುಂಬೈನ ಸ್ಪೇನ್ ಕಾನ್ಸೂಲ್ ಜನರಲ್ ಫರ್ನಾಂಡೋ ಹಿರೆಡಿಯಾ ನೌಗೌರ್ ಹಾಗೂ ಇತರರು ಶನಿವಾರ ಮೈಸೂರಿನ ಕೆ.ಸಿ.ಲೇಔಟ್‌ನಲ್ಲಿರುವ ಭಗವದ್ಗೀತೆ ಸೇರಿದಂತೆ ವೇದ ಪುರಾಣ ಪುಣ್ಯ ಕತೆಗಳ ಚಿತ್ರ ಕಲಾವಿದರಾದ ಗಂಜೀಫಾ ರಘುಪತಿ ಭಟ್ ಅವರ ಸ್ಟುಡಿಯೋಗೆ ಭೇಟಿ ನೀಡಿದ್ದರು. ಈ ವೇಳೆ ವೈವಿಧ್ಯಮಯ ಹಾಗೂ ಅಪೂರ್ವ ಚಿತ್ರ ಕಲಾಕೃತಿಗಳನ್ನು ವೀಕ್ಷಿಸಿ, ಅವುಗಳ ವಿವರಣೆ ಪಡೆದರು. ಈ ವೇಳೆ ರಘುಪತಿ ಭಟ್ಟರು, ಕಾನ್ಸೂಲ್‌ಗೆ ಭಗವದ್ಗೀತೆಯ ಅಪರೂಪದ ಚಿತ್ರ ಕಲಾಕೃತಿಯ ಪುಸ್ತಿಕೆ ಯೊಂದನ್ನು ನೆನಪಿನ ಕಾಣಿಕೆಯಾಗಿ ನೀಡಿ, ಅಭಿನಂದಿಸಿದರು. ಇವರೊಂದಿಗೆ ವಾಸು ಅಗರ್‌ಬತ್ತೀಸ್‌ನ ವಿಷ್ಣು ಇದ್ದರು.

ಮಳೆಹಾನಿ: ಡಿಸಿ ಜೊತೆ ಸಿಎಂ ವಿಡಿಯೋ ಸಂವಾದ



ಮಡಿಕೇರಿ, ಮೇ 21- ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಳೆಹಾನಿಗೆ ಸಂಬಂಧಿಸಿಂತೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿ, ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಪೊಲೀಸ್ ವರಿಷ್ಠಾಧಿಕಾರಿಗಳೊಂದಿಗೆ ವಿಡಿಯೋ ಸಂವಾದ ಮೂಲಕ ಶನಿವಾರ ಪರಿಶೀಲನಾ ಸಭೆ ನಡೆಸಿದರು.

ಮುಂಗಾರು ಸಂದರ್ಭದಲ್ಲಿ ಜಿಲ್ಲೆಯ ಭೂಕುಸಿತ ಪ್ರದೇಶಗಳಲ್ಲಿನ ಜನರನ್ನು ಸ್ಥಳಾಂತರಿಸುವುದು ಹಾಗೂ ಈ ಹಿಂದೆ ಪ್ರಾಕೃತಿಕ ವಿಕೋಪದಿಂದಾಗಿರುವ ಅನಾಹುತಗಳು ಮರುಕಳುಹಿಸದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿಯವರಿಗೆ ಮುಖ್ಯಮಂತ್ರಿ ಬೊಮ್ಮಾಯಿ ಅವರು ನಿರ್ದೇಶನ ನೀಡಿದರು.

ಮುಂಗಾರು ಸಂದರ್ಭದಲ್ಲಿ ಜಿಲ್ಲೆಯ ಸೂಕ್ಷ್ಮ ಪ್ರದೇಶಗಳಲ್ಲಿ ಅಗತ್ಯ ಮುನ್ನೆಚ್ಚರ ವಹಿಸಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ತಿಳಿಸಿದರು.

ಜಿ.ಪಂ ಸಿಇಒ ಭನ್ವರ್ ಸಿಂಗ್ ಮೀನಾ, ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ, ಉಪ ವಿಭಾಗಾಧಿಕಾರಿ ಯತೀಶ್ ಉಳ್ಳಾಲ್, ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಶಬಾನಾ ಎಂ.ಶೇಕ್, ಡಿವೈಎಸ್‌ಪಿ ಗಜೇಂದ್ರ ಪ್ರಸಾದ್, ಪಿಡಬ್ಲ್ಯುಡಿ ಇಇ ನಾಗರಾಜು, ಭೂ ದಾಖಲೆಗಳ ಉಪನಿರ್ದೇಶಕ ಶ್ರೀನಿವಾಸ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸಪ್ಪ, ಪ್ರಕೃತಿ ವಿಕೋಪದ ಸಂಯೋಜಕರಾದ ಅನನ್ಯ ವಾಸುದೇವ್ ಇತರರು ಇದ್ದರು.

ಫುಡ್ ಡೆಲಿವರಿ ಬಾಯ್ ಬೈಕ್‌ಗೆ ಡಿಕ್ಕಿ ಹೊಡೆದು ಪರಾರಿಯಾಗಿದ್ದ ಜೀಪ್ ಚಾಲಕನ ಬಂಧನ

ಮಡಿಕೇರಿ, ಮೇ 21- ಶುಕ್ರವಾರದಂದು ನಗರದ ಚೈನ್‌ಗೇಟ್ ಬಳಿ ನಡೆದಿದ್ದ ಅಪಘಾತ ಪ್ರಕರಣದಲ್ಲಿ ಫುಡ್ ಡೆಲಿವರಿ ಬಾಯ್ ಸಾವಿಗೆ ಕಾರಣವಾಗಿದ್ದ ವಾಹನ ಚಾಲಕನನ್ನು ಮಡಿಕೇರಿ ನಗರ ಸಂಚಾರ ಪೊಲೀಸರು ಬಂಧಿಸಿದ್ದಾರೆ. ಹೆಬ್ಬೆಟ್ಟಗೇರಿ ನಿವಾಸಿ, ಮಾಂದಲ್ ಪಟ್ಟಿಗೆ ಪ್ರವಾಸಿಗರನ್ನು ಕರೆದೊಯ್ಯುವ ಬಾಡಿಗೆ ಜೀಪಿನ ಚಾಲಕ ನಿಶ್ಚಿತ್ ಅಲಿಯಾಸ್ ಅಂಬ್ಲಿ(24) ಬಂಧಿತ ವಾಹನ ಚಾಲಕನಾಗಿದ್ದು, ಆರೋಪಿ ಚಾಲಕನ ಬಳಿ ಡ್ರೈವಿಂಗ್ ಲೈಸನ್ಸ್ ಕೂಡ ಇಲ್ಲದಿರುವುದು ಪೊಲೀಸರ ತನಿಖೆಯಿಂದ ತಿಳಿದು ಬಂದಿದ್ದು, ಬಂಧಿತ ಆರೋಪಿಯ ವಿರುದ್ಧ 'ಹಿಟ್ ಆ್ಯಂಡ್ ರನ್' ಕಾಯಿದೆ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಘಟನೆ ಹಿನ್ನೆಲೆ: ಶುಕ್ರವಾರ ಮಧ್ಯಾಹ್ನ ಚೆಟ್ಟಳ್ಳಿಯ ಗ್ರಾಹಕರೊಬ್ಬರಿಗೆ ಫುಡ್ ಡೆಲಿವರಿ ಮಾಡಲು ತಿಮ್ಮಯ್ಯ ತೇಜಸ್ ತೆರಳುತ್ತಿದ್ದ ವೇಳೆ ಚೈನ್‌ಗೇಟ್ ಬಳಿ ಅಪರಿಚಿತ ವಾಹನವೊಂದು ಅವರ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದು ಸ್ಥಳದಲ್ಲಿ ವಾಹನ ನಿಲ್ಲಿಸದೇ ಚಾಲಕ, ವಾಹನ ಸಹಿತ ಪರಾರಿಯಾಗಿದ್ದ. ತಿಮ್ಮಯ್ಯ ತೇಜಸ್ ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದರು.

ಪ್ರಕರಣದ ಕುರಿತು ಮಡಿಕೇರಿ ನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಸಿ.ಸಿ. ಕ್ಯಾಮರಾಗಳನ್ನು ಪರಿಶೀಲಿಸಿದ ಪೊಲೀಸರು ಶನಿವಾರ ಬೆಳಗ್ಗೆ ಆರೋಪಿ ಚಾಲಕ ನಿಶ್ಚಿತ್ ಅಲಿಯಾಸ್ ಅಂಬ್ಲಿ ಎಂಬಾತನನ್ನು ಬಂಧಿಸಿದ್ದಾರೆ. ಅಪಘಾತ ಎಸಗಿ ಯುವಕನ ಸಾವಿಗೆ ಕಾರಣವಾದ ವಾಹನವನ್ನು ಕೂಡ ವಶಕ್ಕೆ ಪಡೆಯಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಆಟೋ ಪಲ್ಟಿ: ಚಾಲಕ ಸಾವು

ಗೋಣಿಕೊಪ್ಪ, ಮೇ 21- ಆಟೋ ಪಲ್ಟಿಯಾಗಿ ಚಾಲಕ ಮೃತಪಟ್ಟ ಘಟನೆ ಗೋಣಿಕೊಪ್ಪ ಹರಿಶ್ಚಂದ್ರ ಪುರದ ಪಲ್ಲೇರಿ ಟಿಂಬರ್ಸ್ ಬಳಿ ಮೇ 19ರಂದು ಸಂಜೆ ಸಂಭವಿಸಿದೆ.

ಕಲ್ಲಾಳ ಹೆಬ್ಬಾಲೆ ಭದ್ರಗೋಳ ನಿವಾಸಿ ಈಶ್ವರಪ್ಪ (32) ಅಪಘಾತದಲ್ಲಿ ಮೃತಪಟ್ಟ ಆಟೋ ಚಾಲಕನಾಗಿದ್ದು, ಇವರು ಮೇ 19ರಂದು ಗೋಣಿಕೊಪ್ಪ ಪರಿಮಳಾ ಕಲ್ಯಾಣ ಮಂಟಪದಲ್ಲಿ ನಡೆದ ಸಂಬಂಧಿಕರ ಮದುವೆಗೆ ತೆರಳಿ ಹಿಂತಿರುಗುತ್ತಿದ್ದಾಗ ನಿಯಂತ್ರಣ ತಪ್ಪಿದ ಆಟೋ (ಕೆಎ 12-ಎ 8208) ಹರಿಶ್ಚಂದ್ರ ಪುರದಲ್ಲಿ ಪಲ್ಟಿಯಾಗಿದೆ. ತೀವ್ರವಾಗಿ ಗಾಯಗೊಂಡಿದ್ದ ಇವರನ್ನು ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಗೋಣಿಕೊಪ್ಪ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಲೈನ್ ಮ್ಯಾನ್‌ಗಳ ಜೊತೆ ಮರದ ಕೊಂಬೆ ಕಡಿಯಲು ಹೋದ ಕಾರ್ಮಿಕ ವಿದ್ಯುತ್ ಸ್ಪರ್ಶದಿಂದ ಸಾವು

ನಾಪೋಕ್ಲು, ಮೇ 21(ದುಗ್ಗಳ)- ಸೆಸ್ಕ್ ಲೈನ್ ಮ್ಯಾನ್‌ಗಳ ಜೊತೆ ಮರದ ಕೊಂಬೆ ಕಡಿಯಲು ಹೋದ ಕಾರ್ಮಿಕನೋರ್ವ ವಿದ್ಯುತ್ ಸ್ಪರ್ಶದಿಂದ ಸಾವನಪ್ಪಿದ ಘಟನೆ ಇಲ್ಲಿಗೆ ಸಮೀಪದ ಕಕ್ಕಬ್ಬೆ-ಮರಂದೊಡ ಗ್ರಾಮದಲ್ಲಿ ಶನಿವಾರ ಸಂಭವಿಸಿದೆ.

ಕೂಲಿ ಕಾರ್ಮಿಕ ಆಚಾರಿ ರುದ್ರಪ್ಪ(65) ಎಂಬಾತನೇ ವಿದ್ಯುತ್ ಸ್ಪರ್ಶದಿಂದ ಸಾವನ್ನಪ್ಪಿದವನಾಗಿದ್ದು, ಮರಂದೊಡ ಗ್ರಾಮದ ತೋಟವೊಂದರಲ್ಲಿ ವಿದ್ಯುತ್ ತಂತಿಗಳ ಮೇಲೆ ಹಾದು ಹೋಗಿದ್ದ ಮರದ ಕೊಂಬೆಗಳನ್ನು ಕಡಿಯಲು ಲೈನ್ ಮ್ಯಾನ್‌ಗಳ ಜೊತೆ ಈತ ತೆರಳಿದ್ದ. ಈ ವೇಳೆ ಅಲ್ಯೂಮಿನಿಯಂ ಏಣಿಗೆ ವಿದ್ಯುತ್ ತಂತಿಗಳು ತಗುಲಿದ ಪರಿಣಾಮ ಏಣಿಯ ಮೇಲೆ ನಿಂತಿದ್ದ ರುದ್ರಪ್ಪ ವಿದ್ಯುತ್ ಸ್ಪರ್ಶದಿಂದ ಸಾವನ್ನಪ್ಪಿದ್ದಾನೆ. ಈತನ ಸಾವಿಗೆ ಸೆಸ್ಕ್ ಇಲಾಖೆಯವರೇ ನೇರ ಕಾರಣ ಕರ್ತರಾಗಿದ್ದು, ರುದ್ರಪ್ಪ ಕುಟುಂಬಕ್ಕೆ ಪರಿಹಾರ ನೀಡಬೇಕೆಂದು ಗ್ರಾಪಂ ಮಾಜಿ ಸದಸ್ಯ ಚಂಡೀರ ಜಗದೀಶ್ ಒತ್ತಾಯಿಸಿದ್ದಾರೆ. ನಾಪೋಕ್ಲು ಠಾಣೆ ಸಬ್‌ಇನ್ಸ್‌ಪೆಕ್ಟರ್ ಸದಾಶಿವ ಮತ್ತು ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2,859 ಅಡಿ
ಶನಿವಾರ	2850.51 ಅಡಿ
ಒಳ ಹರಿವು	653 ಕ್ಯೂಸೆಕ್
ಹೊರ ಹರಿವು	320 ಕ್ಯೂಸೆಕ್

ಫಾಲ್ಸ್‌ನಲ್ಲಿ ಕಾಲು ಜಾರಿ ಬಿದ್ದು ವಿದ್ಯಾರ್ಥಿ ನೀರು ಪಾಲು



ನಾಪೋಕ್ಲು, ಮೇ 21(ದುಗ್ಗಳ)- ಸ್ನೇಹಿತರ ಜೊತೆ ವಿಹಾರಕ್ಕೆ ತೆರಳಿದ್ದ ವಿದ್ಯಾರ್ಥಿಯೋರ್ವ ಫಾಲ್ಸ್‌ನಲ್ಲಿ ಕಾಲು ಜಾರಿ ಬಿದ್ದು ಸಾವನ್ನಪ್ಪಿದ ಘಟನೆ ಇಲ್ಲಿಗೆ ಸಮೀಪದ ಬಲ್ಲಮಾವಟ್ಟಿ ಬಳಿಯ ಪೇರೂರು ಗ್ರಾಮದ ಪಾರೆಕಾಡು ಎಂಬಲ್ಲಿ ಇಂದು ಸಂಜೆ ಸಂಭವಿಸಿದೆ.

ಕೊಟ್ಟಮುಡಿ ಗ್ರಾಮದ ಹ್ಯಾರೀಸ್ ಎಂಬವರ ಪುತ್ರ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಅಪ್ಸಲ್ (16) ನೀರು ಪಾಲಾದವನಾಗಿದ್ದು, ಈತ ತನ್ನ ಐವರು ಸ್ನೇಹಿತರೊಂದಿಗೆ ಇಂದು ಮಧ್ಯಾಹ್ನ ಪಾರೆಕಾಡು ಎಂಬಲ್ಲಿ ತೋಟವೊಂದರಲ್ಲಿ ಇರುವ ಲಾಫಿಂಗ್ ಫಾಲ್ಸ್‌ಗೆ ತೆರಳಿದ್ದಾನೆ. ಸಂಜೆ ವೇಳೆಗೆ ಫಾಲ್ಸ್‌ನಿಂದ ಕಾಲು ಜಾರಿ ಬಿದ್ದ ಅಪ್ಸಲ್ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾನೆ. ಈ ಸಂಬಂಧ ನಾಪೋಕ್ಲು ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಚಾಮರಾಜನಗರದಲ್ಲಿ ವಿಜೃಂಭಣೆಯ ಶ್ರೀ ಬಸವೇಶ್ವರರ ಭಾವಚಿತ್ರದ ಮೆರವಣಿಗೆ



ಚಾಮರಾಜನಗರ, ಮೇ 21- ನಗರದಲ್ಲಿ ಶನಿವಾರ ಜಗಜ್ಯೋತಿ ಶ್ರೀಬಸವೇಶ್ವರರ ಭಾವಚಿತ್ರದ ಮೆರವಣಿಗೆ ವಿವಿಧ ಜನಪದ ಕಲಾ ತಂಡಗಳೊಂದಿಗೆ ಅದ್ಧೂರಿಯಾಗಿ ನಡೆಯಿತು.

ಬಸವರಾಜ ಸ್ವಾಮೀಜಿ ಜನ್ಮ ಶತಮಾನೋತ್ಸವ, ಸಿದ್ಧಬಸವರಾಜ ಸ್ವಾಮೀಜಿ ಅವರ ಸಂಸ್ಮರಣೋತ್ಸವ ಹಾಗೂ ಬಸವರಾಜ ಸ್ವಾಮೀಜಿ ಅವರ ಅನುಭವ ಮಂಟಪ ಉದ್ಘಾಟನೆ, ಬಸವೇಶ್ವರ ಪುತ್ಥಳಿ ಅನಾವರಣ, ಗ್ರಾಮಾಂತರ ಬಸವ ಜಯಂತ್ಯೋತ್ಸವ ಅಂಗವಾಗಿ ನಗರದ ಸಿದ್ದಮಲ್ಲೇಶ್ವರ ವಿರಕ್ತ ಮಠದ ಆವರಣದಲ್ಲಿ ಹಮ್ಮಿಕೊಂಡಿದ್ದ ಬಸವೇಶ್ವರರ ಭಾವಚಿತ್ರದ ಮೆರವಣಿಗೆಗೆ ಮರಿಯಾಲದ ಮಠದ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ, ಮೂಡುಗೂರು ಮಠದ ಇಮ್ಮಡಿ ಉದ್ದಾನ ಸ್ವಾಮೀಜಿ, ಸಿದ್ದಮಲ್ಲೇಶ್ವರ ವಿರಕ್ತ ಮಠದ ಚನ್ನಬಸವ ಸ್ವಾಮೀಜಿ ಚಾಲನೆ ನೀಡಿದರು.

ಮೆರವಣಿಗೆಯು ಜೋಡಿ ರಸ್ತೆ, ಕೆಎಸ್‌ಆರ್‌ಟಿಸಿ ರಸ್ತೆ, ಗುಂಡ್ಲುಪೇಟೆ ವೃತ್ತ, ದೊಡ್ಡಂಗಡಿ ಬೀದಿ, ಚಿಕ್ಕಂಗಡಿ ಬೀದಿ, ಸಂತೇಮರಹಳ್ಳಿ ವೃತ್ತ, ಡಿವಿಯೇಷನ್ ರಸ್ತೆ, ಭುವನೇಶ್ವರಿ ವೃತ್ತದ ಮೂಲಕ ಮಠದ ಆವರಣಕ್ಕೆ ಬಂದು ತಲುಪಿತು.

ನಾದಸ್ವರ ತಂಡ, ನಂದಿ ಧ್ವಜ, ವೀರಭದ್ರ ಕುಣಿತ, ಡೊಳ್ಳು ಕುಣಿತ, ಕಂಸಾಳೆ ತಂಡ, ಗೊರವರ ಕುಣಿತ, ಗಾರುಡಿ ಗೊಂಬೆ, ಜೋಡಿ ಬಸವ, ಜೋಡಿ ಎತ್ತು, ಬ್ಯಾಂಡ್‌ಸೆಟ್ ತಂಡ ಸೇರಿದಂತೆ ವಿವಿಧ ಗ್ರಾಮಗಳಿಂದ ಅಲಂಕೃತವಾಗಿ ಬಂದಿದ್ದ ಬಸವಣ್ಣನವರ ಭಾವಚಿತ್ರಗಳು ಮೆರವಣಿಗೆಗೆ ಮೆರಗು ತಂದವು.

ಬೆಳಗ್ಗೆ ಪೂಜ್ಯರ ಗದ್ದುಗೆಗೆ ಬಿಲ್ವಾರ್ಚನೆ ಮಹಾಮಂಗಳಾರತಿ, ಷಟ್‌ಸ್ಥಳ ಧ್ವಜಾರೋಹಣ, ಧರ್ಮ ಸಂದೇಶ, ಅನುಭವ ಮಂಟಪಕ್ಕೆ ಕಳಶಾರೋಹಣ ವಿವಿಧ ಮಠಾಧೀಶರುಗಳಿಂದ ನಡೆಯಿತು.

ಇಂದಿನ ಕಾರ್ಯಕ್ರಮ

ಮೇ 22ರಂದು ಬೆಳಗ್ಗೆ ಗದ್ದುಗೆಗೆ ಬಿಲ್ವಾರ್ಚನೆ, ಮಹಾಮಂಗಳಾರತಿ, ಷಟ್‌ಸ್ಥಳ ಧ್ವಜಾರೋಹಣ, ಗುರುಗಳ ಪಾದಪೂಜೆ ನಂತರ ಊಟಿ ಭಕ್ತವೃಂದದಿಂದ ವಚನ ಗಾಯನ ನಡೆಯಲಿದೆ.

ಬಸವರಾಜ ಸ್ವಾಮೀಜಿ ಅವರ ಅನುಭವ ಮಂಟಪವನ್ನು ಬೆಳಗ್ಗೆ 10 ಗಂಟೆಗೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ ಉದ್ಘಾಟಿಸಲಿದ್ದಾರೆ.

ಬಸವೇಶ್ವರರ ಪುತ್ಥಳಿಯನ್ನು ಬೆಟ್ಟದಪುರ ಮಠದ ಚನ್ನಬಸವ ದೇಶಿಕೇಂದ್ರ ಸ್ವಾಮೀಜಿ, ಪಡಗೂರು ಅಡವಿ ಮಠದ ಶಿವಲಿಂಗೇಂದ್ರ ಸ್ವಾಮೀಜಿ ಅನಾವರಣಗೊಳಿಸಲಿದ್ದಾರೆ.

ಬೈಕ್‌ಗೆ ಬಸ್ ಡಿಕ್ಕಿ: ಸವಾರ ಸಾವು

ಚಾಮರಾಜನಗರ, ಮೇ 21- ಬೈಕ್‌ಗೆ ಖಾಸಗಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲಿಯೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಸಂತೇಮರಹಳ್ಳಿ ಹೋಬಳಿಯ ಟಿ.ನರಸೀಪುರ ರಸ್ತೆಯ ಕಮರವಾಡಿ-ಬಾನವಾಡಿ ಗ್ರಾಮದ ಗೇಟ್ ಬಳಿ ಶನಿವಾರ ಮಧ್ಯಾಹ್ನ ನಡೆದಿದೆ. ಟಿ.ನರಸೀಪುರ ತಾಲೂಕಿನ ಕೆರೋಹಟ್ಟಿ ಗ್ರಾಮದ ರವೀಂದ್ರ ಮೃತಪಟ್ಟ ಸವಾರ. ಈತ ಕೆಲಸ ನಿಮಿತ್ತ ನರಸೀಪುರದಿಂದ ಸಂತೇರಹಳ್ಳಿಗೆ ಬರುತ್ತಿದ್ದಾಗ ಎದರಿನಿಂದ ಬಂದ ಬಸ್ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ರವೀಂದ್ರ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಸಂತೇಮರಹಳ್ಳಿ ಪೊಲೀಸರು ಭೇಟಿ ನೀಡಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ನಾಳೆ ಉರುಕಾತೇಶ್ವರಿ ಅಮ್ಮನವರ ದೇವಸ್ಥಾನ ಉದ್ಘಾಟನೆ



ಚಾಮರಾಜನಗರ, ಮೇ 21- ತಾಲೂಕಿನ ಸಂತೇಮರಹಳ್ಳಿ ಹೋಬಳಿಯ ನವಿಲೂರು ಗ್ರಾಮದಲ್ಲಿ ಮೇ 23ರ ಸೋಮವಾರ ಉರುಕಾತೇಶ್ವರಿ ಅಮ್ಮನವರ ನೂತನ ದೇವಸ್ಥಾನ ಹಾಗೂ ಪ್ರತಿಷ್ಠಾಪನೆ ಮಹೋತ್ಸವ ನಡೆಯಲಿದೆ.

ಈ ವೇಳೆ ವಾಟಾಳು ಸೂರ್ಯಸಿಂಹಾಸನ ಮಠಾಧ್ಯಕ್ಷ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಹಾಗೂ ತಿ.ನರಸೀಪುರ ತಾಲೂಕಿನ ಹೊಸೂರು ಹುಂಡಿ ಗ್ರಾಮದ ಶ್ರೀಗುರುಮಲೇಶ್ವರ ದಾಸೋಹ ಶಾಖಾ ಮಠದ ಶ್ರೀ ರಾಜಶೇಖರ ಸ್ವಾಮೀಜಿ ದಿವ್ಯ ಸಾನ್ನಿಧ್ಯವಹಿಸಲಿದ್ದಾರೆ.

ಬೆಳಗ್ಗೆ 5 ಗಂಟೆಯಿಂದ 9.40ರವರೆಗೆ ದೇವತಾ ಕಾರ್ಯಗಳು, ಹೋಮ ಹವನ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ನೆರವೇರಲಿದೆ. ಮಧ್ಯಾಹ್ನ 1 ಗಂಟೆಗೆ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.


ಚಾ.ನಗರ ನೂತನ ಎಡಿಸಿ ಕವಿತಾ ರಾಜಾರಾಮ್




ಚಾಮರಾಜನಗರ, ಮೇ 21- ಕವಿತಾ ರಾಜಾರಾಮ್ ಅವರನ್ನು ಚಾಮರಾಜನಗರ ಜಿಲ್ಲೆಯ ಹೆಚ್ಚುವರಿ ಜಿಲ್ಲಾಧಿಕಾರಿಯಾಗಿ ವರ್ಗಾವಣೆ ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ಮಲೆ ಮಹದೇಶ್ವರಸ್ವಾಮಿ ಬೆಟ್ಟ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯಾಗಿ ಹೆಚ್ಚುವರಿ ಹೊಣೆಗಾರಿಯನ್ನು ಇವರಿಗೆ ನೀಡಲಾಗಿದೆ. ಕವಿತಾ ರಾಜಾರಾಮ್ ಈ ಹಿಂದೆ ಕೊಳ್ಳೇಗಾಲ ಉಪ ವಿಭಾಗಾಧಿಕಾರಿಯಾಗಿ ಸೇವೆ ಸಲ್ಲಿಸಿ, ಹಾಸನ ಎಡಿಸಿಯಾಗಿ ವರ್ಗಾವಣೆಯಾಗಿದ್ದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ

"ಮೈಸೂರಿನ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮದಿನಾಚರಣೆ ಅಂಗವಾಗಿ ಮೇ 22ರಿಂದ 31ರ ವರೆಗೆ ಹಲವಾರು ಧಾರ್ಮಿಕ ಕೈಂಕರ್ಯಗಳು ನಡೆಯಲಿವೆ. ಪ್ರಯುಕ್ತವಾಗಿ ಈ ವಿಶೇಷ ಲೇಖನ"





ಸಚ್ಚಿದಾನಂದ
–ನಂಬಿದವರಿಗೆ ಸದ್ಗತಿ

ನಂ. ಶ್ರೀಕಂಠ ಕುಮಾರ್,
ಮೊ: 9481067333

ಅರಮನೆ ನಗರಿ, ಸಾಂಸ್ಕೃತಿಕ ರಾಜಧಾನಿ, ವಿದ್ಯಾಕೇಂದ್ರ ಸಮುಚ್ಚಯಗಳ ನಡುವೆ ಮೈಸೂರಿನಲ್ಲಿ ಆಧ್ಯಾತ್ಮಿಕ ಕಳಶಪ್ರಾಯ ಶ್ರೀ ದತ್ತಪೀಠವು ಇಂದು ವಿಶ್ವದಲ್ಲೇ ಕಂಗೊಳಿಸುತ್ತಿದ್ದು, ಸುಮಾರು ಐದು ದಶಕಗಳಿಂದಲೂ ಧರ್ಮ ಪ್ರಸಾರವನ್ನು ದೇಶ, ವಿದೇಶಗಳಲ್ಲೂ ಮಾಡುತ್ತಾ ಭಕ್ತರಿಗೆ ಸನ್ಮಾರ್ಗವನ್ನು ತೋರುತ್ತಾ ವಿಶ್ವ ಶಾಂತಿಗಾಗಿ ನಿರಂತರವಾಗಿ ಹೋಮ, ಹವನ, ಧ್ಯಾನ–ಪೂಜಾದಿಗಳನ್ನು ನೆರವೇರಿಸುತ್ತಾ ಮನುಕುಲದ ಶ್ರೇಯಸ್ಸನ್ನು ಬಯಸುತ್ತಿರುವ ದತ್ತ ಪೀಠಾಧಿಪತಿಗಳಾದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಅವತಾರ ಪುರುಷರಷ್ಟೇ ಅಲ್ಲ, ಸಿದ್ಧಿಪುರುಷರೂ ಹೌದು.

ಬಾಲ್ಯ: ಚಿತ್ರಭಾನು ಸಂವತ್ಸರದ ಅಧಿಕ ಜೇಷ್ಠ ಮಾಸದ ಶುದ್ಧ ಏಕಾದಶೀ ಮಂಗಳವಾರದಂದು ಬೆಳಗ್ಗೆ ಹಸ್ತಾ ನಕ್ಷತ್ರಯುಕ್ತ ವೃಷಭ ಲಗ್ನದಲ್ಲಿ (26–05–1942) ಅರ್ಕಾವತಿ, ಕಾವೇರಿ ಮತ್ತು ಗುಪ್ತಗಾಮಿನಿ ನದಿಗಳ ಸಂಗಮ ಪುಣ್ಯ ಸ್ಥಳ ಮೇಕೆದಾಟು ಗ್ರಾಮದಲ್ಲಿ ಸದ್ಬ್ರಾಹ್ಮಣ ಕುಟುಂಬವೊಂದರಲ್ಲಿ ವೇದ ಪಂಡಿತ ನರಸಿಂಹಶಾಸ್ತ್ರಿ ಮತ್ತು ಶ್ರೀಮತಿ ಜಯಲಕ್ಷ್ಮಮ್ಮ ದಂಪತಿಯ ಪುತ್ರರತ್ನರಾಗಿ ಜನನವಾಯಿತು. ತಮ್ಮ ಕುಲದೈವವಾದ ಶ್ರೀ ನರಸಿಂಹ ಸ್ವಾಮಿಯನ್ನು ಸ್ಮರಿಸಿ, ಮಗುವಿಗೆ ಸತ್ಯನಾರಾಯಣ ಎಂದು ನಾಮಕರಣ ಮಾಡಿದರು. ತಾಯಿ ಜಯಲಕ್ಷ್ಮಿಯು ಪವಿತ್ರವಾದ ದೈವ ಸಂಕೀರ್ತನೆಗಳನ್ನು ಹಾಡುತ್ತಿದ್ದರೆ, ಈ ಹಸುಗೂಸು ನಗುನಗುತಾ ಕೇಳುತ್ತಿರುತ್ತಿತ್ತು. ಶ್ರೀ ದತ್ತಾತ್ರೇಯ ಸ್ವಾಮಿಯ ಸಾಕ್ಷಾತ್ಕಾರ ಪಡೆದಿದ್ದ ಆ ಯೋಗಿನಿ ಮಾತೆಯು ತಾಯಿ–ಗುರು ಎರಡೂ ಸ್ಥಾನಗಳನ್ನು ತಾನೇ ತುಂಬಿ ಆ ಮಗುವನ್ನು ಪವಿತ್ರ ವಾತಾವರಣದಲ್ಲಿ ಬೆಳೆಸಿದಳು. ಸಾಧು–ಸಂತರು ಮನೆಗೆ ಬಂದಾಗ ಸತ್ಯನಾರಾಯಣ ಓಡೋಡಿ ಬಂದು ಅವರು ಹಾಡುತ್ತಿದ್ದ ಭಗವಂತನ ನಾಮ ಸಂಕೀರ್ತನೆಗಳನ್ನು ಕೇಳುತ್ತಾ ಅವರೊಡನೆ ಸೇರಿ ತಾನೂ ಹಾಡುತ್ತಿದ್ದ. ಚಿಕ್ಕ ವಯಸ್ಸಿನಲ್ಲೇ ಸತ್ಯನಾರಾಯಣ ಅನೇಕ ಮಹಿಮೆಗಳನ್ನು ತೋರುತ್ತಿದ್ದ. ಅಲ್ಲದೇ ಭೂತ–ಭವಿಷ್ಯತ್–ವರ್ತಮಾನಗಳ ಬಗ್ಗೆ ತಿಳಿಸುತ್ತಿದ್ದ ಎಂದು ಹೇಳುವವರುಂಟು. ಇತರೆ ಮಕ್ಕಳನ್ನೂ ದೇವಸ್ಥಾನಕ್ಕೆ ಕರೆದೊಯ್ದು ವಿಷ್ಣು ಹಾಗೂ ಶಿವನ ಸಂಕೀರ್ತನೆಯನ್ನು ಮಾಡಿಸುತ್ತಿದ್ದ.

ತಾಯಿಯೇ ಮೊದಲ ಗುರು: ಸತ್ಯನಾರಾಯಣನನ್ನು ಶಾಲೆಗೆ ಸೇರಿಸಿದರೂ ಪ್ರಾಪಂಚಿಕ ವಿದ್ಯೆಯನ್ನು ಅಭ್ಯಸಿಸಲು ಆತನ ಮನಸ್ಸು ಒಪ್ಪಲಿಲ್ಲ. ಪ್ರತಿ ನಿತ್ಯ ದೇವಾಲಯಕ್ಕೆ ಹೋಗಿ ತನ್ನ ತಾಯಿಯಂತೆಯೇ ಭಗವಂತನ ಧ್ಯಾನದಲ್ಲಿ ನಿರತನಾಗಿರುತ್ತಿದ್ದ. ಜಯಲಕ್ಷ್ಮಿ ಮಾತೆಯು ಮಗನಿಗೆ ರಾಮಾಯಣ, ಮಹಾಭಾರತ, ಪುರಾಣ ಕಥೆಗಳನ್ನು ಹೇಳಿ ಕೊಡುತ್ತಿದ್ದಳು. ಅಂತೆಯೇ ಆ ಜ್ಞಾನವನ್ನು ನಿಸ್ವಾರ್ಥದಿಂದ ಹತ್ತು–ಹಲವು ಜನರಿಗೆ ಹಂಚು ಎಂದು ಆದೇಶಿಸಿ ಬೊಮ್ಮಪರ್ತಿ ಗ್ರಾಮದಲ್ಲಿ 1951 ನೇ ಇಸವಿಯಲ್ಲಿ ಪರಮಪದವನ್ನೈದಳು. ತಾಯಿಯೇ ಮೊದಲ ಗುರುವಾದ್ದರಿಂದ ಪ್ರತಿ ವರ್ಷವು ಆಕೆಯ ಪವಿತ್ರ ಸಮಾಧಿಯ ಸನ್ನಿಧಿಯಲ್ಲಿ ಸ್ವಾಮೀಜಿಯವರು ಗುರು ಪೂಜೆ ಮಾಡುತ್ತಾರೆ.

ಉಪನಯನ: ಮಾತೆಯ ನಿಧನಾನಂತರ ಸತ್ಯನಾರಾಯಣ ತನ್ನ ಸಹೋದರಿಯರೊಡನೆ ಪ್ರೊದಟ್ಟೂರಿನಲ್ಲಿದ್ದ ಸೋದರತ್ತೆಯ ಬಳಿ ಆಶ್ರಯ ಪಡೆದರು. ಅಲ್ಲಿ ಹಿರಿಯರು ಸತ್ಯನಾರಾಯಣನಿಗೆ ಉಪನಯನ ಸಂಸ್ಕಾರ ನೀಡುತ್ತಾರೆ. ಬಾಲಕ ಗಾಯತ್ರಿ ಮಂತ್ರೋಪದೇಶ ಪಡೆದು ಹೋಮ ನಡೆಯುತ್ತಿದ್ದ ಸಮಯದಲ್ಲೇ ಸಾಕ್ಷಾತ್ ಆ ಸಿದ್ದಿವಿನಾಯಕನೇ ಪ್ರತ್ಯಕ್ಷನಾಗಿ ಹೋಮಕುಂಡದಲ್ಲಿ ಕಾಣಿಸಿಕೊಂಡನಂತೆ. ಆಗಿನಿಂದ ಸತ್ಯನಾರಾಯಣನ ಜೀವನದ ಮೇಲೆ ಗಣಪತಿಯ ಪ್ರಭಾವವು ಬೀರಿತು. ಇಂದಿಗೂ ಸ್ವಾಮೀಜಿರವರು ಅರ್ಕ ಗಣಪತಿಯ ಪೂಜೆಯನ್ನು ನಿತ್ಯ ಮಾಡುತ್ತಾರೆ. ಹಾಗಾಗಿ ಶ್ರೀ ಗಣಪತಿಯು ಸ್ವಾಮೀಜಿಯವರಿಗೆ ಅನೇಕ ದಿವ್ಯ ಶಕ್ತಿಗಳನ್ನು ನೀಡಿದನು. ಸತ್ಯನಾರಾಯಣ ಮೆಟ್ರಿಕ್ಯುಲೇಷನ್ ವರೆಗೆ ವಿದ್ಯಾಭ್ಯಾಸ ಮಾಡಿ ತನ್ನ ತಂಗಿಯರಿಗೆ ವಿವಾಹ ಮಾಡಲು ಸಹಾಯವಾಗುವುದೆಂಬ ಉದ್ದೇಶದಿಂದ ಸ್ವಲ್ಪ ಕಾಲ ಉಪಾಧ್ಯಾಯನಾಗಿಯೂ ನಂತರ ಪೋಸ್ಟ್ ಮ್ಯಾನ್ ಕೆಲಸಕ್ಕೆ ಸೇರಬೇಕಾಯಿತು.

ಭಕ್ತಿ ಪರವಶ: ಮುಂದೆ ಸತ್ಯನಾರಾಯಣನಲ್ಲಿ ಯಾವುದೋ ಅವ್ಯಕ್ತ ಬದಲಾವಣೆ ಉಂಟಾಯಿತು. ಜಪತಪ, ಮೌನದಲ್ಲಿ ತಲ್ಲೀನನಾಗುತ್ತಿದ್ದ. ತನ್ನ ಧ್ಯಾನದಿಂದ ಹೊರ ಬಂದ ನಂತರ ಯಾವುದೋ ಮಹಿಮೆಯನ್ನು ತೋರಿಸುವುದೋ, ಯಾರದ್ದೊ ದೀರ್ಘಕಾಲದ ವ್ಯಾಧಿಯನ್ನು ನಿವಾರಿಸುವುದೋ ಮಾಡುತ್ತಿದ್ದ, ಆಗಾಗ್ಗೆ ಸಮಾಧಿ ಸ್ಥಿತಿಗೂ ಹೋಗುತ್ತಿದ್ದ. ಅದನ್ನು ನೋಡಿದ ಪಂಡಿತರು, ಪಾಮರರು ಆಶ್ಚರ್ಯಪಡುತ್ತಿದ್ದರು. ಸತ್ಯನಾರಾ ಯಣನಲ್ಲಿ ಆಧ್ಯಾತ್ಮಿಕ ಚಿಂತನೆಯೆಂಬ ನದಿಯು ಉಕ್ಕಿ ಪ್ರವಹಿಸಲಾರಂಭಿಸಿತು. ಸಂಸಾರ ಬಂಧನಗಳನ್ನೂ ಮೀರಿ ಆಧ್ಯಾತ್ಮಿಕ ಸಾಧನೆಯ ಪರಾಕಾಷ್ಠೆಯನ್ನು ಹೊಂದಿ ಸಚ್ಚಿದಾನಂದ ಸ್ವರೂಪರಾಗಿ 1965ನೇ ಇಸವಿಯಲ್ಲಿ ಸ್ವಾಮೀಜಿಯಾಗಿ ರೂಪು ಗೊಂಡರು. ಮೈಸೂರಿನ ಕೆಸರೆ ಎಂಬ ಬಡಾವಣೆಯಲ್ಲಿ ಸ್ವಾಮೀಜಿಯವರು ಧ್ಯಾನಾಸಕ್ತರಾದರು. ಕ್ರಮೇಣ ಭಕ್ತರ ಸಂಖ್ಯೆ ಹೆಚ್ಚ ತೊಡಗಿತು. ನಂತರ ಭಕ್ತರೆಲ್ಲರೂ ಸೇರಿ ಸ್ವಾಮೀಜಿಯವರ ಆಧ್ಯಾತ್ಮಿಕ ಸಾಧನೆಗಾಗಿ ನಂಜನಗೂಡು ರಸ್ತೆಯಲ್ಲಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಸ್ವಾಮೀಜಿಯವರ ಆಶ್ರಮಕ್ಕಾಗಿ ನಾಲ್ಕು ಎಕರೆ ಭೂಮಿಯನ್ನು ಕೊಂಡು ಸ್ವಾಮೀಜಿಯವರಿಗೆ ಕುಟೀರವನ್ನು ಸಹ ನಿರ್ಮಿಸಿದರು.

ದತ್ತಪೀಠ: ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿರವರ ಅನುಷ್ಠಾನ, ಶ್ರೀ ಗಣಪತಿಯ ಅನುಗ್ರಹದಿಂದ 1977ರಲ್ಲಿ ಶ್ರೀ ದತ್ತಾತ್ರೇಯ ದೇವಸ್ಥಾನದ ಪ್ರತಿಷ್ಠಾಪನೆಯೊಂದಿಗೆ ಶ್ರೀ ದತ್ತಪೀಠವು ಅವಿರ್ಭವಿಸಿ ಸನಾತನ ಧರ್ಮದ ಪ್ರಸಾರಕ್ಕೆ ಹೊಸ ನಾಂದಿಯಾಯಿತು. ನಂತರ ವಿಶ್ವ ಪ್ರಾರ್ಥನಾ ಮಂದಿರ, ಶ್ರೀ ರಾಜರಾಜೇಶ್ವರಿ ಪೂಜಾ ಪೀಠ, ಲಿಂಗರೂಪಿ ಸಚ್ಚಿದಾನಂದೇಶ್ವರ ದೇವಸ್ಥಾನ, ಗಂಡ್ಲೂರು ಪೌಂಡರೀಕ ರಂಗ ಸ್ಥಳ, 60ಅಡಿ ಎತ್ತರವಿರುವ ಧ್ವನಿ–ಬೆಳಕು–ಕಾರಂಜಿಗಳನ್ನೊಳಗೊಂಡ ಏಕಶಿಲಾ ಧರ್ಮ ಸ್ತೂಪದ ಸ್ಥಾಪನೆ, 70 ಅಡಿ ಎತ್ತರದ ಶ್ರೀ ಕಾರ್ಯಸಿದ್ಧಿ ಹನುಮಾನ್ ಬೃಹತ್ ಸ್ತಂಭ ನಿರ್ಮಾಣ ಹಾಗೂ ಹಲವಾರು ಪರಿವಾರ ದೇವತೆಗಳ ಪ್ರತಿಷ್ಠಾಪನೆ, ಸಾಕ್ಷಾತ್ ತಿರುಪತಿ ವೆಂಕಟೇಶ್ವರರ ಪ್ರತಿರೂಪವೇ ಆಗಿರುವ ಶ್ರೀ ದತ್ತವೆಂಕಟೇಶ್ವರ ದೇವಸ್ಥಾನ, ಶುಕವನ, ನಕ್ಷತ್ರವನ, ರಾಶಿವನ, ಸಪ್ತರ್ಷಿ ಕಲ್ಯಾಣಿ, ಅನ್ನಪೂರ್ಣ ಮಂದಿರ, ಗೋಶಾಲೆಯೊಂದಿಗೆ ಇಂದು ಶ್ರೀದತ್ತ ಪೀಠವು ಆಧ್ಯಾತ್ಮಿಕ ಕೇಂದ್ರ ವಾಗಿ ಕಂಗೊಳಿಸುತ್ತಿದೆ. ಕಲೆ ಮತ್ತು ಸಾಮಾಜಿಕವಾಗಿ ಕಲೆ ಮತ್ತು ಸಂಗೀತದ ಪ್ರೋತ್ಸಾಹಕ್ಕಾಗಿ ವಿಶಾಲವಾದ ನಾದ ಮಂಟಪ ಸಭಾಂಗಣ ಒಂದು ಅದ್ಭುತ ಕಲಾಕೃತಿಯ ಕೊಡುಗೆಯೂ ಹೌದು. ಅಲ್ಲದೇ ಸಂಸ್ಕೃತ ಮತ್ತು ವೇದ ಪಾಠ ಶಾಲೆ, ಬೃಹತ್ ಪುಸ್ತಕ ಭಂಡಾರ, ವಿಶ್ವಂ ವಿಶೇಷ ಸಂಗ್ರಹಾಲಯ, ಬೋನ್ಸಾಯ್ ಉದ್ಯಾನವನ, ಆಯುರ್ವೇದ–ಮೂಲಿಕ–ಪ್ರಕೃತಿ–ಚಿಕಿತ್ಸಾ ವೈದ್ಯ ಶಾಲೆ ಹೀಗೆ ಜನೋಪಯೋಗಿ ವಿವಿಧೋನ್ಮುಖವಾಗಿ ಪ್ರಗತಿ ಹೊಂದಿದೆ. ಇಲ್ಲಿನ ಆಧ್ಯಾತ್ಮಿಕ, ಸಂಗೀತ ನಾದಸುಧೆಯನ್ನು ಸವಿಯಲು ದೇಶ, ವಿದೇಶಗಳಿಂದ ಸಾವಿರಾರು ಭಕ್ತರು ಆಗಮಿಸಿ ಪರಮ ಪೂಜ್ಯ ಅವಧೂತ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿರವರ ಮಾರ್ಗದರ್ಶನವನ್ನೂ ಪಡೆಯುತ್ತಿರುವರು. ದತ್ತಪೀಠದ ಆಶ್ರಯದಲ್ಲಿ ಕನ್ನಡ, ತೆಲುಗು, ತಮಿಳು, ಹಿಂದಿ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಭಕ್ತಿ ಮಾಲಾ ಎಂಬ ಮಾಸ ಪತ್ರಿಕೆಯನ್ನು ಪ್ರಕಟ ಮಾಡಲಾಗುತ್ತಿದೆ. ಅಲ್ಲದೆ ಧರ್ಮ ಪ್ರಸಾರಕ್ಕಾಗಿ ಹಲವು ಭಾಷೆಗಳಲ್ಲಿ ಶ್ರೇಷ್ಠ ಲೇಖಕರುಗಳಿಂದ ಶ್ರೀ ದತ್ತಪೀಠವು ಪುಸ್ತಕಗಳನ್ನು ಹೊರತರುತ್ತಿದೆ. ಶ್ರೀ ದತ್ತಪೀಠವು ಭಾರತ ದೇಶದಲ್ಲಿ ಸುಮಾರು 80 ಶಾಖೆಗಳನ್ನು ಹಾಗೂ ಸುಮಾರು 15 ದೇಶಗಳಲ್ಲಿ ದತ್ತಯೋಗ ಕೇಂದ್ರವನ್ನು ಹೊಂದಿದ್ದು, ಶ್ರೀಗಳವರು 83 ಬಾರಿ ವಿದೇಶ ಯಾತ್ರೆಯನ್ನು ಮಾಡಿ ಧರ್ಮ ಪ್ರಸಾರದ ಮೂಲಕ ಧರ್ಮ ಜಾಗೃತಿಯನ್ನು ಉಂಟು ಮಾಡುತ್ತಿದ್ದಾರೆ.


ಆಚರಣೆ: ಶ್ರೀ ದತ್ತಪೀಠದಲ್ಲಿನ ವಿಶೇಷ ಧಾರ್ಮಿಕ ಆಚರಣೆ ಅಂದರೆ ಮಹಾ ಶಿವರಾತ್ರಿ ಹಬ್ಬ. ಅಂದು ವಿವಿಧ ಸ್ಥಳಗಳಿಂದ ಭಕ್ತರು ಆಗಮಿಸಿ ಲಿಂಗರೂಪಿ ಸಚ್ಚಿದಾನಂದೇಶ್ವರ ಸ್ವಾಮಿಗೆ ಸ್ವಯಂ ತಮ್ಮ ಕೈಗಳಿಂದಲೇ ಗಂಗಾ ಜಲಾಭಿಷೇಕವನ್ನು ಮಾಡಿ ಪುನೀತಗೊಳ್ಳುವರು. ಅಲ್ಲದೆ ಮಾತಾ ಜಯಲಕ್ಷ್ಮಿ ಅವರ ಜಯಂತಿ, ಶ್ರೀ ನರಸಿಂಹ ಜಯಂತಿ ಶ್ರೀ ಗಣೇಶ ಚತುರ್ಥಿ, ದೇಶದ ಸ್ವಾತಂತ್ರ್ಯೋತ್ಸವದ ಸಂಭ್ರಮಾಚರಣೆ ಶ್ರೀ ದೇವಿ ನವರಾತ್ರಿ ಪೂಜೆ, ಕನ್ನಡ ರಾಜ್ಯೋತ್ಸವ, ಶ್ರೀ ದತ್ತ ಜಯಂತಿ ಹಾಗೂ ಶ್ರೀಗಳವರ ವರ್ಧಂತ್ಯೋತ್ಸವವನ್ನು ಭಕ್ತಿ ಪೂರ್ವಕವಾಗಿ ಆಚರಿಸಲಾಗುವುದು.

ಸಾಮಾಜಿಕ ಕಾಳಜಿ: ಶ್ರೀ ದತ್ತಪೀಠವು ಹಲವಾರು ಸಂದರ್ಭಗಳಲ್ಲಿ ಸಾಮಾಜಿಕ ಕಾಳಜಿಯನ್ನು ತೋರಿದೆ. ವಿಶೇಷವಾಗಿ ಕಾರ್ಗಿಲ್ ವೀರರ ಸಂಕ್ಷೇಮ ನಿಧಿಗೆ ಉದಾರ ಕೊಡುಗೆ, ಕೊರೊನಾ ಮಹಾಮಾರಿಯ ಸಂದರ್ಭದಲ್ಲಿ ಅಗತ್ಯವಿರುವ ಕುಟುಂಬಗಳಿಗೆ ಆಹಾರ ಸಾಮಗ್ರಿ ಹಾಗೂ ಔಷಧಗಳ ವಿತರಣೆ, ಆರ್ಥಿಕವಾಗಿ ಹಿಂದುಳಿದವರಿಗೆ ಹೊಲಿಗೆ ಯಂತ್ರ, ವಿಕಲಾಂಗರಿಗೆ ಕೃತಕ ಕಾಲು, ತ್ರಿಚಕ್ರ ಸೈಕಲ್, ನಗರಪಾಲಿಕೆಗೆ ಶವ ಸಾಗಿಸುವ ವಾಹನ, ಸಂಘ ಸಂಸ್ಥೆಗಳಿಗೆ ಆಂಬುಲೆನ್ಸ್ ನೀಡಲಾಗಿದೆ.

ವರ್ಧಂತ್ಯೋತ್ಸವ

ಪರಮಪೂಜ್ಯ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು 80 ವಸಂತಗಳಿಗೆ ಪಾದಾರ್ಪಣೆಯ ಸಾರ್ಥಕತೆಗಾಗಿ ಭಕ್ತಾದಿಗಳು ಅವರ ವರ್ಧಂತ್ಯೋತ್ಸವನ್ನು ದೇಶ, ವಿದೇಶಗಳ ಶಾಖಾ ಪೀಠಗಳಲ್ಲೂ ಹಾಗೂ ಪ್ರಮುಖವಾಗಿ ಕೇಂದ್ರ ದತ್ತಪೀಠದಲ್ಲೂ ಆಚರಿಸಿ ಕೃತಾರ್ಥರಾಗುತ್ತಿದ್ದಾರೆ. ಅದರ ಅಂಗವಾಗಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿರವರ ನೇರ ಶಿಷ್ಯರಾದ ಪೂಜ್ಯ ಶ್ರೀದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರು ತಮ್ಮ ಗುರುಗಳು ಜನ್ಮ ತಾಳಿದ ಅರ್ಕಾವತಿ, ಕಾವೇರಿ, ಗುಪ್ತಗಾಮಿನಿ ಸಂಗಮವಾದ ಮೇಕೆದಾಟು ಸ್ಥಳದಿಂದ ಮೈಸೂರಿನ ದತ್ತಪೀಠದವರೆಗೆ ಸುಮಾರು 110 ಕಿ.ಮೀಗಳ ಹಾದಿಯಲ್ಲಿ ಆರು ದಿನಗಳ ಕಾಲ ವಿಶ್ವಶಾಂತಿ ಪಾದಯಾತ್ರೆಯನ್ನು ಯಶಸ್ವಿಯಾಗಿ ಭಕ್ತರೊಂದಿಗೆ ಸಂಪನ್ನ ಗೊಳಿಸಿರುವುದು ಹೆಮ್ಮೆಯ ವಿಷಯ. ಹಾಗೆಯೇ ಪುಣ್ಯ ಸಂಗಮದಿಂದ ಜಲವನ್ನು ಸಂಗ್ರಹಿಸಿ ಶ್ರೀ ದತ್ತಾತ್ರೇಯನಿಗೆ ಅಭಿಷೇಕವನ್ನು ನೆರವೇರಿಸುವ ಸಂಕಲ್ಪವನ್ನು ಪೂರ್ಣ ಗೊಳಿಸಿದರು. ಅಲ್ಲದೆ ಪ್ರಮುಖವಾಗಿ ಐದು ಯೋಜನೆಗಳಾದ ಗೋಸಂರಕ್ಷಣೆ, ಮಾತೆಯರು ಮತ್ತು ಮಕ್ಕಳ ಆರೋಗ್ಯ ರಕ್ಷಣೆ, ಸಂಸ್ಕೃತ ವೇದ ಪಾಠ ಶಾಲೆಗಳ ಅಭಿವೃದ್ಧಿ, ಕೃಷಿಕರಿಗೆ ಸಹಾಯ ಹಾಗೂ ಪರಿಸರ ಸಂರಕ್ಷಣೆಯನ್ನು ವರ್ಷವಿಡೀ ಮಾಡುವುದು ಶ್ರೀ ದತ್ತವಿಜಯಾನಂದ ಸ್ವಾಮೀಜಿಯವರ ಆಶಯವೂ ಆಗಿದೆ.

ವಾರ ಭವಿಷ್ಯ



22.05.2022 ರಿಂದ 28.05.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ
ರವಿ–ವೃಷಭ, ಚಂದ್ರ–ಮಕರ, ಕುಂಭ, ಮೀನ, ಮೇಷ, ಕುಜ–ಮೀನ, ಬುಧ–ವೃಷಭ ಗುರು– ಮೀನ, ಶುಕ್ರ–ಮೀನ, ಶನಿ–ಕುಂಭ, ರಾಹು–ಮೇಷ ಮತ್ತು ಕೇತು– ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು". ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ, ವಿಳಾಸ : 533, 6ನೇ ಕ್ರಾಸ್, ಬೋಗಾದಿ ಉತ್ತರ 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ. ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ಸಪ್ತಾಹದ ಆದಿಗೆ ಮನೆಯಲ್ಲಿ ಸಾಮರಸ್ಯ ಸಾಧಿಸಲು ಹೆಣಗಾಡಬೇಕಾದೀತು. ನಿಮಗೆ ಆಗದವರ ಪ್ರತಿಕೂಲ ನಡೆಗಳಿಂದ ಆತಂಕದ ಕ್ಷಣಗಳನ್ನು ಎದುರಿಸಬೇಕಾದೀತು. ವಾರ ಸರಿದಂತೆ ಚಂದ್ರಗ್ರಹದ ಕೃಪೆಯಿಂದ ಬರಬೇಕಾದ ಹಣ ಕೈ ಸೇರುವುದು. ಮನೆ ಮಂದಿಯ ಜೊತೆ ಪುಣ್ಯಕ್ಷೇತ್ರಕ್ಕೆ ತೆರಳಲು ಮೋಕ್ಷಕಾರಕ ಕೇತು ಪ್ರೇರೇಪಿಸುವನು. ಉಷ್ಣಜನಿತ ಕಾಯಿಲೆ ಕಾಡಬಹುದು. – ಶ್ರೀಹನುಮಾನ್ ಚಾಲೀಸ್ ಪಠಿಸಿ, ಶುಭಸಂಖ್ಯೆ–6.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ಹಲವು ಗ್ರಹಗಳ ಶುಭ ಗೋಚಾರದ ಫಲ ಸ್ವರೂಪವಾಗಿ ಉದಯ ಸೂರ್ಯನ ಎದುರು ಇಬ್ಬನಿಯು ಕರಗುವಂತೆ ಕಷ್ಟಗಳಿಂದ ವಿಮೋಚನೆ ಹಾಗೂ ಶತ್ರುಗಳ ಎದುರು ಅಳುಕು ಭಾವನೆ ನಿವಾರಣೆ ಆಗುವುದು. ಸ್ತ್ರೀಯರು ವಿಲಾಸಿ ವಸ್ತುಗಳಿಗೆ ಹಣ ವ್ಯಯಿಸುವರು. ಸರ್ಕಾರಿ ನೌಕರರಿಗೆ ಬಡ್ತಿಯೊಂದಿಗೆ ವರ್ಗಾವಣೆ ಆಗುವ ಸಾಧ್ಯತೆ ಇದೆ. ವಾರದ ಕಡೆಗೆ ಆರೋಗ್ಯದಲ್ಲಿ ಕೊಂಚ ಏರು–ಪೇರು.
– ಶ್ರೀಉತ್ತನಾಳಮ್ಮ ದರ್ಶನ, ಶುಭಸಂಖ್ಯೆ–2.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ಗುರುಜನರು ಸಹಾಯ ಒದಗುವುದರಿಂದ ಕ್ಲಿಷ್ಟ ಸಮಸ್ಯೆಯೊಂದು ಸುಖಾಂತ್ಯವಾಗಲಿದೆ. ವಾರದ ಆದಿಗೆ ಸುಖ–ಸಂತೋಷಗಳು ನಿಮ್ಮ ಪಾಲಿಗಿದೆ. ಕ್ಷೀರಜನ್ಯ ವಸ್ತು ವ್ಯಾಪಾರಿಗಳಿಗೆ ಹೇರಳ ಧನಲಾಭವಾಗುವುದು. ರಾಜಕೀಯ ವ್ಯಕ್ತಿಗಳಿಗೆ ಅಗ್ನಿ ಪರೀಕ್ಷೆ ಎದುರಾಗಲಿದೆ. ಅನಪೇಕ್ಷಿತ ವಿರೋಧಗಳು ನಿಮ್ಮನ್ನು ಕಂಗೆಡಿಸಬಹುದು. ಮನೆಮಂದಿಯೊಂದಿಗೆ ಸ್ನೇಹಭಾವದಿಂದ ಇರುವಿರಾದರೆ ಮಾನಸಿಕ ಅಶಾಂತಿ ಇರದು. – ಶ್ರೀಸುದರ್ಶನ ಮಂತ್ರ ಜಪಿಸಿ, ಶುಭಸಂಖ್ಯೆ–8.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)
ಈ ವಾರ ಅಂದುಕೊಂಡ ಕೆಲಸ ಅಂದುಕೊಂಡ ಸಮಯಕ್ಕೆ ಆಗುವುದರಿಂದ ಹರ್ಷಚಿತ್ತರಾಗಿರುವಿರಿ. ಪುತ್ರ–ಪುತ್ರಿಯರ ಯಶಸ್ಸು ನಿಮಗೆ ಆತ್ಮಬಲವನ್ನು ತಂದುಕೊಡುವುದು. ಸರ್ಕಾರಿ ನೌಕರರು ಉನ್ನತಾಧಿಕಾರಿಗಳ ಪ್ರಶಂಸೆಗೆ ಪಾತ್ರರಾಗುವರು. ವಿವಾಹಯೋಗ್ಯರಿಗೆ ಗುರುಬಲದ ಪ್ರಭಾವದಿಂದ ಸೂಕ್ತ ಬಾಳ ಸಂಗಾತಿ ದೊರಕುವ ಸಾಧ್ಯತೆ ಇದೆ. ರಾಹು ಕಾರಣ ಸ್ನಾಯು ಸಂಬಂಧಿತ ತೊಂದರೆ ಎದುರಾದೀತು.
– ಶ್ರೀಸಪ್ತಮಾತೃಕಾ ಪೂಜೆ, ಶುಭಸಂಖ್ಯೆ–5.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ವಾರ ಪೂರ್ತಿ ಹಣಕಾಸಿನ ತಾಪತ್ರಯಗಳು ಎದುರಾದರೂ ಸಮಯಕ್ಕೆ ಸರಿಯಾಗಿ ಧನ ಒದಗುತ್ತಾ ಹೋಗುತ್ತದೆ. ಮಾನಸಿಕ ಅಸ್ಥಿರತೆ ಕಾಡಿಸುವುದರಿಂದ ತಪ್ಪು ನಿರ್ಧಾರಗಳಿಂದ ನಿಮ್ಮ ಯೋಜನೆಗಳು ಸಫಲತೆಯನ್ನು ಕಾಣದು. ವಾರ ಮಧ್ಯೆ ಮನೆಗೆ ಅತಿಥಿ–ಅಭ್ಯಾಗತರ ಆಗಮನ. ಅವರ ಆಧಾರಾತಿಥ್ಯಕ್ಕೆ ಹಣ ಖರ್ಚು. ಭೂಮಿ, ಸೈಟು ವ್ಯವಹಾರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ. ಪಿತ್ತ ಸಂಬಂಧಿ ಕಾಯಿಲೆ ಕಾಡಿಸುತ್ತೆ.
– ಶ್ರೀಲಕ್ಷ್ಮೀನೃಸಿಂಹ ದರ್ಶನ, ಶುಭಸಂಖ್ಯೆ–4.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ಗುರು ದೃಷ್ಟಿಯ ಫಲವಾಗಿ ಪ್ರಭಾವಶಾಲಿ ವ್ಯಕ್ತಿಗಳ ಒಡನಾಟದಿಂದ ಬೃಹತ್ ವ್ಯವಹಾರಗಳಲ್ಲಿ ಮುನ್ನಡೆ. ಮಿತ್ರ ಸಹಾಯ ಹಸ್ತದಿಂದ ಸಂಪತ್ತು ಗಳಿಸುವ ಪ್ರಯತ್ನ. ವಾಹನ ಖರೀದಿಯ ಪ್ರಯತ್ನ ಫಲಿಸಲಿದೆ. ಮಠ–ಮಾನ್ಯಗಳ ಸಂದರ್ಶನ, ಆಧ್ಯಾತ್ಮ ಜ್ಞಾನದತ್ತ ಒಲವು. ಆಸ್ತಿ ಹಂಚಿಕೆಯಲ್ಲಿ ಸಹಮತ ಉಂಟಾಗಲಾರದು. ರಕ್ತ ಸಂಬಂಧಿ ದೋಷ ಹಾಗೂ ಅಗ್ನಿ ಅವಘಡಗಳಿಂದಲೂ ಎಚ್ಚರವಾಗಿರಿ.
– ಶ್ರೀಗುರು ಅಷ್ಟೋತ್ತರ ಪಠಿಸಿ, ಶುಭಸಂಖ್ಯೆ–9.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ವಾರದ ಆದಿಗೆ ನಿಮ್ಮ ಕಾರ್ಯ ಸಾಧನೆಗೆ ಇತರರನ್ನು ಅವಲಂಬಿಸಿದರೆ ಆಶಾಭಂಗವಾಗುವುದು ನಿಶ್ಚಿತ. ರಾಜಕೀಯ ಸಂಬಂಧಿ ವಿಷಯಗಳಲ್ಲಿ ಅನುಕೂಲಕರ ವಾತಾವರಣವಿದೆ. ಎನ್‌ಕ್ಯಾಷ್ ಮಾಡಿಕೊಳ್ಳಿ. ಪುತ್ರರ ವಿಷಯದಲ್ಲಿ ಗಡುಸುತನ ತೋರುವುದರಿಂದ ಮನಃಶಾಂತಿ ಕೆಡುವುದು. ಪಂಚಮಶನಿ ನಿಮ್ಮ ಖ್ಯಾತಿಗೆ ಕಳಂಕ ತರಬಹುದು. ವಾರಾಂತ್ಯಕ್ಕೆ ನೂತನ ವಸ್ತ್ರಾಭರಣ ಪ್ರಾಪ್ತಿ, ಪಿಕ್‌ನಿಕ್ ಮೂಡ್.
– ಶ್ರೀಜ್ವಾಲಮಾಲಿನಿ ದೇವಿದರ್ಶನ, ಶುಭಸಂಖ್ಯೆ–3.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ)
ವಾರದಾರಂಭಕ್ಕೆ ಶುಭ ಗುರು ನಿಮ್ಮ ಕಾರ್ಯಸಾಧನೆಗೆ ಪೂರಕ ಫಲವನ್ನು ನೀಡಲಿದ್ದಾನೆ. ಆದಾಯ ಚೆನ್ನಾಗಿರುತ್ತದೆ. ಈಗ ಉಳಿಸಿದ್ದು, ಮುಂದಿನ ಗಳಿಕೆ ಎಂದು ತಿಳಿದುಕೊಳ್ಳಿ. ನಿಮ್ಮ ಗುಪ್ತ ಅಪೇಕ್ಷೆಗಳು ಈಡೇರುವುದು. ಚತುರ್ಥ ಶನಿಯಿಂದಾಗಿ ಕಬ್ಬಿಣ, ಸಿಮೆಂಟ್ ವ್ಯಾಪಾರಿಗಳಿಗೆ ಕೈಗೆ ಬಂದ ತುತ್ತು ಬಾಯಿಗೆ ಇಲ್ಲದಂತಾಗುವುದು. ಮಿತ್ರರೆನಿಸಿದವರೆ ನಿಮ್ಮ ವಿರುದ್ಧ ಸಂಚು ಮಾಡುವರು. ವಾತ–ಶೀತ ಸಂಬಂಧಿ ಕಾಯಿಲೆ ಕಾಡಬಹುದು.
– ಶ್ರೀ ಗಣಪತಿ ಆರಾಧನೆ, ಶುಭಸಂಖ್ಯೆ–1.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಸಪ್ತಾಹದ ಆದಿಗೆ ಸುಖ ಸಾಧನಗಳು ಪಡೆದರೂ ಮಾನಸಿಕವಾಗಿ ತೊಳಲಾಡುವಿರಿ. ಏನು ಮಾಡಿದರೂ 'ಬೆಟ್ಟಕ್ಕೆ ಸೀರೆ ಉಡಿಸಿದಂತೆ' ಅನಿಸುವುದು. ಮಾತೃಶ್ರೀಯವರ ಸೇವೆ ಮಾಡಿ ಬಂದ ಕಷ್ಟ ತಾನೇ ತಾನಾಗಿ ನಿವಾರಣೆ ಆಗುವುದು. ವಾರ ಮಧ್ಯೆ ಉತ್ತಮ ಭೋಜನ ಸುಖ, ಹಾಸಿಗೆ ಸುಖ, ನೂತನ ವಸ್ತ್ರಾಭರಣ ಪ್ರಾಪ್ತಿ, ಪ್ರವಾಸೋದ್ಯಮ ಉದ್ಯಮದಾರರಿಗೆ ಗ್ರಾಹಕರಿಂದ ಧನಲಾಭ. ದೀನ ಜನರಿಗೆ ಸಹಾಯ ಮಾಡಿ.
–ಶ್ರೀಗುರುಸ್ತುತಿ, ಶುಭಸಂಖ್ಯೆ–5.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ಸಾಮಾಜಿಕ ಆಗುಹೋಗುಗಳನ್ನು ನೀವೆಣಿಸಿದಂತೆ ಸಾಗುತ್ತವೆ. ಆಕಸ್ಮಿಕ ಧನ ಪ್ರಾಪ್ತಿ ಆಗಬಹುದು. ಮನೆಯಲ್ಲಿ ಸರಸ–ವಿರಸಗಳು ಸಮನಾಗಿ ಸಾಗುತ್ತವೆ. ಗುರು–ಮಾರ್ಗದರ್ಶನ ದೊರೆತು ಪುಣ್ಯಕಾರ್ಯದಲ್ಲಿ ಭಾಗಿಯಾಗುವಿರಿ. ಬೇಡದ್ದಕ್ಕೆ ಹಣ ಅಪವ್ಯಯವಾಗುವುದು. ಮನೆಯಲ್ಲಿ ಹಿರಿಯರೊಬ್ಬರ ಆರೋಗ್ಯಕ್ಕೆ ಕುಂದುಂಟಾಗಬಹುದು. ಅನ್ಯ ಸ್ತ್ರೀಯರನ್ನು ಗೌರವದಿಂದ ಕಾಣಿ.
– ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ, ಶುಭಸಂಖ್ಯೆ–3.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಸಮಯ ಯಾವುದನ್ನೂ ಕಾಯದು, 'ಗಾಳಿ ಬಂದಾಗ ತೂರಿಕೋ' ಎಂಬ ನಾಣ್ಣುಡಿಯಂತೆ ನಿಂತುಹೋಗಿದ್ದ ಕೆಲಸ ಕಾರ್ಯಗಳು ಬೃಹಸ್ಪತಿಯ ಕೃಪೆಯಿಂದ ಸಫಲವಾಗಲಿದೆ. ವಾರಮಧ್ಯೆ ಉದ್ಯೋಗಾಕಾಂಕ್ಷಿಗಳಿಗೆ ಶುಭವಾರ್ತೆಯೊಂದು ಬಂದು ಪುಳಕಿತರಾಗುವಿರಿ. ವಿವಾಹ ಯೋಗ್ಯರಿಗೆ ಸೂಕ್ತ ವಧುವರರು ದೊರೆಯುವ ಸಂಭವವಿದೆ. ದೂರ ಪ್ರಯಾಣಗಳಿಗೂ ಸಿದ್ಧರಾಗಿರಿ. ಆಸ್ತಿ ಸಂಬಂಧಿ ವಿಷಯಗಳು ನಿಮ್ಮ ಪರವಾಗಲಿದೆ. – ಶ್ರೀ ಶಿವ ಪಂಚಾಕ್ಷರಿ ಜಪಿಸಿ, ಶುಭಸಂಖ್ಯೆ–9.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ಈ ವಾರದಲ್ಲಿ ಆದಾಯ–ವೆಚ್ಚಗಳು ಸಮನಾಗಿ ಸಾಗುವುದು. ಯಾವುದೇ ಮಹತ್ತರವಾದ ಯೋಜನೆಗಳನ್ನು ದೀರ್ಘವಾಗಿ ಪರಾಮರ್ಶಿಸಿ ಕೈಗೊಳ್ಳಿ. ಜನ್ಮಗುರು, ವ್ಯಯ ಶನಿಯ ಕಾರಣ ಅಹಿತಕರ ಸನ್ನಿವೇಶಗಳನ್ನು ಎದುರಿಸಬೇಕಾದೀತು. ಶತ್ರುಗಳು ನಿಮ್ಮ ಬೆನ್ನಿಗೇ ಇದ್ದಾರೆ ಎಂಬ ಅರಿವಿರಲಿ. ರಾತ್ರಿ ಪ್ರಯಾಣಗಳನ್ನು ಅವಾಯ್ಡ್ ಮಾಡಿ. ಕಳ್ಳಕಾಕರಿಂದ ಜಾಗೃತರಾಗಿರಿ.
– ಎಳ್ಳೆಣ್ಣೆ ದಾನ ಮಾಡಿ, ಶುಭಸಂಖ್ಯೆ–2.

10 ದಿನಗಳ ಕಾರ್ಯಕ್ರಮ ಪಟ್ಟಿ

ಮೈಸೂರಿನ ಅವಧೂತ ದತ್ತ ಪೀಠದ ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ವರ್ಧಂತಿ ಉತ್ಸವವು ಮೇ22ರಿಂದ 31ರವರೆಗೆ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ನೆರವೇರಲಿದೆ.

ಮೇ 22ರಂದು ಭಾನುವಾರ ಬೆಳಗ್ಗೆ 9 ಗಂಟೆಗೆ ಶ್ರೀ ಚಕ್ರಪೂಜೆ ಮತ್ತು ಮಹಾಗಣಪತಿ ಹೋಮದೊಂದಿಗೆ ಕಾರ್ಯಕ್ರಮ ಆರಂಭವಾಗಲಿದೆ ಬೆಳಗ್ಗೆ 9.45ಕ್ಕೆ ಆಶ್ರಮದ ಮುಖ್ಯದ್ವಾರದಲ್ಲಿ ನಿರ್ಮಿಸಿರುವ 'ಹನುಮದ್ವಾರ'ದ ಉದ್ಘಾಟನೆಯಾಗಲಿದೆ ನಂತರ ಬೆಳಗ್ಗೆ 10 ಗಂಟೆಗೆ ನವೀಕೃತಗೊಂಡಿರುವ ನಾದಮಂಟಪ ಉದ್ಘಾಟನೆಯೊಂದಿಗೆ ಸ್ವಾಮೀಜಿ ಅವರ 80ನೇ ವರ್ಧಂತಿ ಉತ್ಸವಕ್ಕೆ ಚಾಲನೆ ದೊರೆಯಲಿದೆ

ಹೈದರಾಬಾದ್‌ನ ಶ್ರೀ ತ್ರಿದಂಡಿ ಚಿನ್ನ ಶ್ರೀಮನ್ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ ಅವರು ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸುವರು. ಅತಿಥಿಗಳಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸಂಸದ ಪ್ರತಾಪ್‌ಸಿಂಹ, ಶಾಸಕ ಎಸ್.ಎ.ರಾಮ್‌ದಾಸ್ ಉಪಸ್ಥಿತರಿರುವರು. ಅಂದು ಸಂಜೆ ಸಂಗೀತ ಕಾರ್ಯಕ್ರಮವಿರುತ್ತದೆ.

ಮೇ 23ರಂದು ಸೋಮವಾರ ಬೆಳಗ್ಗೆ 9ಗಂಟೆಗೆ ಶ್ರೀಚಕ್ರಪೂಜೆ ಮತ್ತು ರುದ್ರಹೋಮ ನಡೆಯಲಿದೆ. 10 ಗಂಟೆಗೆ ಚೈತನ್ಯಾರ್ಚನೆ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರಿಗೆ ಸನ್ಮಾನ ನಡೆಯಲಿದೆ 11 ಗಂಟೆಗೆ ನಡೆಯುವ ಕಾರ್ಯಕ್ರಮದ ಸಾನ್ನಿಧ್ಯವನ್ನು ಭೀಮನಕಟ್ಟೆ ಮಠದ ಶ್ರೀರಘುವರೇಂದ್ರ ತೀರ್ಥ ಶ್ರೀಪಾದರು, ಮತ್ತು ಕೂಡಲಿ ಶೃಂಗೇರಿ ಮಠದ ಶ್ರೀವಿದ್ಯಾಭಿನವ ವಿದ್ಯಾರಣ್ಯ ಭಾರತಿ ಸ್ವಾಮೀಜಿ ವಹಿಸುವರು. ಸಂಜೆ 6.30ಕ್ಕೆ 'ಲಯತರಂಗ' ವಿದ್ವಾನ್ ಪ್ರಕಾಶ್ ನೇತೃತ್ವದಲ್ಲಿ ಭಜನಾ ಕಾರ್ಯಕ್ರಮ ನಡೆಯಲಿದೆ.

ಮೇ 24ರಂದು ಮಂಗಳವಾರ ಬೆಳಗ್ಗೆ 9ಗಂಟೆಗೆ ಶ್ರೀಚಕ್ರಪೂಜೆ ಮತ್ತು ದೇವಿ ಹೋಮ ನಡೆಯಲಿದೆ. 10 ಗಂಟೆಗೆ ಚೈತನ್ಯಾರ್ಚನೆ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರಿಗೆ ಸನ್ಮಾನ ನಡೆಯಲಿದೆ 11 ಗಂಟೆಗೆ ನಡೆಯುವ ಕಾರ್ಯಕ್ರಮದ ಸಾನ್ನಿಧ್ಯ ವನ್ನು ಪೇಜಾವರ ಮಠದ ಶ್ರೀವಿಶ್ವ ಪ್ರಸನ್ನತೀರ್ಥ ಸ್ವಾಮೀಜಿ, ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥ ಸ್ವಾಮೀಜಿ ಮತ್ತು ಕುಕ್ಕೆ ಸುಬ್ರಹ್ಮಣ್ಯ ಮಠದ ಶ್ರೀವಿದ್ಯಾ ಪ್ರಸನ್ನ ತೀರ್ಥ ಸ್ವಾಮೀಜಿ ವಹಿಸುವರು. ಅದಮಾರು ಮಠದ ಕಿರಿಯ ಶ್ರೀಗಳಾದ ಶ್ರೀಈಶ ಪ್ರಿಯ ತೀರ್ಥ ಸ್ವಾಮೀಜಿ ಸಂದರ್ಶಕರಾಗಿರುವರು. ಸಂಜೆ 6.30ಕ್ಕೆ ನಡೆಯುವ ಸಂಗೀತ ಕಾರ್ಯಕ್ರಮದಲ್ಲಿ ಪಂಡಿತ್ ನೀಲಾದ್ರಿ ಕುಮಾರ್‌ರಿಂದ ಸಿತಾರ್ ವಾದನ, ಪಂಡಿತ್ ಅನಿಂದೋ ಚಟರ್ಜಿ ಅವರ ತಬಲಾ ಕಾರ್ಯಕ್ರಮವಿರುತ್ತದೆ

ಮೇ 25ರಂದು ಬುಧವಾರ ಬೆಳಗ್ಗೆ 8 ಗಂಟೆಗೆ ಹನುಮ ಜಯಂತಿ ಅಂಗವಾಗಿ ಆಶ್ರಮದ ಕಾರ್ಯಸಿದ್ಧಿ ಆಂಜನೇಯ ಸ್ವಾಮಿ ಸನ್ನಿಧಿಯಲ್ಲಿ ಶ್ರೀಚಕ್ರಪೂಜೆ ಮತ್ತು ಹನುಮ ಹೋಮ ನಡೆಯಲಿದೆ. ಬೆಳಗ್ಗೆ 10 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಗಣ್ಯರಿಗೆ ಸನ್ಮಾನ ನಡೆಯಲಿದೆ. ಸಂಜೆ 6.30ಕ್ಕೆ ವಿದುಷಿ ಕೌಶಿಕಿ ಚಕ್ರವರ್ತಿ ಅವರಿಂದ ಸಂಗೀತ ಕಾರ್ಯಕ್ರಮವಿರುತ್ತದೆ

ಮೇ 26ರಂದು ಗುರುವಾರ ಅವಧೂತ ದತ್ತ ಪೀಠದ ಜಗದ್ಗುರು ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 80ನೇ ವರ್ಧಂತ್ಯೋತ್ಸವ. ಬೆಳಗ್ಗೆ 9ಗಂಟೆಗೆ ಚಕ್ರಪೂಜೆ ಮತ್ತು ಆಯುಷ್ಯ ಹೋಮ ನಡೆಯಲಿದೆ. 10ಗಂಟೆಗೆ ಸ್ವಾಮೀಜಿ ಅವರ ಪ್ರತ್ಯಕ್ಷ ಪಾದ ಪೂಜೆಯನ್ನು ಅವಧೂತ ದತ್ತಪೀಠದ ಉತ್ತರಾಧಿಕಾರಿ ಶ್ರೀದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ನೆರವೇರಿಸುವರು. ಈ ವೇಳೆ ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು ಭಗವದ್ಗೀತೆಗೆ ಬರೆದಿರುವ ಸವಿಸ್ತಾರ ವ್ಯಾಖ್ಯಾನವಾದ 'ಗೀತಾ ಸ್ವರ ಪ್ರಸ್ತಾರ' ಗ್ರಂಥ ಭಗವದ್ಗೀತೆಯ ಸರಳಾನುವಾದ 'ಶ್ರೀಮದ್ಭಗವದ್ಗೀತೆ' ಗ್ರಂಥ ಹಾಗೂ ಸ್ವಾಮೀಜಿ ಅವರ 80 ಭಜನೆಗಳ ಸಂಪುಟ ಬಿಡುಗಡೆಯಾಗಲಿದೆ. 11ಗಂಟೆಗೆ ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು 80ನೇ ಜನ್ಮದಿನದ ಅನುಗ್ರಹ ಸಂದೇಶ ನೀಡಲಿದ್ದಾರೆ. ಸಂಜೆ 6.30ಕ್ಕೆ ಆಶ್ರಮದ ಭಕ್ತಾದಿಗಳಿಂದ ಸಾಮೂಹಿಕ ಗುರು ಗೀತಾಪಾರಾಯಣ ಮತ್ತು ನೀತೀಶ್ ಭಾರತಿ ಅವರಿಂದ 'ಸೈಕತ್' ಚಿತ್ರಕಲಾ ಪ್ರದರ್ಶನವಿರುತ್ತದೆ.

ಮೇ 27ರಂದು ಶುಕ್ರವಾರ ಬೆಳಗ್ಗೆ 9ಗಂಟೆಗೆ ಶ್ರೀಚಕ್ರಪೂಜೆ ಮತ್ತು ದತ್ತಾತ್ರೇಯ ಹೋಮ ನಡೆಯಲಿದೆ. 10ಗಂಟೆಗೆ ನಡೆಯುವ ಚೈತನ್ಯಾರ್ಚನೆ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಗಣ್ಯರಿಗೆ ಸನ್ಮಾನ ನಡೆಯಲಿದೆ 11 ಗಂಟೆಗೆ ನಡೆಯುವ ಕಾರ್ಯಕ್ರಮದ ಸಾನ್ನಿಧ್ಯವನ್ನು ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮೈಸೂರು ರಾಮಕೃಷ್ಣಮಠದ ಶೀಮುಕ್ತಿದಾನಂದ ಸ್ವಾಮೀಜಿ, ಎಡ ನೀರು ಮಠದ ಸಚ್ಚಿದಾನಂದ ಭಾರತಿ ಸ್ವಾಮೀಜಿ ಮತ್ತು ಶ್ವಾಸ ಗುರು ಹರಿಹರ ಪಂಚಮಸಾಲಿ ಮಠದ ವಚನಾನಂದ ಸ್ವಾಮೀಜಿ ವಹಿಸುವರು. ಪಲಿಮಾರು ಮಠದ ಹಿರಿಯ ಶ್ರೀಗಳಾದ ವಿದ್ಯಾಧೀಶ ತೀರ್ಥ ಸ್ವಾಮೀಜಿ, ಕಿರಿಯ ಶ್ರೀಗಳಾದ ವಿದ್ಯಾರಾಜೇಶ್ವರ ತೀರ್ಥ ಸ್ವಾಮೀಜಿ ಉಪಸ್ಥಿತರಿರುವರು. ಸಂಜೆ 6.30ಕ್ಕೆ ವಿದ್ವಾನ್ ರಾಜೇಶ್ ವೈದ್ಯರಿಂದ ವೀಣಾವಾದನ ಕಾರ್ಯಕ್ರಮವಿರುತ್ತದೆ.

ಮೇ 28ರಂದು ಶನಿವಾರ ಬೆಳಗ್ಗೆ 8ಗಂಟೆಗೆ 'ಶ್ರೀದತ್ತ ಹ್ಯೂಮನ್ ಸರ್ವಿಸ್(ಎಸ್‌ಡಿಹೆಚ್‌ಎಸ್)' ಸ್ವಯಂ ಸೇವಕರಿಂದ ಪಥ ಸಂಚಲನ ನಡೆಯಲಿದೆ. ಬೆಳಗ್ಗೆ 9ಗಂಟೆಗೆ ಶ್ರೀಚಕ್ರಪೂಜೆ, ಸುದರ್ಶನ ಹೋಮ ನಡೆಯಲಿದೆ. 10ಗಂಟೆಗೆ ಅಂತಾರಾಷ್ಟ್ರೀಯ ದತ್ತ ಜ್ಞಾನಬೋಧ ಸಭಾ ಸಮ್ಮೇಳನ ನಡೆಯಲಿದ್ದು, ಸಾನ್ನಿಧ್ಯವನ್ನು ಸೋದೆ ವಾದಿರಾಜ ಮಠದ ಶ್ರೀ ವಿದ್ಯಾವಲ್ಲಭ ತೀರ್ಥ ಸ್ವಾಮೀಜಿ ವಹಿಸುವರು. ಮಧ್ಯಾಹ್ನ 2 ಗಂಟೆಗೆ ವಾರ್ಷಿಕ ಭಜನಾ ಸ್ಪರ್ಧೆ ನಡೆಯಲಿದೆ. ಸಂಜೆ 6.30ಕ್ಕೆ ನಡೆಯುವ ಯುವ ಸಂಗೀತ ಕಾರ್ಯಕ್ರಮದಲ್ಲಿ ವಿದ್ವಾನ್ ವಿಶ್ವ ಮೋಹನ ಭಟ್ ಅವರಿಂದ 'ನಾದ ಸಂಗಮ' ಕಾರ್ಯಕ್ರಮವಿರುತ್ತದೆ.

ಮೇ 29ರಂದು ಭಾನುವಾರ ಬೆಳಗ್ಗೆ 9ಗಂಟೆಗೆ ಶ್ರೀಚಕ್ರಪೂಜೆ ಮತ್ತು ಮಹಾಸೌರ ಹೋಮ ನೆರವೇರಲಿದೆ. 10ಗಂಟೆಗೆ ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ ಪಾದಪೂಜೆ ಹಾಗೂ ಭಕ್ತಾದಿಗಳಿಗೆ ಪಾದುಕಾ ಪ್ರದರ್ಶನವಿರುತ್ತದೆ ಸಂಜೆ 6.30ಕ್ಕೆ ಬೆಂಗಳೂರಿನ ಅಭಿನವ ನೃತ್ಯ ಶಾಲೆಯ ನಿರುಪಮಾ ರಾಜೇಂದ್ರ ಅವರಿಂದ 'ರಾಮಕಥಾ ವಿಸ್ಮಯ ಮತ್ತು ಶುಕ ಸ್ವರಾಂಜಲಿ' ನೃತ್ಯ ರೂಪಕವಿರುತ್ತದೆ.

ಮೇ 30ರಂದು ಸೋಮವಾರ ಬೆಳಗ್ಗೆ 9ಗಂಟೆಗೆ ಶ್ರೀಚಕ್ರಪೂಜೆ ಮತ್ತು ನಾರಾಯಣ ಹೋಮ ನಡೆಯಲಿದೆ 10 ಗಂಟೆಗೆ ನಡೆಯಲಿರುವ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಮಂತ್ರಾಲಯ ಮಠದ ಶ್ರೀಸುಬುದೇಂದ್ರ ತೀರ್ಥ ಸ್ವಾಮೀಜಿ, ವಿಶಾಖಪಟ್ಟಣದ ಶ್ರೀಸ್ವರೂಪಾನಂದೇಂದ್ರ ಸರಸ್ವತಿ ಸ್ವಾಮೀಜಿ ಮತ್ತು ಪೂನಾದ ಮಹರ್ಷಿ ವೇದವ್ಯಾಸ ಪ್ರತಿಷ್ಠಾನದ ಶ್ರೀ ಗೋವಿಂದ ದೇವ್ ಗಿರಿ ಸ್ವಾಮೀಜಿ ವಹಿಸುವರು. ಅತಿಥಿಗಳಾಗಿ ಉತ್ತರ ಪ್ರದೇಶದ ರಾಜ್ಯಪಾಲರಾದ ಆನಂದಿ ಬೆನ್ ಪಟೇಲ್ ಭಾಗವಹಿಸುವರು. ಸಂಜೆ 6.30ಕ್ಕೆ ನಡೆಯುವ ಚೈತನ್ಯಾರ್ಚನೆ ಕಾರ್ಯಕ್ರಮದಲ್ಲಿ 'ಮಾತಾ ಜಯಲಕ್ಷ್ಮೀ' ಪುರಸ್ಕಾರ ಮತ್ತು 'ದತ್ತಪೀಠ ಬಂಧು' ಪ್ರಶಸ್ತಿಯನ್ನು ವಿವಿಧ ಕ್ಷೇತ್ರದ ಸಾಧಕರಿಗೆ ಪ್ರದಾನ ಮಾಡಲಾಗುವುದು.

ಮೇ 31ರಂದು ಮಂಗಳವಾರ ಬೆಳಗ್ಗೆ 9ಗಂಟೆಗೆ ಶ್ರೀಚಕ್ರ ಪೂಜೆ ಮತ್ತು ಶಾಂತಿ ಪೌಷ್ಟಿಕ ಹೋಮ ನೆರವೇರಲಿದೆ. 11ಗಂಟೆಗೆ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 80ನೇ ವರ್ಧಂತಿ ಉತ್ಸವದ 10ನೇ ದಿನ ಸಮಾರೋಪ ಸಮಾರಂಭ ನಡೆಯಲಿದೆ ಅತಿಥಿಗಳಾಗಿ ಹರಿಯಾಣ ರಾಜ್ಯಪಾಲರಾದ ಬಂಡಾರು ದತ್ತಾತ್ರೇಯ ಭಾಗವಹಿಸುವರು. ಈ ಸಂದರ್ಭದಲ್ಲಿ ನಡೆಯಲಿರುವ ಚೈತನ್ಯಾರ್ಚನೆ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರಿಗೆ ಸನ್ಮಾನ ಕಾರ್ಯಕ್ರಮ ಸಂಜೆ 6.30ಕ್ಕೆ 108 ಪಂಡಿತರಿಂದ 'ರುದ್ರಪಾರಾಯಣ' ನಡೆಯಲಿದೆ.

ಇದಲ್ಲದೇ ಜೂ.4ರಿಂದ 14ರವರೆಗೆ ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ ಸಮ್ಮುಖದಲ್ಲಿ 'ಲಕ್ಷ ಶ್ರೀಸೂಕ್ತ ಮಹಾಯಾಗ' ಮತ್ತು 'ಕೋಟಿ ದತ್ತಹೋಮ' ನಡೆಯಲಿದೆ. ಜೂ.5ರಿಂದ 10ರವರೆಗೆ ಆಶ್ರಮದ ಶ್ರೀದತ್ತ ವೆಂಕಟೇಶ್ವರ ದೇವಾಲಯ ಕ್ಷೇತ್ರದ 23ನೇ ಬ್ರಹ್ಮೋತ್ಸವ ನಡೆಯಲಿದೆ ಜೂ. 10ರಂದು ಜೇಷ್ಠ ಶುದ್ಧ ಏಕಾದಶಿ ದಿನವಾದ ಅಂದು ಚಾಂದ್ರಮಾನ ಪಂಚಾಂಗದ ಪ್ರಕಾರ ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ ಜನ್ಮದಿನ ಬೆಳಗ್ಗೆ 9 ಗಂಟೆಗೆ ಶ್ರೀಚಕ್ರಪೂಜೆ ಮತ್ತು ಶಾಂತಿ ಹೋಮ ನೆರವೇರಲಿದೆ. 10ಗಂಟೆಗೆ ಆಯುಷ್ಯ ಹೋಮ, ಪೂರ್ಣಾಹುತಿ ನೆರವೇರಲಿದೆ. ಸಂಜೆ 6ಗಂಟೆಗೆ ಸ್ವಾಮೀಜಿ ಅವರ ಪ್ರತ್ಯಕ್ಷ ಪಾದಪೂಜೆ ನಂತರ ಅವರ 80ನೇ ವರ್ಧಂತಿ ಅಂಗವಾಗಿ 365ದಿನವೂ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು.

ವರುಣಾ, ತಿ.ನರಸೀಪುರದಲ್ಲಿ ಮೈ.ವಿ.ರವಿಶಂಕರ್ ಪರ ಪ್ರಚಾರ

ತಿ.ನರಸೀಪುರ, ಮೇ 21(ಎಸ್‌ಕೆ)– ದಕ್ಷಿಣ ಪದವೀಧರರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ವರುಣಾ ಹಾಗೂ ತಿ.ನರಸೀಪುರ ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರಚಾರ ನಡೆಸಲಾಯಿತು.

ವರುಣಾ: ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆ ಮುಂಬರುವ ವಿಧಾನಸಭಾ ಚುನಾವಣೆಗೆ ದಿಕ್ಸೂಚಿಯಾಗಿರುವುದರಿಂದ ಕಾರ್ಯಕರ್ತರು ಪಕ್ಷದ ಅಭ್ಯರ್ಥಿ ಗೆಲುವಿಗೆ ಶ್ರಮಿಸುವಂತೆ ವರುಣಾ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಕಲ್ಮಳ್ಳಿ ಕೆ.ಬಿ.ವಿಜಯಕುಮಾರ್ ಕರೆ ನೀಡಿದರು.

ವರುಣಾ ವಿಧಾನಸಭಾ ಕ್ಷೇತ್ರದ ತಾಂಡವಪುರ ಜಿಪಂ ವ್ಯಾಪ್ತಿಯ ತಾಂಡವಪುರ, ಹುಳಿಮಾವು, ಮರಳೂರು, ಗೊದ್ದನಪುರ, ಕೆಂಪಿಸಿದ್ದನಹುಂಡಿ, ರಾಂಪುರ ಗ್ರಾಪಂಗಳಲ್ಲಿ ಪದವೀಧರ ಮತದಾರರನ್ನು ಭೇಟಿಯಾಗಿ ಪಕ್ಷದ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಮತಯಾಚಿಸಿ ಮಾತನಾಡಿದರು.

ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಗೆಲುವು ನಿಶ್ಚಿತವಾಗಿದ್ದು, ರಾಜ್ಯ ಮತ್ತು ಕೇಂದ್ರ ಸರ್ಕಾರದ ಜನಪರ ಯೋಜನೆಗಳನ್ನು ಪ್ರತಿ ಮತದಾರನಿಗೆ ತಲುಪಿಸಿ ಅವರ ಮನವೊಲಿಸಿ ಮತಯಾಚಿಸುವ ಕೆಲಸ ಮಾಡಬೇಕಿದೆ ಎಂದರು.

ಪ್ರಧಾನ ಕಾರ್ಯದರ್ಶಿ ಎ.ಎನ್.ರಂಗೂನಾಯಕ ಮಾತನಾಡಿ, ಕಳೆದ ಪದವೀಧರರ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಮೈ.ವಿ.ರವಿಶಂಕರ್ 160 ಮತಗಳ ಅಂತರದಿಂದ ಪರಾಭವಗೊಂಡಿದ್ದರು. ಈ ಬಾರಿ ಹೆಚ್ಚಿನ ಮತಗಳ ಅಂತರದಿಂದ ಗೆಲ್ಲಿಸಲು ಶ್ರಮಿಸುವಂತೆ ಕಾರ್ಯಕರ್ತರಿಗೆ ಮನವಿ ಮಾಡಿದರು.

ಈ ವೇಳೆ ಹಿಂದುಳಿದ ವರ್ಗಗಳ ಮಾಜಿ ಜಿಲ್ಲಾಧ್ಯಕ್ಷ ವೆಂಕಟರಮಣಶೆಟ್ಟಿ, ಸಂದೀಪ, ರಾಂಪುರ ನಾಗರಾಜು, ನಂದೀಶ್, ಚಿಕ್ಕಯ್ಯನಛತ್ರ ಚಂದ್ರು, ಹುಳಿಮಾವು ಶಿವು, ಸಂಚಾಲಕರಾದ ಲಲಿತಾದ್ರಿಪುರ ಮಹದೇವ, ಪ್ರಧಾನ ಕಾರ್ಯದರ್ಶಿಗಳಾದ ವರುಣಾ ಮಂಜುನಾಥ್, ನಗರ್ಲೆ ಮಹೇಶ, ಬಸವನಪುರ ದಿಲೀಪ, ಗೊದ್ದನಪುರ ಮಹದೇವ ಹಾಗೂ ನಮ್ಮ ಬಿಜೆಪಿ ಪಕ್ಷದ ಮುಖಂಡರು ಕಾರ್ಯಕರ್ತರು ಹಾಜರಿದ್ದರು.

ತಿ.ನರಸೀಪುರ: ಕಾಂಗ್ರೆಸ್ ಹಾಗೂ ಜೆಡಿಎಸ್‌ನವರು ಅಧಿಕಾರದಲ್ಲಿದ್ದಾಗ ರೈತರ ಸಾಲಮನ್ನಾ ಮಾಡುವುದಾಗಿ ಘೋಷಣೆ ಮಾಡಿದ್ದರು. ಆದರೆ ರೈತರ ಸಾಲಮನ್ನಾ ಮಾಡಿದ್ದು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಎಂಬುದನ್ನು ಜನತೆಗೆ ಮನದಟ್ಟು ಮಾಡಿಕೊಡುವ ಮೂಲಕ ಪದವೀಧರ ಮತದಾರರ ಮನವೊಲಿಸಿ, ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್‌ರನ್ನು ಗೆಲ್ಲಿಸಬೇಕೆಂದು ಜಿಲ್ಲಾ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಬೆನಕನಹಳ್ಳಿ ವಿಜಯಕುಮಾರ್ ಮನವಿ ಮಾಡಿದರು.

ಪಟ್ಟಣ ಪೊಲೀಸ್ ಠಾಣೆಯಲ್ಲಿ ಸಿಪಿಐ ಕೃಷ್ಣಪ್ಪನವರ ಬಳಿ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಮತಯಾಚಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಂಸದ ವಿ.ಶ್ರೀನಿವಾಸ ಪ್ರಸಾದ್ ಮಾರ್ಗದರ್ಶನದಲ್ಲಿ ಚುನಾವಣೆ ಎದುರಿಸುವ ಮೂಲಕ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಗೆಲುವಿಗೆ ರಣತಂತ್ರ ರೂಪಿಸಬೇಕು. ಇದಕ್ಕೆ ಬಿಜೆಪಿ ಕಾರ್ಯಕರ್ತರು ಒಗ್ಗೂಡಿ ಶ್ರಮಿಸಬೇಕು ಎಂದರು. ಈ ವೇಳೆ ಬಿಜೆಪಿ ಹಿರಿಯ ರಾಜ್ಯ ಕಾರ್ಯಕಾರಣಿ ಸದಸ್ಯ ಕರೋಹಟ್ಟಿ ಮಹ ದೇವಯ್ಯ, ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಕಿರಗಸೂರು ಗ್ರಾಪಂ ಸದಸ್ಯರಾದ ಮಹದೇವಸ್ವಾಮಿ, ಶಿವು, ಕುರುಬೂರು ಮಂಜುನಾಥ್ ಉಪಸ್ಥಿತರಿದ್ದರು.





ದಕ್ಷಿಣ ಪದವೀಧರರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ವರುಣಾ ಹಾಗೂ ತಿ.ನರಸೀಪುರ ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರಚಾರ ನಡೆಸಲಾಯಿತು.

ನೇರಳೆ–ಹಂಪಾಪುರದಲ್ಲಿ ನಾಳೆ ಶ್ರೀಕಾರ್ನಾಡ್ ಮಾಲಮ್ಮ ದೇವಸ್ಥಾನ ಉದ್ಘಾಟನೆ

ನಂಜನಗೂಡು, ಮೇ 21– ನಂಜನಗೂಡು ತಾಲೂಕು, ದೊಡ್ಡ ಕವಲಂದೆ ಹೋಬಳಿ ನೇರಳೆ– ಹಂಪಾಪುರ ಗ್ರಾಮದಲ್ಲಿ ಸಂಪೂರ್ಣವಾಗಿ ಜೀರ್ಣೋದ್ಧಾರ ಗೊಂಡಿರುವ ಶ್ರೀ ಕಾರ್ನಾಡ್ ಮಾಲಮ್ಮ ದೇವಸ್ಥಾನದ ಉದ್ಘಾಟನೆ ಮತ್ತು ಕಳಶ ಪ್ರತಿಷ್ಠಾಪನೆ ಕಾರ್ಯಕ್ರಮ ಮೇ 23 ರಂದು ನಡೆಯಲಿದೆ.



ಅಂದು ಬೆಳಗ್ಗೆ 6.20 ರಿಂದ 7.20ರೊಳಗೆ ಸಲ್ಲುವ ಶುಭ ವೃಷಭ ಲಗ್ನದಲ್ಲಿ ಕುಂಭಾಭಿಷೇಕ, ಮಹಾಮಂಗಳಾರತಿಯೊಂದಿಗೆ ಸಂಪೂರ್ಣವಾಗಿ ಜೀರ್ಣೋದ್ಧಾರಗೊಂಡ ಶ್ರೀ ಕಾರ್ನಾಡ್ ಮಾಲಮ್ಮ ದೇವಸ್ಥಾನವನ್ನು ಉದ್ಘಾಟಿಸಲಾಗುವುದು. ಹಂಪಾಪುರದಲ್ಲಿ ನೆಲೆಸಿರುವ ಶ್ರೀ ಬೇಗೂರು ಮಾಲರಸಮ್ಮ, ಶ್ರೀ ಚಿಕ್ಕ ಮಾಲರಸಮ್ಮ, ಶ್ರೀ ಕಾರ್ನಾಡು ಮಾಲಮ್ಮ ಶ್ರೀ ಹೊಳೆ ಮಸಣಮ್ಮ, ಶ್ರೀ ಪವಾಡ ಮಾಲಾರಸಮ್ಮ ಮತ್ತು ಶ್ರೀ ಸಿದ್ದರಾಮೇಶ್ವರ ಹಾಗೂ ಚಿಕ್ಕಮ್ಮ ಚಿಕ್ಕದೇವಿಯವರ ಪೂಜೆ ಮತ್ತು ಉತ್ಸವ ಮೆರವಣಿಗೆಯನ್ನು ಏರ್ಪಡಿಸಲಾಗಿದೆ. ನಂತರ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ಮಾಡಲಾಗುವುದು. ಇದಕ್ಕೂ ಮುನ್ನ, ಮೇ 21ರಂದು ಸಂಜೆ 7 ಗಂಟೆಗೆ ಗಂಗಾಪೂಜೆ, ಯಾಗಶಾಲಾ ಪ್ರವೇಶ, ಗಣಪತಿ ಹೋಮ ಇತ್ಯಾದಿ ಧಾರ್ಮಿಕ ಪೂಜಾ ಕಾರ್ಯಕ್ರಮಗಳು ನಡೆದವು. ಮೇ 22 ರಂದು ಬೆಳಗ್ಗೆ ಪುಣ್ಯಾಹ, ಕುಂಭಾವಾಹನ, ಅಷ್ಟದಿಕ್ಪಾಲಕರ ಹೋಮ, ಅಷ್ಟಬಂಧನ, ಬಲಿಹರಣ ಕಾರ್ಯಕ್ರಮಗಳು ಜರುಗಲಿವೆ.

ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಗೆಲುವು ನಿಶ್ಚಿತ



ದೇವನೂರು, ಮೇ 21(ಮೋಹನ್)– ದಕ್ಷಿಣ ಪದವೀಧರರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಗೆಲುವು ನಿಶ್ಚಿತ ಎಂದು ಶಾಸಕ ಬಿ.ಹರ್ಷವರ್ಧನ್ ವಿಶ್ವಾಸ ವ್ಯಕ್ತಪಡಿಸಿದರು. ತಾಲೂಕಿನ ದೇವನೂರು, ನೇರಳೆ, ಕೌಲಂದೆ ಗ್ರಾಪಂಗಳಲ್ಲಿ ಮೈ.ವಿ.ರವಿ ಶಂಕರ್ ಪರ ಪ್ರಚಾರ ನಡೆಸಿ ಮಾತನಾಡಿದ ಅವರು, ದೇಶದಲ್ಲಿ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಹಲವು ಜನಪರ ಯೋಜನೆಗಳನ್ನು ಜಾರಿಗೊಳಿಸಿದೆ. ಕಿಸಾನ್ ಸಮ್ಮಾನ್ ಯೋಜನೆ ರೈತರಿಗೆ ನೆರವಾಗಿದೆ. ಜೊತೆಗೆ ರಾಜ್ಯ ಸರ್ಕಾರ ಕೂಡ ಬಡವರ ಪರ ಯೋಜನೆ ಜಾರಿಗೊಳಿಸಿ ಅಭಿವೃದ್ಧಿ ಪಥದತ್ತ ಸಾಗಿದೆ. ಕ್ಷೇತ್ರದಲ್ಲಿ ನಾನು ಮಾಡಿರುವ ಕೆಲಸಗಳನ್ನು ನೋಡಿ ನನ್ನ ಕೆಲಸಕ್ಕೆ ಕೂಲಿ ಕೊಡಿ ಎಂದು ಮತದಾರರಲ್ಲಿ ಪ್ರಾರ್ಥಿಸುತ್ತೇನೆ ಎಂದರು.

ಈ ಚುನಾವಣೆ ನಮಗೆ ಪ್ರತಿಷ್ಠೆಯಾಗಿದ್ದು ಮುಂದಿನ ಚುನಾವಣೆಗೆ ಯಾವ ರೀತಿ ಪಕ್ಷ ಸಂಘಟನೆಗೊಂಡಿದೆ ಎಂಬುದನ್ನು ತೋರಿಸುತ್ತದೆ. ಆದ್ದರಿಂದ ಕಾರ್ಯಕರ್ತರ ನಡುವೆ ಯಾವುದೇ ಭಿನ್ನಾಭಿಪ್ರಾಯವಿದ್ದರೂ ಸಹ ಬದಿಗೊತ್ತಿ ಪಕ್ಷದ ಅಭ್ಯರ್ಥಿ ಪರ ಕೆಲಸ ಮಾಡಿ ಅವರ ಗೆಲುವಿಗೆ ಕೈ ಜೋಡಿಸಬೇಕೆಂದು ಮನವಿ ಮಾಡಿದರು.

ಈ ವೇಳೆ ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್, ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗ ನಾಯಕ, ಸಿದ್ದರಾಜು, ತಾಪಂ ಮಾಜಿ ಸದಸ್ಯ ಶಿವಣ್ಣ, ಗಜೇಂದ್ರ, ರಂಗನಾಥ್, ಗೋಪಾಲ ನಾಯಕ, ಅವಿನಾಶ್, ಬಸಪ್ಪ, ಚಂದ್ರು, ಗುರುಸ್ವಾಮಿ, ಶಾಂತಮೂರ್ತಿ, ಸೇರಿದಂತೆ ಹಲವರಿದ್ದರು.



ಶುಶ್ರೂಷಕರ ದಿನಾಚರಣೆ ಅಂಗವಾಗಿ ಹೆಚ್.ಡಿ.ಕೋಟೆ ರೋಟರಿ ಕ್ಲಬ್‌ನಿಂದ ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶುಶ್ರೂಷಕರಾದ ಪ್ರಶಾಂತ್ ಕುಮಾರ್ ಗಂಗೊಳ್ಳಿ, ಪರಮೇಶ್, ಅಂಬಿಕಾ, ಪರಿಮಳ, ಪದ್ಮಾವತಿ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಮೈಸೂರು ರೋಟರಿ ಕ್ಲಬ್‌ನ ಡಿ.ಜಿ.ರವೀಂದ್ರ ಭಟ್, ಎ.ಜೆ.ರವಿಶಂಕರ್, ಉದಯ್ ಕುಮಾರ್, ತಾಲೂಕು ರೋಟರಿ ಕ್ಲಬ್ ಅಧ್ಯಕ್ಷ ಮಹೇಶ್ ನಾರಾಯಣ್ ಲಾಲ್, ಡಾ.ಮುರುಗೇಶ್, ಶಿವಣ್ಣ, ನಿರಂಜನ್, ಪುಟ್ಟರಾಜು, ಎನ್.ಎಸ್.ಕೃಷ್ಣ ಇದ್ದರು.

ಸಣ್ಣಪ್ಪ ನಿಧನ

ಹನಗೋಡು, ಮೇ 21(ಮಹೇಶ್)– ಇಲ್ಲಿಗೆ ಸಮೀಪದ ಭರತವಾಡಿ ನಿವಾಸಿ ಹಾಗೂ ದೊಡ್ಡಹೆಜ್ಜೂರು ಗ್ರಾಪಂ ಮಾಜಿ ಅಧ್ಯಕ್ಷ ಸಣ್ಣಪ್ಪ(65) ಶನಿವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮದ ಜಮೀನಿನಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಸಣ್ಣಪ್ಪ ನಿಧನಕ್ಕೆ ಶಾಸಕ ಹೆಚ್.ಪಿ.ಮಂಜುನಾಥ್, ರಾಜ್ಯ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘದ ಮಹಾಮಂಡಳ ಅಧ್ಯಕ್ಷೆ ಕೆ.ಲಲಿತಾ ಜಿ.ಟಿ.ದೇವೇಗೌಡ, ಜಿಪಂ ಮಾಜಿ ಸದಸ್ಯ ಕಟ್ಟನಾಯ್ಕ, ಗ್ರಾಪಂ ಅಧ್ಯಕ್ಷ ಶಿವಶಂಕರ್, ಎಪಿಎಂಸಿ ಮಾಜಿ ಅಧ್ಯಕ್ಷ ಸುಭಾಷ್, ಗ್ರಾಪಂ ಮಾಜಿ ಅಧ್ಯಕ್ಷ ದಾ.ರಾ.ಮಹೇಶ್, ದೇವರಾಜ್ ಸದಸ್ಯರಾದ ವೆಂಕಟೇಶ್ ಮತ್ತಿತರರು ಸಂತಾಪ ಸೂಚಿಸಿದ್ದಾರೆ.



ಪಾಪೇಗೌಡ

ಹುಣಸೂರು, ಮೇ 21(ಕೆಕೆ)– ನಗರದ ನ್ಯೂ ಮಂಜುನಾಥ್ ಬಡಾವಣೆ ನಿವಾಸಿ ಹಾಗೂ ತಾಲೂಕಿನ ಧರ್ಮಾಪುರ ಗ್ರಾಪಂ ಸದಸ್ಯ ಪಾಪೇಗೌಡ(63) ಶನಿವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಬೆಳಗ್ಗೆ 11 ಗಂಟೆಗೆ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಪ್ರಕಟಣೆ ತಿಳಿಸಿದೆ.



ಧಾರ್ಮಿಕ ಕಾರ್ಯದಿಂದ ಮಾತ್ರ ಶಾಂತಿ, ನೆಮ್ಮದಿ ಸಾಧ್ಯ

ಸುತ್ತೂರು ಮಠದ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ

ನಂಜನಗೂಡು, ಮೇ 21– ಗ್ರಾಮಗಳಲ್ಲಿ ಎಲ್ಲಾ ವರ್ಗದವರೂ ಸಾಮರಸ್ಯದಿಂದ ಜೀವಿಸಲು ಹಾಗೂ ಸುಖ, ಶಾಂತಿ, ನೆಮ್ಮದಿ ನೆಲೆಸಲು ಧಾರ್ಮಿಕ ಕಾರ್ಯಕ್ರಮ ಹಮ್ಮಿಕೊಳ್ಳುವುದು ಉತ್ತಮ ಎಂದು ಸುತ್ತೂರು ಮಠದ ಶ್ರೀಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಬಸವಟ್ಟಿಗೆ ಗ್ರಾಮದಲ್ಲಿ ನಡೆದ ಅಂಕ ಪ್ರತಿಷ್ಠಾಪನೆ ಹಾಗೂ ಧಾರ್ಮಿಕ ಸಭೆಯ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಗ್ರಾಮೀಣ ಭಾಗದಲ್ಲಿ ಭಕ್ತಿಭಾವ, ಧಾರ್ಮಿಕತೆ ಹೆಚ್ಚಾಗಿದೆ. ಜನರ ಧಾರ್ಮಿಕ ನಂಬಿಕೆಗೆ ಇಂತಹ ಕಾರ್ಯಕ್ರಮಗಳು ಸ್ಫೂರ್ತಿಯಾಗುತ್ತದೆ. ಮನುಷ್ಯ ದುಃಖ ದುಮ್ಮಾನಗಳಿಂದ ದೂರವಿರಿಸಿ ಸುಖ–ಸಂತೋಷ ಉಂಟಾಗುವಂತೆ ದೇವರನ್ನು ಪ್ರಾರ್ಥಿಸುತ್ತಾನೆ. ಗ್ರಾಮದಲ್ಲಿ ಸಾಮರಸ್ಯ ಮೂಡಲು ಎಲ್ಲರೂ ಕೂಡಿ ಮಾಡುವ ಇಂತಹ ಕಾರ್ಯ ಕ್ರಮಗಳು ಇತರರಿಗೆ ಸ್ಫೂರ್ತಿಯಾಗಬೇಕು ಎಂದರು.

ಮುಖ್ಯ ಭಾಷಣಕಾರ ಪ್ರೊಡಿ.ಎಸ್.ಸದಾಶಿವಮೂರ್ತಿ ಮಾತನಾಡಿ, ಅಂಕ ಪ್ರತಿಷ್ಠಾಪನೆ ಊರಿಗೆ ಶ್ರೇಯಸ್ಸು ತರುವ ಕಾರ್ಯಕ್ರಮವಾಗಿದ್ದು, ಎಲ್ಲರನ್ನೂ ಕೂಡಿಸುವ ಒಂದು ಆರೋಗ್ಯಕರ ಚಿಂತನೆ. ಇದನ್ನು ಮೂಢನಂಬಿಕೆ ಎನ್ನುವುದು ತಪ್ಪು. ಇದೊಂದು ಮೂಲ ನಂಬಿಕೆ. ನಾವೆಲ್ಲರೂ ಸಹ ನಂಬಿಕೆ ಮೇಲೆ ಜೀವನ ಸಾಗಿಸಬೇಕಾಗಿದೆ. ನಮ್ಮ ಪೂರ್ವಿಕರು ಯಾವ ಆಚರಣೆಗಳನ್ನು ಬಿಟ್ಟು ಹೋಗಿದ್ದಾರೋ ಅವುಗಳನ್ನು ನಾವು ಅನುಸರಿಸಿಕೊಂಡು ಹೋಗುವುದರಿಂದ ನಮ್ಮ ಬದುಕಿಗೆ ಸಾರ್ಥಕತೆ ಉಂಟಾಗುತ್ತದೆ ಎಂದರು.

ಸಮಾರಂಭದಲ್ಲಿ ಬಸವಟ್ಟಿಗೆ ಬಸವರಾಜು ಅವರ 'ಬಸವಟ್ಟಿಗೆ ಒಂದು ಪಕ್ಷಿನೋಟ' ಎಂಬ ಕೃತಿಯನ್ನು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಬಿಡುಗಡೆ ಮಾಡಿದರು.

ಮರಿಯಾಲ ಮಠದ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮಿ, ಸದಾಶಿವ ಸ್ವಾಮಿ, ಚೆನ್ನಬಸವ ಸ್ವಾಮಿ, ಷಡಕ್ಷರಿ ಸ್ವಾಮಿ, ಶರಣ ಸಂಗಮ ಮಠದ ನಾಗರಾಜೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಸಮಾರಂಭದಲ್ಲಿ ಪ್ರೊ.ಬಸವರಾಜಪ್ಪ, ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಮಹದೇವಪ್ಪ, ಪ್ರಕಾಶ್, ಮಾಧು, ಉದ್ಯಮಿ ಶ್ರೀಕಂಠಮೂರ್ತಿ, ಜಿಲ್ಲಾ ಪತ್ರ ಬರಹಗಾರ ಮಹದೇವಪ್ಪ, ಗುತ್ತಿಗೆದಾರ ಮಂಜು, ಪ್ರಕಾಶ್, ಸಿದ್ದಪ್ಪ, ಪ್ರೊ.ಮಾದಪ್ಪ, ಶಿವಣ್ಣ ಸೇರಿದಂತೆ 5 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.



ಹೆಚ್.ಡಿ.ಕೋಟೆಯಲ್ಲಿ ಮಧು ಜಿ.ಮಾದೇಗೌಡ ಪ್ರಚಾರ

ಹೆಚ್.ಡಿ.ಕೋಟೆ, ಮೇ 21(ಮಂಜು)– ಕಳೆದ 35 ವರ್ಷಗಳಿಂದ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲುವು ಸಾಧಿಸಿಲ್ಲ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಶಕ್ತಿ ತುಂಬಲು ಈ ಚುನಾವಣೆಯಲ್ಲಿ ಗೆಲುವು ಸಾಧಿಸಬೇಕಾಗಿದೆ ಎಂದು ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ. ಮಾದೇಗೌಡ ತಿಳಿಸಿದರು.

ಪಟ್ಟಣದಲ್ಲಿರುವ ಶಾಸಕ ಅನಿಲ್ ಚಿಕ್ಕಮಾದು ಅವರ ಕಚೇರಿಯಲ್ಲಿ ನಡೆದ ಮುಖಂಡರು ಮತ್ತು ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಮಾಜಿ ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಕೈ ಬಲಪಡಿಸಲು ಹಾಗೂ ರಾಜ್ಯದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರಲು ಪ್ರತಿಯೊಬ್ಬ ಕಾರ್ಯಕರ್ತರು ತಾವೇ ಅಭ್ಯರ್ಥಿ ಎಂದು ಭಾವಿಸಿ ಕಾರ್ಯ ನಿರ್ವಹಿಸಬೇಕು. ಶಿಕ್ಷಣ ಕ್ಷೇತ್ರ, ಪದವೀಧರರ ವಿಚಾರವಾಗಿ ನಮ್ಮ ಕುಟುಂಬ ಸಾಕಷ್ಟು ಹೋರಾಟ ಮಾಡಿದೆ ಈ ಬಾರಿ ನಾನು ಪದವೀಧರ ಕ್ಷೇತ್ರದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದು, ಚುನಾವಣೆಯಲ್ಲಿ ಗೆಲುವು ಸಾಧಿಸಿದರೆ ಪದವೀಧರರ ಧ್ವನಿಯಾಗಿ ಅವರ ಸಮಸ್ಯೆಗಳ ಬಗ್ಗೆ ಹೋರಾಟ ಮಾಡುತ್ತೇನೆ ಎಂದರು.

ಇದೇ 29ರಂದು ಮಾಜಿ ಸಂಸದ ಆರ್. ಧ್ರುವನಾರಾಯಣ್, ಎಂಎಲ್‌ಸಿ ತಿಮ್ಮಯ್ಯ, ಶಾಸಕ ಅನಿಲ್ ಚಿಕ್ಕಮಾದು ನೇತೃತ್ವದಲ್ಲಿ ಪಟ್ಟಣದಲ್ಲಿ ಬೃಹತ್ ಪ್ರಚಾರ ಸಭೆ ಆಯೋಜಿಸಲಾಗಿದೆ ಎಂದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿದರು. ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷಾ, ಸರಗೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಾದಪ್ಪ, ಮುಖಂಡರಾದ ಸೋಮೇಶ್, ನರಸಿಂಹಮೂರ್ತಿ, ರವಿ, ಸತೀಶ್‌ಗೌಡ, ಅಶೋಕ್, ಸೌಮ್ಯ, ಪ್ರಕಾಶ್, ಪರಶಿವಮೂರ್ತಿ, ಗಣೇಶಾಚಾರಿ, ವೆಂಕಟೇಶ್, ಶ್ರೀನಿವಾಸ್, ಮಂಜುನಾಥ್, ನಾಗರಾಜು, ಅಭಿಜಿತ್, ರಾಜು, ನಟರಾಜ್, ಕೆಂಡಗಣ್ಣಗೌಡ, ಸಿದ್ದರಾಮ, ನಯಾಜ್, ಜಯರಾಮ್, ಮರಿದೇವಯ್ಯ, ಮುರುಳಿ, ಪಟೇಲ, ಗಿರೀಶ, ರಾಜನಾಯಕ ಸೇರಿದಂತೆ ಇತರರಿದ್ದರು.



ರಾಜಕೀಯ ಒತ್ತಡಗಳನ್ನು ಬದಿಗಿರಿಸಿ ನೊಂದವರಿಗೆ ಸ್ಪಂದಿಸಿ

ಪೊಲೀಸ್ ಅಧಿಕಾರಿಗಳಿಗೆ ಎಡಿಜಿಪಿ ಅಲೋಕ್ ಕುಮಾರ್ ಸಲಹೆ

ಹುಣಸೂರು, ಮೇ 21(ಕೆಕೆ)– ಪೊಲೀಸ್ ಅಧಿಕಾರಿಗಳಿಗೆ ರಾಜಕಾರಣಿಗಳಿಂದ ಎಷ್ಟೇ ಒತ್ತಡ ಬಂದರೂ ಅದನ್ನು ಬದಿಗಿರಿಸಿ ನೊಂದವರ ಸಮಸ್ಯೆಗಳಿಗೆ ಸ್ಪಂದಿಸಿ ಅವರಿಗೆ ರಕ್ಷಣೆ ಕೊಡಬೇಕು ಎಂದು ಎಡಿಜಿಪಿ ಅಲೋಕ್ ಕುಮಾರ್ ಸಲಹೆ ನೀಡಿದರು.

ಹುಣಸೂರು ನಗರ ಪೊಲೀಸ್ ಠಾಣೆಯಲ್ಲಿ ಆಯೋಜಿಸಿದ್ದ ಜನಸಂಪರ್ಕ ಸಭೆಯಲ್ಲಿ ಮಾತನಾಡಿದ ಅವರು, ಸಮಸ್ಯೆಗಳನ್ನು ಹೊತ್ತು ಪೊಲೀಸ್ ಠಾಣೆಗೆ ಬರುವ ಬಡವರು, ದೀನದಲಿತರು, ಅಸಹಾಯಕ ಮಹಿಳೆಯರು ಮತ್ತು ನೊಂದ ಜನರಿಗೆ ಅಧಿಕಾರಿಗಳು ಕಾನೂನು ಮತ್ತು ಮಾನವೀಯತೆಯನ್ನು ಮೈಗೂಡಿಸಿಕೊಂಡು ರಕ್ಷಣೆ ಮತ್ತು ನ್ಯಾಯ ಕೊಡಿಸಲು ಶ್ರಮಿಸಬೇಕು ಎಂದರು.

ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರ ಸಮಸ್ಯೆಗಳಿಗೆ ಆದ್ಯತೆ ಮೇರೆ ಕೆಲಸ ಮಾಡಬೇಕು. ಎಂತಹ ಕಠಿಣ ಪರಿಸ್ಥಿತಿಯಲ್ಲೂ ಪೊಲೀಸ್ ಅಧಿಕಾರಿಗಳು ತಮ್ಮ ನಿಷ್ಠೆ, ಪ್ರಾಮಾಣಿಕತೆಯನ್ನು ಮೈಗೂಡಿಸಿ ಕೊಂಡು ನೊಂದ ಜನರ ಸಮಸ್ಯೆಗಳನ್ನು ಆಲಿಸಬೇಕು ಎಂದರು.

ಗ್ರಾಮೀಣ ಪ್ರದೇಶಗಳಲ್ಲಿ ಅಕ್ರಮ ಸಾರಾಯಿ, ಮಾದಕ ವಸ್ತುಗಳ ದಂಧೆಗಳಿಗೆ ಕಡಿವಾಣ ಹಾಕಬೇಕು. ಬಡಜನರು, ದಲಿತರು ಭೂ ಸಮಸ್ಯೆಗಳು ಬಂದಾಗ ತಾಲೂಕು ಕಂದಾಯಾಧಿಕಾರಿಗಳ ಜೊತೆ ಸಮನ್ವಯ ಮಾಡಿಕೊಂಡು ಎರಡೂ ಇಲಾಖೆಗಳು ಜಂಟಿ ಯಾಗಿ ಭೂ ಸಮಸ್ಯೆಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳಬೇಕು ಎಂದರು.

ಸಭೆಯಲ್ಲಿ ಮನವಿ ಸಲ್ಲಿಸಿ ಮಾತನಾಡಿದ ದಸಂಸ ಮುಖಂಡ ನಿಂಗರಾಜ್ ಮಲ್ಲಾಡಿ, ಗ್ರಾಮೀಣ ಪ್ರದೇಶದ ಕೆಲವು ಹಳ್ಳಿಗಳಲ್ಲಿ ಇಂದಿಗೂ ಅಸ್ಪೃಶ್ಯತೆ, ಜಾತೀಯತೆ ಇದ್ದು, ಕೆಲವು ಹಳ್ಳಿಗಳಲ್ಲಿ ದಲಿತರಿಗೆ ದೇವಾಲಯಗಳಿಗೆ, ಕ್ಷೌರದ ಅಂಗಡಿಗಳಿಗೆ, ಹೋಟೆಲ್‌ಗಳಿಗೆ ನಿರ್ಬಂಧಿಸಲಾಗಿದೆ ಎಂದರು.

ಇದರಿಂದ ಆ ಗ್ರಾಮದ ನೊಂದ ದಲಿತರು ತುಂಬಾ ಆತಂಕದಲ್ಲಿ ಬದುಕುವ ಸ್ಥಿತಿ ಇದೆ ಮತ್ತು ಕೆಲವು ದೌರ್ಜನ್ಯ ಪ್ರಕರಣಗಳಾದಾಗ ದಲಿತರ ಮೇಲೆಯೇ ಕೌಂಟರ್ ಕೇಸುಗಳು ಹಾಕಲಾಗುತ್ತಿದೆ. ಪರಿಶಿಷ್ಟ ಜಾತಿಯ ಕಾಲೋನಿ ಗಳಲ್ಲಿ ಅಕ್ರಮ ಸಾರಾಯಿ ಮಾರಾಟ ಹೆಚ್ಚಾಗಿದ್ದು, ಇದರಿಂದ ದಲಿತ ಕುಟುಂಬಗಳು ತತ್ತರಿಸುತ್ತಿವೆ ಎಂದರು.

ಆದಿ ಜಾಂಬವ ಸಂಘದ ಡಿ. ಕುಮಾರ್ ಮಾತನಾಡಿ, ಹುಣಸೂರು ತಾಲೂಕಿನಲ್ಲಿ ಬಾಲ್ಯ ವಿವಾಹ ಮತ್ತು ಅಪ್ರಾಪ್ತ ಹೆಣ್ಣುಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯಗಳು ಹೆಚ್ಚಾಗುತ್ತಿದ್ದು, ಫೋಕ್ಸೋ ಕಾಯ್ದೆ ಪ್ರಕರಣಗಳು ಹೆಚ್ಚಾಗುತ್ತಿದೆ. ಈ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ಕ್ರಮಕೈಗೊಳ್ಳಬೇಕು ಎಂದರು. ರತ್ನಪುರಿ ಪುಟ್ಟಸ್ವಾಮಿ, ಆದಿ ಜಾಂಬವ ಸಂಘದ ಅಧ್ಯಕ್ಷ ಶಿವಣ್ಣ ಹಾಗೂ ಬಲ್ಲೇನಹಳ್ಳಿ ಕೆಂಪರಾಜು ಮಾತನಾಡಿದರು.

ಇವರುಗಳ ದೂರನ್ನು ಆಲಿಸಿದ ಅಲೋಕ್ ಕುಮಾರ್ ಅವರು ಈ ಎಲ್ಲಾ ಸಮಸ್ಯೆ ಮತ್ತು ದೂರುಗಳಿಗೆ ಸ್ಪಂದಿಸಿ ಕ್ರಮ ಜರುಗಿಸುವಂತೆ ಸೂಚಿಸಿದರು.

ಸಭೆಯಲ್ಲಿ ದಕ್ಷಿಣ ವಲಯದ ಐಜಿಪಿ ಪ್ರವೀಣ್ ಸೂದ್, ಎಸ್.ಪಿ. ಚೇತನ್ ಕುಮಾರ್, ಅಡಿಷನಲ್ ಎಸ್.ಪಿ. ಶಿವಕುಮಾರ್, ಡಿವೈಎಸ್ಪಿ ರವಿಪ್ರಸಾದ್, ಹುಣಸೂರು ಪಟ್ಟಣದ ಇನ್ಸ್‌ಪೆಕ್ಟರ್ ಶ್ರೀನಿವಾಸ್, ಗ್ರಾಮಾಂತರ ಠಾಣೆಯ ಅಧಿಕಾರಿ ಚಿಕ್ಕಸ್ವಾಮಿ, ಬಿಳಿಕೆರೆ ಠಾಣಾಧಿಕಾರಿ ರವಿಕುಮಾರ್ ಹಾಜರಿದ್ದರು.




ಮುಂಬೈಗೆ ಜಯ: ಪ್ಲೇ ಆಫ್‌ಗೆ ಆರ್‌ಸಿಬಿ ಎಂಟ್ರಿ

ಮುಂಬೈ, ಮೇ 21– ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ ಮುಂಬೈ ಇಂಡಿಯನ್ಸ್ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 5 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಈ ಮೂಲಕ ಮುಂಬೈ ಗೆಲುವಿನೊಂದಿಗೆ ಟೂರ್ನಿಗೆ ವಿದಾಯ ಹೇಳಿದರೇ, ಡೆಲ್ಲಿ ಸೋಲಿನೊಂದಿಗೆ ಗುಡ್ ಬೈ ಹೇಳಿದೆ. ಅತ್ತ ರಾಯಲ್ ಚಾಲೆಂಜರ್ಸ್ ಬೆಂಗಳೂರು ಪ್ಲೇ ಆಫ್‌ಗೆ ಲಗ್ಗೆ ಹಾಕಿದೆ.



ಇಲ್ಲಿನ ವಾಂಖೇಡೆ ಮೈದಾನದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 159 ರನ್ ಗಳಿಸಿದರು. ತಂಡದ ಪರ ಪೃಥ್ವಿ ಷಾ 24, ರಿಷಬ್ ಪಂತ್ 39, ಸರ್ಫರಾಜ್ ಖಾನ್ 10, ರೋವ್ಮನ್ ಪೊವೆಲ್ 43, ಅಕ್ಷರ್ ಪಟೇಲ್ 19 ರನ್ ಗಳಿಸಿದರು. ಮುಂಬೈ ಪರ ಬೂಮ್ರಾ 3, ರಮಣ್‌ದೀಪ್ ಸಿಂಗ್ 2, ಮರ್ಕಂಡೆ ಹಾಗೂ ಡೇನಿಯಲ್ ಸ್ಯಾಮ್ಸ್ ತಲಾ ಒಂದೊಂದು ವಿಕೆಟ್ ಪಡೆದರು. 160 ರನ್‌ಗಳ ಗುರಿ ಬೆನ್ನತ್ತಿದ ಮುಂಬೈ 19.1 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ ಗೆಲುವಿನ ನಗೆ ಬೀರಿತು. ತಂಡದ ಪರ ಇಶನ್ ಕಿಶನ್ 48, ಡೇವಾಲ್ಡ್ ಬ್ರೇವಿಸ್ 37, ತಿಲಕ್ ವರ್ಮಾ 21, ಟೀಮ್ ಡೇವಿಡ್ 34, ರಮಣ್‌ದೀಪ್ ಸಿಂಗ್ 13 ರನ್ ಗಳಿಸಿದರು. ಡೆಲ್ಲಿ ಪರ ಅನ್ರಿಚ್ ನಾರ್ಟ್ಜೆ, ಶಾರ್ದೂಲ್ ಠಾಕೂರ್ ತಲಾ 2, ಕುಲದೀಪ್ ಯಾದವ್ 1 ವಿಕೆಟ್ ಪಡೆದರು. ಬೂಮ್ರಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಎಸ್‌ಎಸ್‌ಎಲ್‌ಸಿ: ಮಹೇಶ್ವರಿಗೆ ಅತ್ಯುನ್ನತ ಶ್ರೇಣಿ



ಮಲ್ಕುಂಡಿ, ಮೇ 21(ಚನ್ನಪ್ಪ)– ನಂಜನಗೂಡು ತಾಲೂಕಿನ ಮಲ್ಲಹಳ್ಳಿ ಗ್ರಾಮದ ನಾಗೇಶ್ ಎಂಬುವರ ಪುತ್ರಿ ಮಹೇಶ್ವರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 579 ಅಂಕ ಪಡೆದು ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ.


"ಐತಿಹಾಸಿಕ ಶ್ರೀರಂಗಪಟ್ಟಣ ತಾಲೂಕಿನ ಅಭಿವೃದ್ಧಿ ವಿಷಯದಲ್ಲಿ ಮೈಲಿಗಲ್ಲು ಸ್ಥಾಪಿಸಿದ ಮಾಜಿ ಶಾಸಕರಾದ ಶ್ರೀಯುತ ರಮೇಶ್ ಬಂಡಿಸಿದ್ದೇಗೌಡರಿಗೆ 55ನೇ ಹುಟ್ಟು ಹಬ್ಬದ ಸಂದರ್ಭದಲ್ಲಿ ನಮ್ಮ ಹೃದಯಪೂರ್ವಕ ಅಭಿನಂದನೆಗಳು ಹಾಗೂ ಶುಭಾಶಯಗಳು. ಅವರಿಗೆ ಆಯುರಾರೋಗ್ಯ-ಭಾಗ್ಯ, ಉನ್ನತ ಅಧಿಕಾರ ಲಭಿಸಲಿ. ಅವರ ಸೇವೆ ಸದಾ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಜನತೆಗೆ ಮುಂದೆಯೂ ದೊರಕಲಿ ಎಂದು ಚಾಮುಂಡೇಶ್ವರಿಯಲ್ಲಿ ನಮ್ಮ ಪ್ರಾರ್ಥನೆ."
ಎ.ಬಿ.ರಮೇಶ್ ಬಂಡಿಸಿದ್ದೇಗೌಡ ರವರಿಗೆ
55 ನೇ ವರ್ಷದ ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು:
ರಮೇಶ್ ಬಂಡಿಸಿದ್ದೇಗೌಡ
ಅಭಿಮಾನಿ ಬಳಗ,
ಶ್ರೀರಂಗಪಟ್ಟಣ ಕ್ಷೇತ್ರ, ಮಂಡ್ಯ ಜಿಲ್ಲೆ.